ಶ್ರೀ ಬಿ. ಹುಚ್ಚೇಗೌಡ.—ಪ್ರೋಗ್ರಾಮನ್ನು ಈಗ ಹೇಳಿದರೆ ಹೇಗೆ?

Mr. SPEAKER.—I have said it yesterday evening.

Sri J. MOHAMED IMAM.—It was agreed the other day when the Food Minister was here that he would set apart one full day to discuss the question of distress.

Mr. SPEAKER.—He said so. Immediately another Hon'ble Member of this House pointed out that there is a resolution relating to that very subject-matter, that is No. 1. In view of that, one day for that purpose is not necessary.

Sri J. MOHAMED IMAM.—So the resolution will take up one full day.

Mr. SPEAKER.—We will see.

Sri J. MOHAMED IMAM.—According to the order of business here, we are concerned only with the Appropriation Bill. We are not prepared to move non-official resolutions and we have not studied them. So, after the Appropriation Bill is over to-day, we will have to take non-official resolutions to-morrow. The order of business for to-day provides only for the discussion of the Mysore Appropriation Bill.

Mr. SPEAKER.—You were particular about the first resolution.

Sri J. MOHAMED IMAM.—To-day we cannot take it up. To-day we will have discussion of the Appropriation Bill only.

Mr. SPEAKER.—I may give an opportunity to those that are ready to go on with the resolution.

Sri J. MOHAMED IMAM.—According to the order of business, only Appropriation Bill can be taken up to-day.

Mr. SPEAKER.—With the implied permission of the House, this change was announced yesterday.

Sri Mulka GOVINDA REDDY (Chitaldrug).—It should have been got printed. Copies of the order of business were distributed to us this morning and for to-day it has been put down that the Mysore Appropriation Bill will be taken up and no other business has been put up for today.

ಶ್ರೀ ಬಿ. ಹುಚ್ಚೇಗೌಡ.—ಪ್ರಶ್ನೋತ್ತರಗಳನ್ನೂ ಕೂಡ 9 ಘಂಟೆಯೊಳಗೆ ಕೊಡುವುದಿಲ್ಲ. 11 ಘಂಟೆಗೆ ನಮ್ಮ ಕೈಗೆ ಕೊಟ್ಟರೆ ನಾವು ಹೇಗೆ ನೋಡಿಕೊಳ್ಳುವುದು?

Mr. SPEAKER.—So far as questions are concerned, I invite your attention to Rule 29 (1) that the list of questions and answers shall be made available not later than one hour before the commencement of the meeting.

ಶ್ರೀ ಬಿ. ಹುಚ್ಚೇಗೌಡ.—ಪ್ರೋಗ್ರಾಂ ಬದಲಾಯಿಸಬೇಕಾದರೆ ಒಂದು ದಿನ ಮುಂಚೆಯೇ ತಿಳಿಸಬೇಕೆಂದಿದೆ.

Mr. SPEAKER.—I announced it last evening. After this Bill is passed, we will consider whether it would be desirable for the House to proceed with non-official resolutions or to adjourn. We will now take up the Appropriation Bill.

Sri L. SIDDAPPA.—How about other Bills.

Mr. SPEAKER.—I do not know.

Sri K. HANUMANTHAIYA (Chief Minister).—No time need be taken on this discussion because I have said that we may proceed to non-official business.

Mr. SPEAKER.—The members want to know whether other Bills will be introduced so that they may adjust their programme.

Sri K. HANUMANTHAIYA.—No. I stated that after the Appropriation Bill, non-official business will be taken up and to-morrow the House will conclude its non-official work. I need not say afresh that we are not introducing any other Bill.

Mr. SPEAKER.—It is understood.

MYSORE APPROPRIATION (No. 3) BILL, 1952.

Introduction.

Sri K. HANUMANTHAIYA.—I beg to introduce the Mysore Appropriation (No. 3) Bill, 1952, which was published in the *Mysore Gazette* Extraordinary dated 23rd October 1952 under rule 48 of the Rules of Procedure and Conduct of Business in the Mysore Legislative Assembly.

Motion to consider.

Sri K. HANUMANTHAIYA.—I move.—

"That the Mysore Appropriation (No. 3) Bill, 1952, be taken into consideration."

Mr. SPEAKER.—Motion moved.—

"That the Mysore Appropriation (No. 3) Bill, 1952, be taken into consideration."

Sri J. MOHAMED IMAM (Jagalur).—I have been making budget speeches ever since I entered this Legislature, so much so that I am tired of making budget speeches and the Government and the Government Members are tired of making budget speeches and much more so my friend Sri T. Mariappa.

Sri T. MARIAPPA (Mysore City North).—I do not know why the Hon'ble Member makes a reference to me. I have heard Sri Imam speaking a number of times. Perhaps he loves to hear his own voice.

***Sri J. MOHAMED IMAM.**—Whenever I make a budget speech Sri Mariappa is always nervous, he always feels nervous and he does not want to face me. Anyhow it is my duty to bring salient features to the notice of Government. Perhaps there may be some repetitions. These repetitions are necessary because the Government have not taken note of our remarks and have not taken steps to act according to them and I can say with confidence that if the Government had acted according to some of our advice or suggestions, the financial position would have certainly been much better than what it is to-day.

The first thing I want to point out to the Finance Minister, who unfortunately is absent, is this. While giving figures they do not give correct figures. Their calculations are wrong. In the Budget that was placed before this House in the April session, it was pointed out that the State has to face a deficit of Rs. one crore. But according to the Appropriation Act which was passed, we find that the normal expenditure is Rs. 22,91,00,000 as against normal revenue of Rs. 20 crores. So according to the Government figures themselves, the deficit is about Rs. 3 crores and these full figures were not given in the actual budget. According to the Appropriation Act, the deficit is Rs. 2,91,00,000 whereas according to the Budget it is only of rupees one crore. These figures are rather misleading and I may say Government do not place before the House all the facts and figures.

Again, I must point out that the total expenditure we voted during the budget session is Rs. 29,69,00,000 as against a normal expenditure of Rs. 20 crores in the budget, and these Rs. 29,69,00,000 we have voted from the Consolidated Fund. I have been pointing out from the beginning that when we are asked to give a certain amount of money, we must also know from which Fund we must give and from which source and also what is the position of the Consolidated Fund, whether this amount is available in that Fund. Last time alone I raised this question. We have voted Rs. 29,69,00,000. Where is that Fund?

What is the position of the Consolidated Fund and how much does it contain? Every fund must contain certain amount. After meeting this expenditure, I want to know whether it is on the plus side or on the minus side. The Government have been refusing to give details of the Consolidated Fund. They must tell us, after meeting the expense of Rs. 29 crores, what the amount remaining is over. On the other hand, I can state that our normal receipts are Rs. 20 crores and our expenditure which has been budgeted is Rs. 29 crores. So, how to meet the balance of Rs. 9 crores is the question. These are very serious matters. I am going to challenge the Government and I am going to charge the Government that they are placing before us incorrect figures, figures without facts, and that they have been misleading us. It is because of this that the Government have been in trouble. They must explain to us. As against normal revenue of Rs. 20 crores, our expenditure is Rs. 29 crores. How to meet Rs. 9 crores extra? Practically, it is a deficit budget unless you get the amount from the Centre, unless you draw it from the Savings Bank Deposit

or unless you draw it from Insurance fund or unless you borrow it. Taking the normal revenue, at the last budget meeting, the deficit was Rs. 3 crores. It was borne out by the facts. According to Appropriation Act, it is Rs. 3 crores; whereas the figure you showed was one crore. It is absolutely incorrect. When you have budgeted for an expenditure of Rs. 29 crores and for a normal income of Rs. 20 crores, the deficit comes to nine crores, which deficit you have to meet from Savings Bank Deposits, Insurance Fund or Closing Balance or Treasury Bills. Now, can you meet this extra item of expenditure from the deposits or from funds? The Chief Minister has admitted in his opening speech at the time of presenting the Budget that the funds are extinct. As against a sum of Rs. 31 crores which is a liability on the Government, you have got only Rs. 15 crores of securities. As against Rs. 15 crores of securities, your liability comes to Rs. 35 crores plus Rs. 16 crores of State Loan bonds, deposits and other things. So, your position is like this: as against a normal income of Rs. 20 crores, you have budgeted at the time of regular budget for an expenditure of Rs. 29 crores and that Rs. 9 crores extra expenditure has to be balanced. That is the financial position. Now we are asked to vote another Rs. 1 crore and 88 lakhs. Where does it come from? We are asked to vote it from the Consolidated Fund. So, I would like to know what the position of the Consolidated Fund is. If you ask me, I say there is no Consolidated Fund. It may be in name, but no amount is available. If you vote this Rs. 1 crore and 88 lakhs, this amount plus a deficit of Rs. 3 crores according to Appropriation Bill come to nearly 5 crores deficit according to your own figures.

Sri D. DEVARAJ URS (Hunsur).—Is it Rs. 5 crores or Rs. 9 crores?

Sri J. MOHAMED IMAM.—If you take capital expenditure into account, it will be Rs. 9 crores. If you take normal expenditure and normal income then the deficit will be Rs. 5 crores. So, Sir, our financial position is very threatening and very critical. In spite of the assurance given by the Government and by the Chief Minister that they are going to effect economy, they are not going to improve the resources. I find no improvement. The Consolidated Fund is exhausted. We, the Members, have to vote that amount. How to vote that amount? I can give Rs. 20 from my pocket provided I have got it in my pocket. If the pocket is empty, how can I give that amount? Without knowing what amonts are available, how can we vote? It is impossible to give this amount to the Government. What the Government will do is this: they will utilise the amount from the Insurance Fund or from District Board Deposits or Saving Banks Deposits and that is the only way.

Secondly, they have shown in the budget a closing balance of Rs. 3 crores which figures I do not admit. They will have spent all this from day to day collections. I must point out that our financial position is such that it is impossible for our Government to take any development work or adopt any development policy or to undertake any scheme which is calculated for the good of the State. I was very hopeful that the Minister would effect economy at least to a certain extent. No doubt, in the beginning he made a show of effecting economy. He said that he is effecting economy of expenditure to the extent of Rs. 30 lakhs. On the other hand, there is increase in expenditure. Of late, I do not hear anything about economy. On the other hand, I find a tendency to increase expenditure in every item. I am not going to take a long time. I again want to impress on the Government and on the Financial Secretary, who is the *sutradari* in all such cases, the necessity of taking effective and urgent steps to see that the position of our State is improved.

What is our position now? We are begging; for every thing, we must ask the Centre. It is such a humiliating position. Once, Mysore was in such an affluent position that perhaps we were in a position to lend other Governments. We have faced famine and other situations bravely and boldly, but now for every item of expenditure,

(SRI J. MOHAMED IMAM)

we have to go on begging; to relieve distress in the State, we have to beg the Central Government; to carry on any development work, we have to beg the Central Government; to carry on irrigation works, we have to beg the Centre. We cannot stand on our own legs. This state of affairs should not go on for long. You must find out new sources of revenue and cut down expenditure mercilessly. You must see that our expenditure is well within our revenue. With these remarks, I say that we cannot approve of this Appropriation Bill for the simple reason that there are no funds available to sanction these amounts, however justifiable they may be.

Sri M. LINGANNA (Nanjangud).—It is rather dismal that after a lapse of 4 months from the Budget Session, we have been confronted with supplementary grants and are asked to vote for them. No doubt the Government have got a right to place supplementary grants before us and take our consent. But what I am afraid is that these grants have got a tale of their own. In regard to the financial position of the State, we were told in the last session itself by the Finance Minister that the State Budget was a deficit Budget to the tune of nearly one crore and odd rupees. We were also told that he was not at all in a mood to enhance the resources of the finances of the State on the ground that such taxation would not be welcomed by the people. And still we have been faced with these supplementary grants. The Finance Minister has no other way but to find out some other resources to fill up the gap between the actuals and the budget estimates. I say this, not with any regret, but with all caution and care, because if this particular state of affairs were allowed to continue in regard to the finances of the State, a day may come when probably the whole Budget House will collapse to the ground. Sir, here, there are several items for which new grants have been asked. Firstly, they have asked for Land Revenue to the tune of Rs. 2 lakhs and 88 thousand, and in the explanatory note they have given for this particular item, they say it is required to disburse potgi and other allowances to the village officers. I am afraid that, before the Budget was estimated and placed before us during the last session, they had enough time and they could have included this particular item in the original budget itself. This shows that the state of affairs in regard to the finances seems to be not all well. In regard to Loans and Advances by the State Government, the Finance Minister was pleased to say that wherever he went all over the State, he was confronted with petitions and requests by the local bodies to advance them more grants so that they might be in a position to serve the local needs. The Chief Minister was pleased to say that the supplementary grant to the extent of Rs. 58 lakhs was necessitated by such requests from the local bodies to grant loans. All of us were hopeful that the Bill in regard to the local bodies that was before us would be passed and the local bodies like the District Boards and Village Panchayets would be re-established. But the Bill, most probably, will not be taken up during this session......

Sri L. SIDDAPPA (Chennagiri).—Why 'most probably'? The Government have made a statement that it will not be taken up.

Sri M. LINGANNA.—Probably the fate of District Boards also is hanging under the decision of a few of my friends and I also heard that the District Boards would be given a go by. So, Sir, in view of the opinion that is prevalent in regard to the retention or otherwise of the District Boards the addition of this particular item is rather unnecessary, I straightaway say that the Finance Minister, at this juncture at least, must take counsel from experts in regard to finances and devise ways and means by which the State Treasury can be filled up and the Budget Estimates can be balanced.

Sri K. PATTABHIRAMAN (Kolar).—Mr. Speaker, as this happens to be the only intermediate opportunity to make an observation or two on the budgetary position of the State, and I would not

get, and perhaps this House will not get, another opportunity until we meet some time next year for the Budget Session, I would like to make some remarks. There are two or three suggestions that I would like to throw out on this very important occasion. One is, the time has come, considering the finances of the State and the position that we occupy, as has been urged in this House more than once and perhaps outside too, the time has certainly come when we have got to consider the effect of the financial integration on the State. I really expected that this occasion, when this Reapproriation Bill came up before us, would have been seized as the fittest opportunity by the Government to tell us what had happened since we last met when this suggestion was seriously urged on the floor of this House. In fact, it was suggested then that a Committee was just around us at the time, that very soon after the Budget Session, the question would be taken up seriously and the Governments both there and here would come to grips with this important question and that the whole question of financial integration would be reviewed and reconsidered, and as such we were happy that the whole thing would be reconsidered and the future would be explored and exploited by both the Governments. I did not really expect that we would not be taken into their confidence. Probably, no final decisions have yet been taken. Nevertheless, I am making the suggestion, because it looks to me and I really share the alarm and fear that the Leader of the Opposition has on this matter. Our budgetary position may be allright today, our budgetary methods may be allright. But the future is certainly imperilled and we could not say that every thing would be allright. To use a figurative language, it is something like getting ourselves on a moving ice-berg which is slowly but surely melting away. That is the strain, and that is the security we would be sharing if we do not face the facts. One important suggestion made by two Hon'ble Members of this House must be borne in mind. I think, therefore, fresh appointments must have to stop for some time. Probationary appointments and a number of other appointments must be stopped. I know any Government would be anxious to have patronage and doles in its hands. But you must restrain yourself, I should say, for some time considering the finances of the State as they are. You must over-restrain yourself and overcome that temptation of having too many appointments. In fact we complimented the Finance Minister when he used the word 'economy' in place of retrenchment while presenting the Budget Estimates to this House. We do not know how far the Government have progressed. I expect it has progressed sufficiently satisfactorily to heave a sigh of relief. Therefore, on this occasion, I am making this suggestion with very great stress and with very great earnestness behind it, and I expect the Government to give an assurance in the matter so that when we go back to our constituencies and for a period of 5 or 6 months before we meet again, we can say with confidence that the soundness of the Budgetary position of the State has been secured and strengthened to some extent and we may rest there without any anxiety. I do not find that tenor and temper in the Budgetary position as it is disclosed to us today. I feel that the whole question has to be reconsidered. Until that is done, the future is certainly imperilled and the next five years may be very difficult. It may be very easy for you to come and tell us: "You made appropriations; you have voted for the appropriation of the items that have been placed before you; we have your approval and your support and if in consequence of that we are bound to spend more, the only way in which that could be done is through fresh taxation and fresh burdens on the people." The burden on the taxpayer in Mysore State, I must say, has reached its limit; it is not possible to further load him and put any additional weight upon him. It would not be just or proper. Therefore, in view of that apprehension for

(SRI K. PATTABHIRAMAN)

the future, if you really assure me and assure the House that in spite of the fresh burdens that you are throwing upon yourself, upon us and upon the country, you do not really mean to resort to fresh taxation in this year, nobody would be more happy and no one would be more willing to congratulate you upon that than my humble self. I do not want to repeat the sentiments in the eminent and excellent way in which my two friends who took part in this debate have expressed themselves. But I share their fears and I share their apprehensions and it is with those apprehensions and fears in my mind that I urge on the Government on this occasion that they should reconsider the whole position with a view to see that these apprehensions are dispelled. If the position is properly understood and properly nourished and if you harness your efforts within the next six months or more in such a way as to leave us without fresh bnrdens, I would be glad, but I do not see any hope of that happening in view of the budgetary position that has been presented to us. With these remarks, I feel that the caveats will be taken in the spirit in which they are offered and the whole thing will be considered carefully.

2 P.M.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಅಪ್ರೋಪ್ರಿಯೇಷ್ರ್ ಬಿಲ್ಲಿನ ಮೂಲಕ ಒಂದು ಕೋಟಿ ಎಂಭತ್ತಾರು ಲಕ್ಷ ರೂಪಾಯಿ ಕನ್ಸಾಲಿಡೇಟೆಡ್ ಫಂಡಿನಿಂದ ಖರ್ಚಾಗಬೇಕಾಗಿದೆ. ಈ ವಿಷಯದಲ್ಲಿ ಹಿಂದೆ ಹೇಳಿದ ನನ್ನ ಮಾನ್ಯ ಮಿತ್ರರ ಅಭಿಪ್ರಾಯವನ್ನು ಪೂರ್ಣವಾಗಿ ಅನುಮೋದಿಸುತ್ತೇನೆ. ಮುಖ್ಯವಾಗಿ, ಹಿಂದೆ ಮೈಸೂರಿನ ಆರ್ಥಿಕ ಭದ್ರತೆ ಎಷ್ಟು ಸುರಕ್ಷಿತವಾಗಿತ್ತೋ ಈಗ ಅದು ಅಷ್ಟು ಕೀಳುದರ್ಜೆಗೆ ಬಂದಿದೆ. ಒಟ್ಟಿನಲ್ಲಿ ಕನ್ಸಾಲಿಡೇಟೆಡ್ ಫಂಡಿನಿಂದ ಇಷ್ಟು ಹಣ ಒದಗುತ್ತದೆಯೆ, ಹಾಗೆ ಒದಗಿಸಬೇಕಾದರೆ ಹೊಸದಾಗಿ ಯಾವ ತೆರಿಗೆ ನಮ್ಮನ್ನು ಕಾದುಕೊಂಡಿದೆಯೋ ಎಂಬ ಭಯ ನಮ್ಮ ಮನಸ್ಸಿನಲ್ಲಿದೆ. ಇಂಥ ಅವ್ಯವಸ್ಥೆಗೆ, ನನಗೆ ತಿಳಿದ ಮಟ್ಟಿಗೆ, ಎರಡು ಕಾರಣಗಳಿವೆ. ಮೊದಲನೆಯ ಕಾರಣ ನಮ್ಮ ಸಂಸ್ಥಾನದ ಆರ್ಥಿಕ ವ್ಯವಸ್ಥೆ, ಕೇಂದ್ರ ಸರ್ಕಾರದೊಡನೆ ವಿಲೀನೀಕರಣವಾಗಿ ಆಗಿರುವ ಒಪ್ಪಂದ. ಎರಡನೆಯದು ಈ ಸರ್ಕಾರ ಅಧಿಕಾರ ವಹಿಸಿಕೊಂಡಮೇಲೆ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಮೇಲೆ, 1947 ನೆಯ ಇಸವಿಯಿಂದ ನಡೆಸಿದ ಕೆಲವು ದುಂದು ವೆಚ್ಚಗಳ ಪರಿಣಾಮ. ಆರ್ಥಿಕ ವಿಲೀನೀಕರಣವಾದಮೇಲೆ ಕೇಂದ್ರ ಸರ್ಕಾರಕ್ಕೆ ಸೇರಿದ ಇಲಾಖೆಗಳಿಂದ ಹಿಂದೆ ನಮಗೆ ಎಷ್ಟು ಉತ್ಪತ್ತಿ ಬರುತ್ತಿತ್ತು, ಈಗ ಎಷ್ಟು ಉತ್ಪತ್ತಿ ಬರುತ್ತಿದೆ, ಇದಕ್ಕನುಗುಣವಾಗಿ ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುತ್ತಿದೆಯೆ ಎಂಬುದನ್ನು ವಿಮರ್ಶೆ ಮಾಡಬೇಕು. 1946-47 ನೆಯ ಸಾಲಿನ ಉತ್ಪತ್ತಿಯ ಮೇಲೆ ಲೆಕ್ಕಹಾಕಿ ಅವರು ನಮಗೆ ಕೊಡಬೇಕಾದ ಕಾಂಟ್ರಿಬ್ಯೂಷನ್ ಹಣವನ್ನು ಐದು ವರ್ಷಗಳಲ್ಲಿ ಕೊಡುತ್ತಾರೆ. ಇದು 365 ಲಕ್ಷ ರೂಪಾಯಿ. ಅದನ್ನು ಈವರೆಗೂ ಕೊಡುತ್ತಿದ್ದಾರೆ. ಇದಕ್ಕೆ ಬದಲಾಗಿ ಅವರಿಗೆ ನಮ್ಮ ಮೈಸೂರು ದೇಶದಿಂದ ಎಷ್ಟು ಹಣ ಹೋಗುತ್ತಿದೆಯೆಂದು ನೋಡಿದರೆ—ಒಂದೇ ಒಂದು ಇಲಾಖೆಯನ್ನು ಉದಾಹರಣೆಗೆ ತೆಗೆದುಕೊಳ್ಳೋಣ—ಎಕ್ಸೈಜು ಇಲಾಖೆಯಿಂದ 80-85 ಲಕ್ಷ ರೂಪಾಯಿ 1946-47 ರಲ್ಲಿ ಬರುತ್ತಿದ್ದದು ಈಗ ಈ ವರ್ಷ 4 ಕೋಟಿ 30 ಲಕ್ಷ ರೂಪಾಯಿ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ. ಈ ಒಂದು ಇಲಾಖೆಯಿಂದ ಅವರಿಗೆ ಬರುವ ಉತ್ಪತ್ತಿ ಕೂಡ ಅವರಿಂದ ನಮಗೆ ಬರುತ್ತಿಲ್ಲ.

ಇನ್ನು ಇನ್ಕಮ್ ಟ್ಯಾಕ್ಸ್ ಇಲಾಖೆಯಿಂದ ಆಗ ಎಷ್ಟು ವರಮಾನ ಬರುತ್ತಿತ್ತು, ಈಗ ಎಷ್ಟು ಬರುತ್ತಿದೆ! ಪೋಸ್ಟೇಜು ಇಲಾಖೆಯಿಂದ ನಮ್ಮ ಮೇಲೆ ಎಷ್ಟು ಖರ್ಚು ಬೀಳುತ್ತಿದೆ! ಬೇರೆ ಇಲಾಖೆಗಳಾದ ಟೆಲಿಗ್ರಾಫ್ ವಗೈರೆ ಇಲಾಖೆಗಳಿಂದ ಎಷ್ಟೋ ವರಮಾನಗಳನ್ನು ಹೆಚ್ಚಿಸಿಕೊಂಡು ಅವರು ಆ ಹಣವನ್ನೆಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಸರ್ಕಾರದವರು ಆ

ಕಡೆ ಗಮನ ಕೊಡುತ್ತಿಲ್ಲ. ನಮ್ಮ ಸರ್ಕಾರದ ಅಸಮರ್ಥತೆ ಇದರಿಂದ ಎದ್ದು ಕಾಣುತ್ತದೆ. ಏಕೆಂದರೆ, ನಾವು ಕೊಡತಕ್ಕ ಕಂದಾಯ ಹೊರಗೆ ಹೋಗುತ್ತಿದೆ; ಅದಕ್ಕೆ ಸರಿಯಾದ ಪ್ರತಿಫಲ ಬರುವುದಿಲ್ಲ. ಇದರ ಜೊತೆಗೆ ನಮಗೆ ಹೊಸ ಕಂದಾಯದ ಹೊರೆ ಬೇರೆ! ಹೊಸದಾಗಿ ಕೋಟ್ಯಾಂತರ ರೂಪಾಯಿ ಕಂದಾಯ ನಮ್ಮ ಮೇಲೆ ಹಾಕಿದ್ದಾರೆ. ಇನ್ನೆಷ್ಟು ಕಂದಾಯ ವನ್ನು ನಮ್ಮ ಜನ ತೆರುವುದಕ್ಕೆ ಸಿದ್ಧವಾಗಿ ದ್ದಾರು? ಈಗ ಸೇಲ್ಸ್‌ಟ್ಯಾಕ್ಸ್ ತೆರಿಗೆಯ ವಿಚಾರದಲ್ಲಿ ಎಲ್ಲಕಡೆಯಿಂದಲೂ ಸರ್ಕಾರಕ್ಕೆ ಪ್ರತಿಭಟನೆ ಬರುತ್ತಿದೆ. ಮುಂದೆ ಯಾವ ಬಾಬಿ ನಲ್ಲಿಯೂ ತೆರಿಗೆಯನ್ನು ಹೆಚ್ಚಿಸಲು ಅವಕಾಶ ವಿಲ್ಲ. ಹೊಸದಾಗಿ ತೆರಿಗೆ ಹಾಕದೆ ಮುಂದೆ ಬರತಕ್ಕ ಡಿಫಿಸಿಟ್ ಬಡ್ಜೆಟ್ಟನ್ನು ಯಾವ ರೀತಿ ಸರಿದೂಗಿಸಬಹುದೆಂಬುದು ದೊಡ್ಡ ಸಮಸ್ಯೆ ಯಾಗಿದೆ. ವಿಲೀನೀಕರಣಕ್ಕೆ ಸಂಬಂಧಪಟ್ಟ ಒಪ್ಪಂದದಲ್ಲಿರುವ ಷರತ್ತುಗಳನ್ನು ನೋಡಿದರೆ ಗೊತ್ತಾಗುತ್ತದೆ. ಅದರ ಪ್ರಕಾರ ನಮ್ಮಲ್ಲಿದ್ದ ಸಿಬ್ಬಂದಿಯನ್ನು ವರ್ಗಮಾಡಿದರು.

"The permanent staff wholly (or substantially) engaged on work connected with "federal" subjects in States on the prescribed date should be taken over by the Centre in appropriate grades and upon terms not less advantageous than in the service of the State. Temporary staff so engaged should also be similarly absorbed as far as possible, having due regard to their suitability."

ಸ್ವಾಮಿ, ಅನೇಕ ವರ್ಷಗಳಿಂದ ನಮ್ಮನ್ನೇ ನಂಬಿಕೊಂಡಿದ್ದ ಜನರನ್ನು ಅವರ ಕೈಯ್ಯಲ್ಲಿ ಕೊಟ್ಟದ್ದು ತೋಳನ ಕೈಯ್ಯಲ್ಲಿ ಕುರಿಯನ್ನು ಕೊಟ್ಟ ಹಾಗಾಯಿತು. ಒಂದೇ ದಿವಸ ಮಿಲಿ ಟರಿ ಇಲಾಖೆಯಲ್ಲಿ ಎರಡು ಸಾವಿರ ಜನರನ್ನು ಮನೆಗೆ ಕಳುಹಿಸಿದರು. ಉಳಿದ ಕೆಲವು ಜನರ ಗತಿ ಏನಾಯಿತು? ಅವರಿಗೆ ಬರಬೇಕಾದ ಬಡ್ತಿ ಬಂದಿಲ್ಲ. ಅದೇ ಇಲಾಖೆಯಲ್ಲಿ ಇವರ ಜೊತೆ ಯಲ್ಲಿ ಕೆಲಸಮಾಡತಕ್ಕ ಕೇಂದ್ರ ಸರ್ಕಾರದ ನೌಕರರ ಸಂಬಳ ತುಟ್ಟಿಭತ್ಯ ಇವರಿಗೆ ಬರುತ್ತಿಲ್ಲ. ಕೇಂದ್ರಕ್ಕೆ ವರ್ಗಾಯಿಸಲ್ಪಟ್ಟಿರುವ ಇಲಾಖೆ ಪ್ರತಿಯೊಂದರಲ್ಲಿಯೂ ಒಂದೊಂದು ರೀತಿಯ ಕಷ್ಟ ನಮ್ಮವರಿಗಿದ್ದೇ ಇ ದೆ. ಎಕ್ಸೈಜು ಇಲಾಖೆಯಲ್ಲಿ ಕೂಡ ಪ್ರತಿದಿನವೂ ಅಲ್ಲಿಗೆ ಹೋಗಿರುವ ನೌಕರರು ನಮ್ಮನ್ನು ವಾಪಸು ಮೈಸೂರು ಸರ್ಕಾರಕ್ಕೆ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಮಿಲಿಟರಿ ಇಲಾಖೆ ಯಿಂದ ಅನೇಕರನ್ನು ಅವರು ತೆಗೆದುಹಾಕಿದ್ದ ರಿಂದ ಅವರಿಗೆ ಜಮೀನು ಮತ್ತು ಹಣ ಕೊಟ್ಟು ಅವರನ್ನು ರಿಹ್ಯಾಬಿಲಿಟೇಷನ್ ಮಾಡುವ ಕೆಲಸ ತೆಗೆದುಕೊಳ್ಳಬೇಕು, ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ನಮ್ಮ ಸರ್ಕಾರ ಖರ್ಚು ಮಾಡಬೇಕು! ಹೀಗೆ ಇಂಥ ವಿಲೀನೀಕರಣ ಮಾಡುವುದಕ್ಕೆ ಬದಲು ಒಟ್ಟಿಗೆ ಅವರಿಗೆ ಆಡ ಳಿತ ನೀವೇ ನೋಡಿಕೊಳ್ಳಿ ಎಂದು ಹೇಳಿ ಬಿಟ್ಟಿ ದ್ದರೆ ಚೆನ್ನಾಗಿತ್ತು. ಹೀಗಾದರೆ ಹೇಗೆ ಸರಿ ಹೋಗುತ್ತದೆ? ವರ್ಷ ವರ್ಷವೂ ಖರ್ಚುಗಳು ಜಾಸ್ತಿಯಾಗುತ್ತಿವೆ. ದುಬಾರಿ ಕಂದಾಯ ಗಳನ್ನು ಕೇಂದ್ರ ಸರ್ಕಾರಕ್ಕೆ ನಮ್ಮ ಜನ ಕೊಡ ಬೇಕಾಗಿದೆ. ಒಂದು ಕೋಟಿ ರೂಪಾಯಿ ಇದ್ದ ವರಮಾನ ಎಕ್ಸೈಜು ಇಲಾಖೆಯಲ್ಲಿ ಈಗ ನಾಲ್ಕ ರಷ್ಟು ಹೆಚ್ಚಿದೆ. ಇದೆಲ್ಲಾ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ. ಆದರೆ ಅವರಿಂದ ನಮಗೆ ಒರು ವುದು ಮಾತ್ರ 3 ಕೋಟಿ 65 ಲಕ್ಷ ರೂಪಾಯಿ; ಇದು ವರ್ಷ ವರ್ಷವೂ ಕಡಮೆಯಾಗಿ ಹತ್ತು ವರ್ಷಗಳಾದ ಮೇಲೆ ಬರುವುದು ನಿಂತು ಹೋಗುತ್ತದೆ. 1955 ನೆಯ ಇಸವಿಗೆ ನಮ್ಮ ಸಂಸ್ಥಾನದ ಗತಿ ಏನಾಗಬೇಕು, ಈ ಖೋತಾ ಬಡ್ಜೆಟ್ಟಿಟ್ಟುಕೊಂಡು? ಯಾವುದಕ್ಕೂ ಮಂತ್ರಿ ಗಳು ಸರಿಯಾದ ಉತ್ತರ ಕೊಡುವುದಿಲ್ಲ. ಸಭೆ ಯಲ್ಲೇ ಇರುವುದಿಲ್ಲ, ಇದ್ದರೂ ತೂಗಡಿಸುತ್ತಿ ರುತ್ತಾರೆ..................

Mr. SPEAKER.—I think no Hon'ble Minister is sleeping. I cannot allow such remarks.

Sri Kadidal MANJAPPA.—In fact, Sri A. G. Ramacandra Rao is taking down notes.

ಶ್ರೀ ಬಿ. ಹುಚ್ಚೇಗೌಡ.— ಯಾವುದು ಕೇಳಿ ದರೂ ಓಟಿಗೆ ಹಾಕಿ ಎನ್ನುತ್ತಾರೆ. ಈ ಸಭೆಯ

(ಶ್ರೀ ಬಿ. ಹುಚ್ಚೇಗೌಡ)
ಕಾರ್ಯಕಲಾಪಗಳು ನಾಳೆ ಏನಿವೆ, ಇವೊತ್ತೇನು, ಖಾಸಗೀ ಕಾರ್ಯಕಲಾಪ ಇವೊತ್ತಿದೆಯೇ ನಾಳೆ ಇದೆಯೆ ಎಂಬುದು ಕೂಡ ನಮಗೆ ಸರಿಯಾಗಿ ಗೊತ್ತಾಗುವುದಿಲ್ಲ. ಇಷ್ಟು ಅಸಡ್ಡೆ ತೋರಿಸುತ್ತಿದ್ದಾರೆ, ಸರ್ಕಾರದವರು. ಹೀಗಿರುವಾಗ 186 ಲಕ್ಷ ರೂಪಾಯಿ ಖರ್ಚು ಮಾಡಲು ಅಧಿಕಾರ ಕೊಡಿ, ಒಪ್ಪಿಗೆ ಕೊಡಿ ಎಂದು ಬರುತ್ತಾರೆ!

ಸ್ವಾಮಿ, ಇದೂ ಅಲ್ಲದೆ ಈಗ ಕಳೆದ 5-6 ವರ್ಷಗಳಿಂದಲೂ ಈ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಅನೇಕ ಯೋಜನೆಗಳ ಬಗ್ಗೆ ಖರ್ಚು ಮಾಡಿದ್ದಾಗ್ಗೂ ಒಂದಾದರೂ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದರ ಜೊತೆಗೆ ಸಂಸ್ಥಾನದ ಉತ್ಪತ್ತಿ ಬೇರೆ ವರ್ಷೇ ವರ್ಷೇ ಖೋತಾ ಬೀಳುತ್ತಾ ಬರುತ್ತಿದೆ. ವಿಚಾರಗಳು ಹೀಗೆಯೇ ಇನ್ನು 5 ವರ್ಷಗಳ ತನಕ ಮುಂದುವರಿದರೆ ಕೊನೆಗೆ ನಮ್ಮ ಸರ್ಕಾರ ಬರಿಕೈಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಇಂಡಿಯಾ ಸರ್ಕಾರದೊಡನೆ ನಮ್ಮ ಸರ್ಕಾರದವರು ವಿಲೀನೀಕರಣ ಒಪ್ಪಂದ ಮಾಡಿಕೊಂಡಿದ್ದ ಪ್ರಕಾರ ಅವರು ನಮ್ಮಿಂದ ಉತ್ಪತ್ತಿ ಬರುತ್ತಿದ್ದಂಥ ಇಲಾಖೆಗಳನ್ನೆಲ್ಲಾ ಅವರ ವಶಕ್ಕೆ ತೆಗೆದುಕೊಂಡು, ಅವರು ನಮಗೆ ಈ ಆಹಾರ ಸಮಸ್ಯೆಯನ್ನು ನೀಗತಕ್ಕ ಬಗ್ಗೆ ಕೊಡುತ್ತೇವೆಂದು ಹೇಳಿದ್ದ ಮೊಬಲಗನ್ನು ಅವರು ಕೊಟ್ಟರುವುದಿಲ್ಲ. ಅದನ್ನೆಲ್ಲಾ ಈಗ ಸರಿಯಾಗಿ ಲೆಕ್ಕಹಾಕಿ ವರ್ಷವೊಂದಕ್ಕೆ ಆ ಇಲಾಖೆಗಳಿಂದ ಎಷ್ಟಾಗುತ್ತದೆಂಬುದನ್ನು ಕಂಡುಹಿಡಿದು ಅದನ್ನೆಲ್ಲಾ ಈಗ ನಾವು ಅವರಿಂದ ವಾಪಸ್ಸು ತೆಗೆದುಕೊಳ್ಳುವುದೊಂದು ಮಾರ್ಗ ಉಳಿದಿದೆ. ಅವರೇನೂ ನಮಗೆ ಧರ್ಮಕ್ಕಾಗಿ ಕೊಡುತ್ತಿಲ್ಲ. ನಮಗೆ ಅವರು ಕೊಡುತ್ತಿದ್ದ ಸಬ್‌ಸಿಡಿಯಾದರೂ ಅತಿ ಸ್ವಲ್ಪವಾದದ್ದು. ಈಗ ಅವರಿಗೆ ನಮ್ಮಿಂದ ಹೋಗಿರತಕ್ಕ ಇಲಾಖೆಗಳಲ್ಲಿ ಒಂದಕ್ಕೆ ಎರಡರಷ್ಟು ಉತ್ಪತ್ತಿಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಆ ಲೆಕ್ಕಾಚಾರಗಳನ್ನೆಲ್ಲಾ ಬಾಬುವಾರಾಗಿ ತಯಾರಿಸಿ, ಹೀಗೆ ಹೆಚ್ಚಾಗಿ ಅವರು ನಮ್ಮ ಇಲಾಖೆಗಳಿಂದ ಉತ್ಪನ್ನ ಹೊಂದಿರತಕ್ಕದ್ದನ್ನೆಲ್ಲಾ ವಾಪಸ್ಸು ಪಡೆಯಲು ಪ್ರಯತ್ನ ಮಾಡಲೇಬೇಕು. ನಮ್ಮ ಸರ್ಕಾರದವರು ಹೀಗೆ ಉತ್ಪತ್ತಿಬರುತ್ತಿದ್ದ ಬಾಬುಗಳನ್ನೆಲ್ಲಾ ಬೇರೆಯವರಿಗೆ ಕೊಟ್ಟ ಮೇಲೆ ಇಲ್ಲಿನ ಜನರಮೇಲೆ ಹಣದ ಉತ್ಪತ್ತಿಗಾಗಿ ಸುಮಾರು $2\frac{1}{2}$, 3 ಕೋಟಿ ರೂಪಾಯಿಗಳ ತನಕ ಹೊಸ ಹೊಸ ತೆರಿಗೆಗಳನ್ನು ಹಾಕಿರುತ್ತಾರೆ. ಇದು ಜನರಿಗೆ ಹೊರಲು ತುಂಬ ಅಸಾಧ್ಯವಾಗಿರುತ್ತದೆ. ಹೀಗಿರುವಾಗ ಇನ್ನು ಮುಂದಕ್ಕೆ ಜನರ ಮೇಲೆ ಯಾವ ತೆರನಾದ ಕಂದಾಯದ ಹೊರೆಯನ್ನು ಹಾಕಲೂ ಸಾಧ್ಯವಿರುವುದಿಲ್ಲ. ಈ ವಿಚಾರ ಈಗಾಗಲೇ ಎಲ್ಲರ ಗಮನಕ್ಕೂ ಬಂದಿದೆ. ಹೀಗೆ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸದೆ ಸರ್ಕಾರ ಪದೇ ಪದೇ ಅವರ ಮೇಲೆ ತೆರಿಗೆಗಳನ್ನು ಹೇರುತ್ತಿರುವುದರಿಂದ, ಈಗಲೇ ನಮ್ಮ ಬಡ್ಜೆಟ್ ಖೋತಾ ಬಿದ್ದಿರುವುದರಿಂದ, ಮುಂದಿನ ಬಡ್ಜೆಟ್ಟಿನ ಕಾಲಕ್ಕೆ ಈ ಖೋತಾ ಇನ್ನೂ ಅಧಿಕವಾಗಬಹುದು. ಈಗಲೇ ಅನೇಕ ರೀತಿಯ ಕ್ಷಾಮ ಡಾಮರುಗಳು ದೇಶದಲ್ಲಿ ಹಾಹಾಕಾರವೆಬ್ಬಿಸಿರುವುದರಿಂದಲೂ, ಜನರ ಕೈಯಲ್ಲಿ ದುಡ್ಡಿಲ್ಲದ್ದರಿಂದಲೂ ಮುಂದೆ ನಮಗೆ ಇನ್ನೂ ಅನೇಕ ಕಷ್ಟಗಳು ಸಂಭವಿಸಬಹುದು. ಹೀಗೆ ದಿನೇದಿನೇ ಉದ್ಭವವಾಗುತ್ತಿರುವ ಕಷ್ಟಗಳನ್ನು ಸರ್ಕಾರದವರು ಗಣನೆಗೆ ತೆಗೆದುಕೊಳ್ಳದೆ, ಆಹಾರದ ಉತ್ಪತ್ತಿಗೆ ಸಾಕಷ್ಟು ಉತ್ತೇಜನ ಕೊಡದೆ, ಹಣವನ್ನು ಮಾತ್ರ ಅಪಾರವಾಗಿ ಖರ್ಚುಮಾಡಿದ್ದಾರೆ. ಈ ಹಿಂದೆ ನಾವು ಆಹಾರ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಆದಷ್ಟು ಬೇಗ ಡೀಕಂಟ್ರೋಲನ್ನು ಮಾಡಿಬಿಡಿ ಎಂದು ಎಷ್ಟೋ ಸಲಹೆಗಳನ್ನು ಕೊಟ್ಟಾಗ್ಗೂ ಅವುಗಳನ್ನು ಅವರು ಗಮನಕ್ಕೆ ತೆಗೆದುಕೊಳ್ಳದೆ ಈ ದಿವಸ ಈ ಪೇಚಿನಲ್ಲಿ ಸಿಕ್ಕಿಕೊಂಡಿದ್ದಾರೆ. ದೇಶದಲ್ಲಿರತಕ್ಕ ಜನರ ಆರ್ಥಿಕ ಸ್ಥಿತಿ ತೀರಾ ಕೆಟ್ಟುಹೋಗಿ ಸರ್ಕಾರಕ್ಕೆ ಬೇರೆ ಹೊಸದಾದ ಯಾವ ತೆರಿಗೆಗಳನ್ನು ವಿಧಿಸಲೂ ಯತ್ನವಿಲ್ಲದೆ ಇರುವುದರಿಂದ ಇನ್ನು ಕೊಂಚ ದಿನಗಳಲ್ಲೇ ಇದು ಪಾಪರಾಗಿ

ಹೋಗುವ ಸಂಭವ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ವಿಷಯಗಳಲ್ಲಿ ಮುಂದೆ ಸರ್ಕಾರದವರು ಬಹಳ ಎಚ್ಚರಿಕೆಯಿಂದ ವರ್ತಿಸಲು ಈ ಕೆಲವು ವಿಷಯಗಳನ್ನು ಅವರಿಗೆ ತಿಳಿಸಿದ್ದೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡುತ್ತ ಎದುರು ಪಕ್ಷದ ಮಾನ್ಯ ಸದಸ್ಯರು ಬಹಳ ಟೀಕೆಗಳನ್ನು ಮಾಡಿದ್ದಾರೆ. ಆದರೆ ಅವರು ಮಾಡಿರತಕ್ಕ ಟೀಕೆಗಳೆಲ್ಲವೂ ಕೇವಲ ಊಹಾಪೋಹದ ಮೇಲೆ ಹೇಳುವಂಥವುಗಳಾಗಿವೆ. ನಮ್ಮದು ಒಂದು ಖೋತಾ ಬಡ್ಜೆಟ್ಟಾದ ಮಾತ್ರದಿಂದಲೇ ದೇಶದಲ್ಲಿ ಸ್ಥಿತಿಗತಿಗಳೆಲ್ಲಾ ಕೆಟ್ಟುಹೋಗಿ, ಏನೋ ಆಗಿಹೋಗಿ, ಆಕಾಶವೇ ಕಳಚಿಕೊಂಡು ಇನ್ನೇನು ತಲೆಯಮೇಲೆ ಬೀಳುತ್ತದೋ ಏನೋ ಅನ್ನತಕ್ಕಂಥ ಇತ್ತಿತ್ಯಾದಿ ಟೀಕೆಗಳನ್ನೆಲ್ಲಾ ಮಾಡಿದ್ದಾರೆ. ಈ ಟೀಕೆಗಳಲ್ಲಿ ಯಾವ ತಿರುಳೂ ಇಲ್ಲ. ಈ ಆಧುನಿಕ ಪ್ರಪಂಚದಲ್ಲಿ ದೇಶವನ್ನು ಅಭಿವೃದ್ಧಿಗೆ ತರತಕ್ಕ ವಿಚಾರದಲ್ಲಿ ಎರಡು ವಿಧವಾದ ವಾದಗಳಿರುತ್ತವೆಂಬುದನ್ನು ಅವರೂ ಸಹ ಒಪ್ಪಿಕೊಳ್ಳುತ್ತಾರೆ. ಆದರೆ ದೇಶದ ಪ್ರೋಗ್ರೆಸ್ ನಾನಾ ಮುಖದಲ್ಲಿ ಆಗುತ್ತಿರುವ ಲಕ್ಷಣಗಳಲ್ಲಿ ಹೀಗೆ ದೇಶದ ಬಡ್ಜೆಟ್ ಖೋತಾ ಆಗುತ್ತಿರುವುದೂ ಕೂಡ ಒಂದು ಎಂಬ ಅಂಶವನ್ನು ಅವರು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. ಹೀಗೆ ಬಡ್ಜೆಟ್ ಖೋತಾ ಬೀಳುವುದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಈಗಾಗಲೇ ಬೇಕಾದಷ್ಟು ಚರ್ಚೆಗಳಾಗಿರುತ್ತವೆ. ಆದರೆ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಕೇವಲ ಅವರ ಭಾಷಣಗಳನ್ನು ಟೀಕೆಗಳಲ್ಲಿ ಮುಗಿಸಿದರೇ ಹೊರತು ಒದಗಿರತಕ್ಕ ಪರಿಸ್ಥಿತಿಯನ್ನು ಹೇಗೆ ಗೆಲ್ಲಬೇಕು, ಇರತಕ್ಕ ತಾರತಮ್ಯಗಳನ್ನು ಹೇಗೆ ಸರಿದೂಗಿಸಬೇಕು; ಮತ್ತು ದೇಶದ ಏಳಿಗೆಯನ್ನು ಹೇಗೆ ಹೆಚ್ಚು ಮಾಡಬೇಕು, ಎಂಬ ಇತ್ಯಾದಿ ವಿಷಯಗಳಬಗ್ಗೆ ಯಾವುದಕ್ಕೂ ಅವರು ವಿಶದವಾಗಿ ಸಲಹೆಗಳನ್ನು ಕೊಡಲಿಲ್ಲ.

ಇನ್ನು ಶ್ರೀ ಕೆ. ಪಟ್ಟಾಭಿರಾಮಯ್ಯನವರು 2-3 ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ಈಗಾಗಲೇ ನಮ್ಮ ಸರ್ಕಾರಕ್ಕೂ ಮತ್ತು ಇಂಡಿಯಾ ಸರ್ಕಾರಕ್ಕೂ ಆಗಿರುವಂಥ ಆರ್ಥಿಕ ವಿಲೀನೀಕರಣ ಒಪ್ಪಂದಗಳನ್ನು ಪುನಃ ಪರಿಶೀಲನೆ ಮಾಡಬೇಕೆಂದೂ ಹಾಗೆ ಮಾಡಿದರೆ ನಮ್ಮ ಹಣಕಾಸಿನ ಸ್ಥಿತಿ ಉತ್ತಮಗೊಳ್ಳುತ್ತದೆಂದೂ, ಆ ಮಾರ್ಗದಿಂದಲೇ ನಮಗೆ ಸಾಕಷ್ಟು ದುಡ್ಡಿನ ವರಮಾನಕ್ಕೆ ಅವಕಾಶವಾಗುತ್ತದೆಂದೂ ಹೇಳಿದ್ದಾರೆ, ನಿಜ. ಅದರಿಂದಲೂ ಕೊಂಚಮಟ್ಟಿಗೆ ನಮ್ಮ ಹಣಕಾಸಿನ ಸ್ಥಿತಿ ಉತ್ತಮಗೊಳ್ಳಬಹುದು ಮತ್ತು ಇದೊಂದು ಸಾಧುವಾದ ಮಾರ್ಗವಾಗಿರುತ್ತದೆ. ಆದರೆ ಬರೀ ಈ ಒಂದು ಪುನರ್ವಿಮರ್ಶೆಯಿಂದಲೇ ನಮಗೆ ಖೋತಾಬಿದ್ದಿರತಕ್ಕ ಹಣ ಭರ್ತಿ ಮಾಡಿಕೊಳ್ಳಲು ಅವಕಾಶವಿದೆಯೇ ಎಂಬುದನ್ನು ಆಲೋಚಿಸಿದರೆ, ಅದೂ ಕೂಡ ಸಾಧ್ಯವಾಗುವುದಿಲ್ಲ. ಕಾರಣವೇನೆಂದರೆ, ಈಗಾಗಲೇ ನಾವು ಮಾಡಿಕೊಂಡಿರತಕ್ಕ ವಿಲೀನೀಕರಣದ ಸಂಬಂಧದಲ್ಲಿ ಎಲ್ಲಿನವರೆಗೆ ಬದಲಾವಣೆ ಮಾಡಲು ಸಾಧ್ಯವಿದೆಯೋ ಅಲ್ಲಿನ ತನಕ ಬದಲಾವಣೆಗೆ ಅವಕಾಶ ದೊರಕೀತೆವಿನಾ ಸಂಪೂರ್ಣವಾಗಿ ಪ್ರತಿಯೊಂದು ಐಟಂ ಅನ್ನೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಒಂದು ಅಭಿಪ್ರಾಯ ಕೂಡ ಅಷ್ಟು ಅನುಕೂಲವಾದುದೆಂದು ನಾನು ಭಾವಿಸಲಾರೆ.

ಮತ್ತೊಂದು ವಿಚಾರ ಅವರು ತಿಳಿಸಿದ್ದಾರೆ. ಈಗಾಗಲೇ ನಮ್ಮ ಸರ್ಕಾರದವರು ಅನುಸರಿಸುತ್ತಿರುವ 'ಎಕಾನಮಿ' ವಿಚಾರವಾಗಿ ಅವರ ಮಾತನಾಡುತ್ತ, ಇದನ್ನು ಇನ್ನೂ ಮುಂದುವರಿಸಬೇಕೆಂದೂ ಅದರಿಂದಲೂ ಸರ್ಕಾರಕ್ಕೆ ಹೆಚ್ಚಿನ ಹಣ ಉಳಿತಾಯವಾಗುತ್ತೆಂದೂ ಹೇಳಿದ್ದಾರೆ. ಆದರೆ ಹೀಗೆ ಈ ರಿಟ್ರೆಂಚ್‌ಮೆಂಟ್ ಪಾಲಸಿಯನ್ನೂ ಸಹ ನಾವು ಹಾಗೆ ಎಲ್ಲಿಯವರೆಗೆ ಮುಂದುವರಿಸಬಹುದು, ಹಾಗೆ ಅದನ್ನು ಅತಿಯಾಗಿ ಮುಂದುವರಿಸುತ್ತಾ ಹೋದರೆ ಅದರ ಪರಿಣಾಮವೇನಾಗಬಹುದು, ಎಂಬುದನ್ನೂ ನಾವೀಗ ದೀರ್ಘವಾಗಿ ಆಲೋಚಿಸಿನೋಡ

(ಶ್ರೀ ಡಿ. ದೇವರಾಜ ಅರಸ್)

ಬೇಕಾಗಿರುತ್ತದೆ. ಅನೇಕ ಜನ ಮಾನ್ಯ ಸದಸ್ಯರುಗಳು ದೇಶದ ಬೆಳವಣಿಗೆ ಹೆಚ್ಚಾದಂತೆಲ್ಲಾ ಸರ್ಕಾರದ ಜವಾಬ್ದಾರಿಗಳೂ ಹೆಚ್ಚಾಗುತ್ತ ಹೋಗಬೇಕೆಂಬ ವಿಚಾರವನ್ನು ಒಪ್ಪಿಕೊಂಡಿದ್ದಾರೆ. ಶ್ರೀಮರ್ಾ ಕೆ. ಪಟ್ಟಾಭಿರಾಮರ್ಯರವರೂ ಕೂಡ ತಮ್ಮ ಭಾಷಣದಲ್ಲಿ ವೆಲ್‌ಫೇರ್ ಸ್ಟೇಟಿನ ವಿಚಾರವನ್ನೆತ್ತಿಕೊಂಡು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಎಲ್ಲರೂ ಮಾತನಾಡುತ್ತಿರುವ ಭಾಷಣಗಳ ವಿಚಾರದಲ್ಲಿ ಎದ್ದು ಕಾಣುವಂಥ ಒಂದು ಆಶ್ಚರ್ಯವೇನೆಂದರೆ, ದೇಶದ ಪ್ರೋಗ್ರೆಸ್ ಹೀಗಾಗಬೇಕು, ಹಾಗಾಗಬೇಕು ಎಂದು ಹೇಳುತ್ತಾರೆಯೇ ಶಿವಾಯಿ ಹಾಗೆಲ್ಲಾ ಆಗ ಬೇಕಾಗಿದ್ದರೆ ಅದಕ್ಕೆ ಅವಶ್ಯಕವಾದ ಹಣ ಸಂಪಾದನೆಗಾಗಿ ಯಾವ ತೆರಿಗೆಗಳನ್ನು ವಿಧಿಸಬೇಕು ಅಥವಾ ಅದಕ್ಕೆಲ್ಲಾ ಹಣವನ್ನು ಹೇಗೆ ಒದಗಿಸಬೇಕು ಎಂಬ ವಿಚಾರವನ್ನೇ ಒಬ್ಬರೂ ಮಾತನಾಡುವುದಿಲ್ಲ. ಹಿಂದೆ ಪೋಲೀಸ್ ಸ್ಟೇಟ್ ಎಂದು ಏನು ಹೇಳುತ್ತಿದ್ದರೋ......

ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಅರಸರು ಪಾಳೇಗಾರರಾಗಿದ್ದಾಗ ಪೋಲೀಸ್ ಸ್ಟೇಟ್ ಎಂದು ಹೇಳುತ್ತಿದ್ದರು.

ಶ್ರೀ ಡಿ. ದೇವರಾಜ ಅರಸ್.—ಆಗಿನ ಸರ್ಕಾರದಲ್ಲಿ ವೆಲ್‌ಫೇರ್ ಸ್ಟೇಟ್ ಎಂದು ಕರೆಯಲು ಎಷ್ಟು ಜವಾಬ್ದಾರಿಯನ್ನು ಆಗಿದ್ದ ಸರ್ಕಾರ ಹೋರಬೇಕಾಗಿತ್ತೋ ಅಷ್ಟು ಜವಾಬ್ದಾರಿಯನ್ನು ಅದು ಹೊತ್ತಿರಲಿಲ್ಲ. ಈ ದಿವಸವಾದರೋ ಪ್ರತಿಯೊಬ್ಬ ಮನುಷ್ಯನ ಜೀವನದ ಆಗುಹೋಗುಗಳನ್ನೆಲ್ಲಾ ಹೊರತಕ್ಕ ಜವಾಬ್ದಾರಿ ಹೊರೆ ಸರ್ಕಾರದ ಮೇಲೆ ಬಿದ್ದಿದೆ. ನಿಜ, ನಮಗೆ ಈ ದಿವಸ ಇಂಡಿಪೆಂಡೆನ್ಸು ಬಂದಿರುತ್ತದೆ. ಆದರೆ ಹಾಗೆ ಬಂದಿರತಕ್ಕ ಇಂಡಿಪೆಂಡೆನ್ಸಿನ ಪರಿಣಾಮ ಎಲ್ಲಿಯವರೆಗೂ ಹೋಗಿದೆಯೆಂದರೆ: ಜನರ ವಿದ್ಯಾಭ್ಯಾಸದಿಂದ ಹಿಡಿದು ಅವರಿಗೆಲ್ಲಾ ವಸತಿ ಸೌಕರ್ಯ, ಕೆರೆ ಕಟ್ಟೆಗಳ ನಿರ್ಮಾಣ, ರಸ್ತೆ, ಬಾವಿ, ಆಸ್ಪತ್ರೆ ಇತ್ಯಾದಿ ಎಲ್ಲ ವಿಷಯುಗಳನ್ನೂ, ಹುಟ್ಟಿನಿಂದ ಹಿಡಿದು ಸಾಯುವವರೆಗೂ ಏನೇನು ಅನುಕೂಲತೆಗಳಾಗಬೇಕೋ ಅವುಗಳೆಲ್ಲವನ್ನೂ ಒದಗಿಸತಕ್ಕ ಜವಾಬ್ದಾರಿಯ ಜೊತೆಗೆ ಮಳೆ ಬೆಳೆಗೆ ಸಂಬಂಧಪಟ್ಟ ವಿಚಾರಗಳ ಜವಾಬ್ದಾರಿ ಸಹ ಇವರ ಮೇಲೆ ಬಿದ್ದಿರುತ್ತೆಂದು ಮಾಡತಕ್ಕವಾದಗಳನ್ನು ಯಾರು ತಾನೆ ಒಪ್ಪಿಕೊಳ್ಳಲು ಸಾಧ್ಯ? ಈ ಅಂತಸ್ತಿನಲ್ಲಿ ಡಿಬೇಟ್ ಮಾಡುತ್ತಾ ಇದ್ದರೆ ಇದರಿಂದ ಯಾರಿಗೂ ಏನೂ ಉಪಕಾರವಾಗಲಾರದು. ಎಲ್ಲ ಜವಾಬ್ದಾರಿಯನ್ನೂ ಸರ್ಕಾರವೇ ನಿರ್ವಹಿಸಬೇಕಾಗಿದ್ದಾಗ ಜನರಿಗೆ ಬೇಕಾಗತಕ್ಕ ಎಲ್ಲಾ ಅನುಕೂಲತೆಗಳನ್ನೊದಗಿಸಲು, ಅದಕ್ಕೆ ತಕ್ಕಷ್ಟು ದುಡ್ಡಿನ ವರಮಾನವೂ ಇರಬೇಕು. ಈ ದುಡ್ಡಿನ ವರಮಾನಕ್ಕಾಗಿ ಬೇಕಾದಷ್ಟು ಮಾರ್ಗಗಳು ಇವೆ. ಸರ್ಕಾರ ಹೊರತಕ್ಕ ಜವಾಬ್ದಾರಿ ಹೊರೆ ಹೆಚ್ಚುತ್ತಾ ಹೋದಹಾಗೆಲ್ಲಾ, ಅದಕ್ಕೆ ಅಗತ್ಯವಾಗಿ ಬೇಕಾಗಿರುವ ದುಡ್ಡಿನ ಸೌಕರ್ಯಕ್ಕಾಗಿ ಸರ್ಕಾರ ತೆರಿಗೆಗಳನ್ನು ಹೆಚ್ಚು ಹೆಚ್ಚಾಗಿ ವಿಧಿಸದೆ ವಿಧಿಯಿಲ್ಲ. ಹೀಗೆ ವೆಲ್‌ಫೇರ್ ಸ್ಟೇಟ್ ಜೊತೆಯಲ್ಲೇ ಪ್ರೋಗ್ರೆಸೀವ್ ಟ್ಯಾಕ್ಸ್‌ಗಳೂ ಇರುತ್ತವೆ. ಹೀಗೆ ಈ ಎರಡೂ ಜೋಡಿಯಾಗಿದ್ದರೂ ಮಾನ್ಯ ಸದಸ್ಯರು ಭಾಷಣ ಮಾಡುತ್ತ ಹಳೆಯ ತೆರಿಗೆಗಳನ್ನು ತಗ್ಗಿಸಬೇಕೆಂದೂ, ಹೊಸ ಹೊಸ ತೆರಿಗೆಗಳನ್ನು ವಿಧಿಸಬಾರದೆಂದೂ ಒಂದು ಕಡೆ ಹೇಳಿ, ಮತ್ತೊಂದು ಕಡೆ ಸರ್ಕಾರವೇ ಎಲ್ಲಾ ಜವಾಬ್ದಾರಿಗಳನ್ನೂ ಹೊರಬೇಕೆಂದು ಹೇಳುತ್ತಾ ಹೀಗೆ ಒಂದು ಅಸಮಂಜಸವಾದ ರೀತಿಯಲ್ಲಿ ಅವರು ಭಾಷಣ ಮಾಡಿರುವುದಕ್ಕೆ ನಾನು ತೀರ ವಿಷಾದ ಪಡುತ್ತೇನೆ. ಅಷ್ಟೇ ಅಲ್ಲದೆ ನನಗೆ ಈ ವಾದ ಸರಣಿಯ ಧೋರಣೆ ಏನೆಂಬುದೇ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ತಾವು ಇನ್ನೆಷ್ಟು ತೆರಿಗೆ ಹಾಕಬೇಕೆಂದು ಹೇಳುತ್ತೀರಿ? ಅದನ್ನಾದರೂ ಹೇಳಿಬಿಡಿ.

ಶ್ರೀ ಡಿ. ದೇವರಾಜ ಅರಸ್.—ಅದನ್ನು ನೀವು ಏತಕ್ಕಾಗಿ ಹಾಕಬಾರದೆಂದು ಹೇಳಿದಿರೋ ಅದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರಕ್ಕೆ ಮೊದಲು ಬರುತ್ತಿದ್ದ ಮೂರು ಕೋಟಿ ರೂಪಾಯಿಗಳ ವರಮಾನ 10 ಕೋಟಿಗೆ ಏರಿದ್ದು ಈ

ದಿವಸ 20 ಕೋಟಿಗೆ ಬಂದಿದೆ. ಹೀಗೆ ಆದಾಯ ಹೆಚ್ಚಾಗುತ್ತ ಬಂದಂತೆಲ್ಲಾ ಅದಕ್ಕನುಗುಣ ವಾಗಿ ಖರ್ಚುಗಳೂ ಹೆಚ್ಚಲೇ ಬೇಕಾಗಿದೆ. ಹಾಗೆ ಹೆಚ್ಚುತ್ತಿರುವ ಖರ್ಚುಗಳನ್ನು ಕಡಮೆ ಮಾಡಲು ಸಾಧ್ಯವಿಲ್ಲವೆಂಬುದನ್ನು ತಾವು ಒಪ್ಪಿ ಕೊಂಡಿದ್ದೀರಿ. ಖರ್ಚಿಗೆ ತಕ್ಕ ರಿಸೋರ್ಸಸ್ಸ್ ಗಳನ್ನೂ ನಾವು ಕಂಡು ಹಿಡಿಯಲೇಬೇಕು ಹೀಗೆ ವ್ಯಕ್ತಿಗಳು ಹೊರತಕ್ಕ ಹೊರೆಯನ್ನು ವ್ಯಕ್ತಿಗಳು ಹೊರಬೇಕು, ಸರ್ಕಾರ ಹೊರತಕ್ಕ ಹೊರೆಯನ್ನು ಸರ್ಕಾರವೂ ಹೊರಬೇಕು. ಇವೇ ವೆಲ್‌ಫೇರ್ ಸ್ಟೇಟಿಗೆ ಇರತಕ್ಕ ಲಕ್ಷಣಗಳು. ಸದಸ್ಯರುಗಳು ನಮಗೆ ಬಾವಿಗಳು ಬೇಕು, ಕೆರೆ ಗಳು ಆಗಬೇಕು, ತಕಾವಿ ಸಾಲಗಳು ಬೇಕು, ಸ್ಕೂಲುಗಳು ಬೇಕು, ಎಂಬುದಾಗಿ ಅನೇಕ ಅನು ಕೂಲಗಳನ್ನು ಕೇಳಲು ಎಷ್ಟು ಉತ್ಸಾಹ ಭರಿತ ರಾಗಿರುತ್ತಾರೋ, ಅಷ್ಟೇ ಉತ್ಸಾಹ ಭರಿತರಾಗಿ ಸರ್ಕಾರದವರು ನಾಳೆ ಹಾಕತಕ್ಕ ತೆರಿಗೆಗಳನ್ನೂ ಕೊಡಬೇಕು. ಹೀಗೆ ನಾವು ಈ ದಿವಸ ಏನೇನು ಅನುಕೂಲಗಳಿಗೆ ಸ್ವಾಗತ ಬಯಸುತ್ತೇವೋ, ಅದೇ ಮಟ್ಟದಲ್ಲಿ ತೆರಿಗೆಗಳಿಗೂ ನಾವು ಸ್ವಾಗತ ನೀಡಬೇಕು. ಮೂಲ ತತ್ವಗಳು ಈ ರೀತಿ ಯಿರುವಾಗ ಮಾನ್ಯ ಸದಸ್ಯರು ಮನಸ್ಸಿಗೆ ಬಂದ ಹಾಗೆ ಸರ್ಕಾರವನ್ನು ಟೀಕೆಮಾಡುತ್ತ ಯಾವ ತೆರಿಗೆಗಳೂ ಬೇಡ, ಆದರೆ ಎಲ್ಲ ಅನುಕೂಲಗಳೂ ಬೇಕೆಂದು ಹೇಳುವುದರ ಅರ್ಥ ನನಗೆ ಆಗುತ್ತಿಲ್ಲ. ಇದೇ ರೀತಿ ಮಾನ್ಯ ಸದಸ್ಯರುಗಳು ಕೆಲವರು ಈ 150 ರೂಪಾಯಿಗಳ ಸಂಬಳ ಏನೂ ಬೇಕಾಗಿಲ್ಲ ವೆಂದು ಹೇಳುತ್ತಿದ್ದವರೆಲ್ಲಾ ಈ ದಿವಸ ಅದನ್ನು ಬಿಟ್ಟುಕೊಡುವುದಕ್ಕೆ ಯಾರೊಬ್ಬರೂ ತಯಾ ರಿರುವುದಿಲ್ಲ. ಇಷ್ಟೆಲ್ಲಾ ಅನುಕೂಲಗಳನ್ನೂ ಕೇಳುತ್ತಿರುವ ಸದಸ್ಯರುಗಳು ತೆರಿಗೆಗಳನ್ನು ಹಾಕಿದರೆ ಅದನ್ನು ಕೊಡಲು ಜನರು ಒಪ್ಪುವು ದಿಲ್ಲವೆಂದು ಹೇಳುವುದು ಸರಿಯಾದ್ದಲ್ಲ. ಹಾಗೆ ಮಾಡತಕ್ಕ ವಾದಗಳನ್ನು ನಾನು ಒಪ್ಪುವುದಿಲ್ಲ. ಸರ್ಕಾರಕ್ಕೆ ಹಣವನ್ನೊದಗಿಸಲು ಮಾರ್ಗ ಗಳನ್ನು ನಾವು ಮೊದಲು ಸೂಚಿಸಬೇಕು......

ಶ್ರೀ ಎಂ ಚಿಕ್ಕಲಿಂಗಯ್ಯ (ಮಳವಳ್ಳಿ ಅನು ಸೂಚಿತ ಜಾತಿಗಳು).—ಈಗ ತಾವೇನು ಟ್ಯಾಕ್ಸ್‌ಗಳನ್ನು ಹಾಕಬೇಕೆಂಬುದಕ್ಕೆ ಪೀಠಿಕೆ ಯನ್ನು ಹಾಕುತ್ತಿದ್ದೀರೋ ?

ಶ್ರೀ ಡಿ. ದೇವರಾಜ ಅರಸ್.—ಎದುರು ಪಕ್ಷದ ಸದಸ್ಯರುಗಳು ಮಾಡಿರತಕ್ಕ ಟೀಕೆಗಳಿಗೆ ಪ್ರತಿಯಾಗಿ ಇಷ್ಟು ವಿಚಾರಗಳನ್ನು ಹೇಳಿ, ಈ ನಾನು ಬಿಲ್ಲನ್ನು ಅನುಮೋದಿಸುತ್ತೇನೆ.

ಶ್ರೀ ಆರ್. ಅನಂತರಾಮು (ಚಾಮುಂಡಿಜ ಪೇಟೆ).—ಅಧ್ಯಕ್ಷರೇ ;

ನಮ್ಮ ಎದುರು ಪಕ್ಷದವರು ಮಾತನಾಡುತ್ತ ನಮ್ಮ ಬಡ್ಜೆಟ್ ಖೋತಾ ಆಗಿರತಕ್ಕ ಬಗ್ಗೆ ಅನೇಕ ಟೀಕೆಗಳನ್ನು ಮಾಡಿದ್ದಾರೆ. ನಾನು ಆ ಟೀಕೆಗಳನ್ನೆಲ್ಲಾ ನಿಧಾನವಾಗಿ ಕೇಳಿದೆ. ಆದರೆ ಅವರು ಮಾಡಿರತಕ್ಕ ಟೀಕೆಗಳು ಒಂದಾದರೂ ರಚನಾತ್ಮಕ ಟೀಕೆಯಾಗಿಲ್ಲವಲ್ಲ ಎಂದು ತಿಳಿ ಸಲು ನನಗೆ ತುಂಬಾ ವ್ಯಥೆಯಾಗುತ್ತದೆ. ನಮ್ಮ ಮಂತ್ರಿಗಳೇ ಈಗಿನ ಹಣಕಾಸಿನ ಮುಗ್ಗಟ್ಟಿಗೆ ಕಾರಣವೆಂದು ಹೇಳಿದ್ದಾರೆ. ಈ ಮುಗ್ಗಟ್ಟನ್ನು ತಪ್ಪಿಸುವುದಕ್ಕೂ, ಜನರಿಗೆ ಸಹಾಯಗಳನ್ನು ಒದಗಿಸುವುದಕ್ಕೂ ಸರ್ಕಾರ ಯಾವ ಪ್ರಯತ್ನ ಗಳನ್ನೂ ನಡೆಸಲಿಲ್ಲವೆಂದು ದೂರು ಹೊರಿಸಿ ದ್ದಾರೆ. ಇಷ್ಟು ಹೇಳಿದರೇ ಹೊರತು ರಚ ನಾತ್ಮಕವಾಗಿ ಒಂದು ಸಲಹೆಯನ್ನಾದರೂ ಅವರು ಕೊಟ್ಟಿಲ್ಲ. ಆದ್ದರಿಂದ ಅವರು ಹೇಳಿರ ತಕ್ಕದ್ದು ನ್ಯಾಯವಾಗಿಲ್ಲವೆಂದು ನಾನು ಅವರಿಗೆ ಪೂರ ವ್ಯಥೆಯಿಂದ ತಿಳಿಸಬೇಕಾಗಿದೆ. ಹೋದ ಅಧಿವೇಶನದಲ್ಲೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮಾನ್ಯ ಸದಸ್ಯರು ಗಳು ಹೊಸದಾಗಿ ಯಾವುದಾದರೂ ತೆರಿಗೆ ಗಳನ್ನು ಹಾಕಬೇಕೆಂದು ಬಯಸಿದರೆ ಅದನ್ನು ಜಾರಿಗೆ ತರಲು ಸರ್ಕಾರ ಸದಾ ಸಿದ್ಧವಾಗಿರು ತ್ತದೆಂದು ಹೇಳಿದ್ದಾರೆ. ಕೋಲಾರದ ಚಿನ್ನದ ಗಣಿಯವರು ನಮ್ಮ ಸರ್ಕಾರಕ್ಕೆ ಈ ಹಿಂದಿ ನಿಂದಲೂ ಗೋಲ್ಡ್ ಡ್ಯೂಟಿ ಎಂಬ ಒಂದು ತೆರಿಗೆಯನ್ನು ಕೊಡುತ್ತಲೇ ಬಂದಿದ್ದರು. ಆದರೆ ಅದನ್ನು 1948ರಲ್ಲಿ ಯಾವ ಕಾರಣದಿಂದಲೋ ನಿಲ್ಲಿಸಿಬಿಟ್ಟರು. ಆದರಿಂದ ನಮ್ಮ ಸರ್ಕಾರಕ್ಕೆ ಬರುತ್ತಿದ್ದಂಥ ಸುಮಾರು ಒಂದೂಕಾಲು ಕೋಟಿ ರೂಪಾಯಿಗಳ ವರಮಾನ ತಪ್ಪಿಹೋಯಿತು.

(ಶ್ರೀ ಆರ್. ಅನಂತರಾಮ್ಮ)

ಆದರೆ ಅದನ್ನು ನಮಗೆ ಇಂಥ ಕಷ್ಟಕಾಲ ಬಂದಿರುವಾಗ ಪುನಃ ಏಕೆ ಹಾಕಬಾರದೆಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಕೆಲವು ದಿನಗಳಿಂದೀಚೆಗೆ ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಡಾಮರಗಳ ಹಾವಳಿ ಜಾಸ್ತಿಯಾಗಿ ಅಲ್ಲಿನ ಜನರಿಗೆ ನಾನಾ ಕಷ್ಟಗಳು ಸಂಭವಿಸಿವೆ. ಆ ಪ್ರದೇಶವನ್ನು ಕ್ಷಾಮ ಪೀಡಿತ ಪ್ರದೇಶವೆಂದು ಸಾರಲಾಗಿದೆ. ಇದನ್ನು ಕೇಳಿದರೆ ನನಗಂತೂ ತುಂಬಾ ವ್ಯಥೆಯಾಗುತ್ತದೆ. ಕೋಲಾರ ಜಿಲ್ಲೆಯು ಚಿನ್ನದನಾಡು! ಆದರೇನು? ಇಂದು ಅಲ್ಲಿನ ಜನರೆಲ್ಲರೂ ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿ ಬಂದಿದೆ. ಆ ಪ್ರದೇಶದ ಪರಿಸ್ಥಿತಿ ಅಷ್ಟು ಭೀಕರ ಪರಿಣಾಮಗೊಂಡಿದ್ದರೂ, ಚಿನ್ನದ ಗಣಿಯವರು ಆ ಕಷ್ಟ ಪರಿಸ್ಥಿತಿ ನೀಗತಕ್ಕ ಬಗ್ಗೆ ಯಾವ ಸಹಾಯವನ್ನೂ ನೀಡದೆ, ತಾವು ಕೊಡುತ್ತಿದ್ದಂಥ ಟ್ಯಾಕ್ಸನ್ನೂ ಕೊಡದಂತೆ ತಪ್ಪಿಸಿಕೊಂಡು ಲಕ್ಷಾಂತರ ರೂಪಾಯಿಗಳ ಘಾಯಿದೆಯನ್ನು ಇಲ್ಲಿ ದುಡಿದು, ಅದನ್ನೆಲ್ಲಾ ಪರದೇಶಕ್ಕೆ ಸಾಗಿಸುತ್ತಿದ್ದಾರೆ. ಇದು ಎಷ್ಟು ಸಂಕಟಕರವಾದುದೆಂಬುದನ್ನು ನಾನು ಪೂರಾ ವ್ಯಥೆಯಿಂದ ತಿಳಿಸಬೇಕಾಗಿದೆ. ಆ ಬಗ್ಗೆ ಒಂದು ಸಲಹೆಯನ್ನು ಕೊಡಲು ನಾನೀಗ ನಿಂತಿದ್ದೇನೆ. ಆ ಗಣಿಯವರಿಗೆ ಅಷ್ಟೊಂದು ಅಪಾರವಾದ ಆದಾಯ ಬರುತ್ತಿದ್ದರೂ ಅವರು ಸರ್ಕಾರಕ್ಕೆ ಆ ಬಗ್ಗೆ ಒಂದು ಕಾಸು ಡ್ಯೂಟಿಯನ್ನೂ ಕೊಡದಂತೆ ತಪ್ಪಿಸಿಕೊಂಡಿರುವುದರಿಂದ ನಮ್ಮ ಸರ್ಕಾರ ಅದನ್ನು ಪುನರ್ವಿಮರ್ಶೆ ಮಾಡತಕ್ಕ ಬಗ್ಗೆ ಆಲೋಚನೆಮಾಡಬೇಕೆಂದು, ಆ ಬಗ್ಗೆ ನಾನು ಈ ಅಧಿವೇಶನಕ್ಕೆ ಒಂದು ಠರಾವನ್ನೇ ಕಳುಹಿಸಿಕೊಟ್ಟಿದ್ದೇನೆ. ಅಲ್ಲದೆ ತತ್ಸಂಬಂಧವಾದ ಒಂದು ಪ್ರಶ್ನೆಯನ್ನು ಸಹ ಕಳುಹಿಸಿದ್ದೇನೆ. ಆದರೆ ಆ ಸಬ್‌ಜೆಕ್ಟುಗಳು ಈ ಅಧಿವೇಶನದಲ್ಲಿ ಚರ್ಚೆಗೆ ಬರಲು ಕಾಲಾವಕಾಶವಿಲ್ಲವೆಂದು ತೋರುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಪರ್ಷಿಯಾ ದೇಶದಲ್ಲಿ ಅಲ್ಲಿನ ಮುಖ್ಯ ಮಂತ್ರಿಗಳು ಹೇಗೆ ಒಂದು ದೃಢನಿಶ್ಚಯದಿಂದ ಎಣ್ಣೆಯ ವಿಚಾರದಲ್ಲಿ ವರ್ತಿಸಿದ್ದಾರೆಂಬುದು ನಾವೀಗ ಮುಖ್ಯವಾಗಿ ಗಮನಿಸಬೇಕಾದ ವಿಚಾರ. ಹೊರ ದೇಶದಿಂದ ಸಾವಿರಾರು ಜನರು ಅಲ್ಲಿಗೆ ಬಂದು ಕೋಟ್ಯಾಂತರ ರೂಪಾಯಿಗಳನ್ನು ದೋಚಿಕೊಂಡು ಹೋಗುತ್ತಿದ್ದುದನ್ನೆಲ್ಲಾ ಅವರು ಈಗ ನಿಲ್ಲಿಸಿ ಬಿಟ್ಟಿದ್ದಾರೆ. ಅದೇ ರೀತಿಯಾಗಿ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಏಕೆ ಈ ಚಿನ್ನದ ಗಣಿಯ ವಿಚಾರದಲ್ಲಿ ಕೈಹಾಕಬಾರದು ಮತ್ತು ಗೋಲ್ಡ್ ಡ್ಯೂಟಿಯನ್ನು ಪುನಃ ಜಾರಿಗೆ ತರಬಾರದು ಎಂದು ನಾನು ಎಚ್ಚರಿಸುತ್ತೇನೆ. ಇದನ್ನು ತಾವು ಕೂಡಲೆ ವಿಮರ್ಶೆಮಾಡಬೇಕೆಂದೂ ಮತ್ತು ಅದನ್ನು ಜಾರಿಗೆ ತರಬೇಕೆಂದೂ ನಾನು ಸಲಹೆಮಾಡುತ್ತೇನೆ. ನಮ್ಮ ನಾಡಿನ ರೇಷ್ಮೆ, ಚಿನ್ನ ಇತ್ಯಾದಿಗಳಿಂದ ಸಾವಿರಾರು ರೂಪಾಯಿಗಳ ವರಮಾನ ಪರದೇಶಕ್ಕೆ ಹೋಗುತ್ತಿದೆ. ಒಂದಾವರ್ತಿ ಅಮೇರಿಕಾ ದೇಶದವರೊಬ್ಬರೊಂದಿಗೆ ಮಾತನಾಡುತ್ತಿದ್ದಾಗ ನಾನು "ನಮ್ಮ ದೇಶ ಬಹಳ ಬಡತನದ್ದು" ಎಂದು ಹೇಳಿದ್ದಕ್ಕೆ ಅವರು "ಅದೇನು ನೀವು ಹೀಗೆ ಹೇಳುತ್ತಿದ್ದೀರಿ! ನಿಮ್ಮ ನಾಡಿನಲ್ಲಿ ಬೇಕಾದಷ್ಟು ಚಿನ್ನವಿದೆ, ನಿಮ್ಮ ನಾಡಿನ ರೇಷ್ಮೆ ಪ್ರಪಂಚದಲ್ಲೇ ಪ್ರಖ್ಯಾತಿ ಪಡೆದಿದೆ, ನಿಮ್ಮಲ್ಲಿ ಲೋಕ ಪ್ರಸಿದ್ಧವಾದ ಸಾಬೂನನ್ನು ತಯಾರಿಸುತ್ತಿದ್ದೀರಿ, ಹಾಗಿದ್ದೂ, ನಿಮ್ಮದು ಬಹಳ ಬಡತನದ ದೇಶವೆಂದು ಹೇಳುತ್ತಿದ್ದೀರಲ್ಲಾ" ಎಂದು ತಿಳಿಸಿದರು. ಅದನ್ನು ಕೇಳಿ ನನಗೆ ಬಹಳ ನಾಚಿಕೆಯಾಯಿತು.

ಇಂದು ದಕ್ಷಿಣ ಆಫ್ರಿಕಾದಲ್ಲಿಯೂ ಈ ರೀತಿ ಇದೆ. ಅವರು ಚಿನ್ನದ ಮೇಲಿನ ಡ್ಯೂಟಿ ತೆಗೆದುಕೊಳ್ಳುತ್ತಿದ್ದಾರೆ.

2–30 P.M.

Mr. SPEAKER.—I wish the Hon'ble Member will confine himself to this Bill.

ಶ್ರೀ ಆರ್. ಅನಂತರಾಮ್ಮ.—ಆ ಬಗ್ಗೆಯೇ ನಾನೊಂದು ಸಲಹೆ ಕೊಡುತ್ತಿದ್ದೇನೆ; ಈ ಅಪ್ರೋಪ್ರಿಯೇಷನ್ ಬಿಲ್ಲಿಗೆ ಸಹಾಯಕವಾಗಿಯೇ ಒಂದು

ಮಾತು ಹೇಳುತ್ತಿದ್ದೇನೆ. ಅಷ್ಟು ಹೆಚ್ಚಿಗೆ
ಆದಾಯ ಅವರಿಗೆ ಬರುತ್ತಿದ್ದರೂ ಒಂದು ಕಾಸು
ಡ್ಯೂಟಿಯನ್ನೂ ಕೊಡದೆ ತಪ್ಪಿಸಿಕೊಂಡು
ತಿರುಗುತ್ತಿದ್ದಾರಲ್ಲಾ! ಆ ವಿಚಾರದಲ್ಲಿ ಸರ್ಕಾರ
ದವರೇಕೆ ಗಮನಕೊಟ್ಟು ಪುನಃ ಡ್ಯೂಟಿ ಹಾಕ
ಕೂಡದೆಂದು ನಾನು ಯೋಚನೆಮಾಡುತ್ತಿದ್ದೇನೆ.
ಈ ವಿಚಾರದಲ್ಲಿ ಒಂದು ನಿರ್ಣಯವನ್ನು ಮತ್ತು
ಒಂದು ಪ್ರಶ್ನೆಯನ್ನು ಕೂಡ ಕಳುಹಿಸಿದ್ದೇನೆ.
ಬಹುಶಃ ಆವೆರಡೂ ಸಭೆಯಲ್ಲಿ ಚರ್ಚೆಗೆ ಬರಲಾ
ರವು. ಮಾನ್ಯ ಮುಖ್ಯ ಮಂತ್ರಿಗಳೂ ಈ ವಿಚಾರ
ವನ್ನು ಆಗಲೇ ಯೋಚನೆಮಾಡಿದ್ದೇವೆಂದು
ಹೇಳಿದರು. ಈ ಸಂದರ್ಭದಲ್ಲಿ ನಾವು ಪರ್ಷಿ
ಯಾದ ಉದಾಹರಣೆಯನ್ನು ನಮ್ಮ ಮನಸ್ಸಿ
ನಲ್ಲಿಟ್ಟುಕೊಳ್ಳಬೇಕು. ಅಲ್ಲಿನ ಮುಖ್ಯ ಮಂತ್ರಿ
ಗಳು ಹೇಗೆ ಪರದೇಶದವರು ಎಣ್ಣೆಯನ್ನೆಲ್ಲಾ
ತೆಗೆದುಕೊಂಡು ಹೋಗುತ್ತಿದ್ದುದನ್ನು ನಿಲ್ಲಿಸಿ
ದರೆಂಬುದು ಗಮನಾರ್ಹವಾದ ವಿಚಾರ. ಸಾರ್ವ
ಜನಿಕರ ಹಣವನ್ನು ದೋಚಿಕೊಂಡು ಹೋಗು
ತ್ತಿದ್ದುದನ್ನು ಅವರು ನಿಲ್ಲಿಸಿದರು. ಅದೇ ರೀತಿ
ಯಾಗಿ ನಮ್ಮ ಮುಖ್ಯ ಮಂತ್ರಿಗಳೂ ನಮ್ಮ
ದೇಶದಿಂದ ದೋಚಿಕೊಂಡು ಹೋಗುತ್ತಿರುವು
ದನ್ನು ನಿಲ್ಲಿಸಬೇಕು. ಮಾನ್ಯ ಮಂತ್ರಿಗಳು
ಇದನ್ನು ಯೋಚನೆಮಾಡಿ ನಮ್ಮ ದೇಶದಲ್ಲಿ
ಪುನಃ ಚಿನ್ನದ ಮೇಲೆ ಡ್ಯೂಟಿ ಹಾಕುವ ಕಾನೂ
ನನ್ನು ತರುವುದು ಒಳ್ಳೆಯದು. ಮೈಸೂರಿನ
ಚಿನ್ನ, ಮೈಸೂರಿನ ರೇಷ್ಮೆ, ಮೈಸೂರಿನ ಸಾಬೂ
ನು—ಪ್ರಪಂಚಕ್ಕೇ ಹೆಸರುವಾಸಿಯಾಗಿವೆ!
ಪರದೇಶಕ್ಕೆ ಹೋಗಿ ಅಮೇರಿಕಾದಿಂದ ಬಂದ
ವರಿಂದ ಕೇಳಿದ್ದೇವೆ, ಅಲ್ಲಿನವರು ನಮ್ಮಲ್ಲಿರುವ
ಚಿನ್ನ, ರೇಷ್ಮೆ ಮುಂತಾದುವುಗಳನ್ನು ನೋಡಿ
ನಮ್ಮದು ಬಡ ದೇಶವೆಂದರೆ ನಂಬುವುದು ಹೇಗೆ
ಎನ್ನುತ್ತಾರಂತೆ. ಹೊರಗಡೆಯವರಲ್ಲಿ ನಮ್ಮ
ವಿಷಯದಲ್ಲಿ ಇಷ್ಟು ಒಳ್ಳೆಯ ಅಭಿಪ್ರಾಯವಿರು
ವಾಗ ನಾವೇಕೆ ಈ ಡ್ಯೂಟಿ ವಿಧಿಸಿ ಹೆಚ್ಚಿಗೆ ಹಣ
ಪಡೆಯಕೂಡದು? ನಮುಗವರು ಸರಿಯಾದ
ಲೆಕ್ಕ ಪತ್ರಗಳನ್ನು ಕೊಡತ್ತಿಲ್ಲವೆಂದು ನನಗೆ
ಗೊತ್ತಿದೆ. ಏನೋ ಕಣ್ಣೊರಸವುದಕ್ಕೆ ಕೊಡು
ತ್ತಾರೆ ಅಷ್ಟೆ. ಲಕ್ಷಾಂತರ ರೂಪಾಯಿಗಳ
ಲಾಭವನ್ನು ಅವರು ಪಡೆಯುತ್ತಿದ್ದಾರೆ. ಇದನ್ನು
ತಡೆಗಟ್ಟಲೇಬೇಕು. ಈ ಸಭಾ ಸದಸ್ಯರೆಲ್ಲರೂ
ಈ ವಿಷಯದಲ್ಲಿ ಮುಖ್ಯ ಮಂತ್ರಿಗಳವರಿಗೆ
ಬೆಂಬಲ ನೀಡುವುದಕ್ಕೆ ಸಿದ್ಧವಾಗಿದ್ದೇವೆ.
ಚಿನ್ನದ ನಾಡೆಂದು ಹೆಸರು ಪಡೆದ ಈ ನಾಡು
ಹೊಟ್ಟೆಗಿಲ್ಲದೆ ಸಾಯಬೇಕಾಗಿ ಬಂದಿದೆ! ಆದ
ರಿಂದ ಇದನ್ನೆಲ್ಲಾ ಯೋಚನೆಮಾಡಿ. ಗೋಲ್ಡ್
ಡ್ಯೂಟಿ ಆಕ್ಟನ್ನು ಮತ್ತೆ ತರಬೇಕು. ಇದ
ರಿಂದ ಒಂದು ಕೋಟಿ ರೂಪಾಯಿ ಬಂದರೆ ಅದ
ನ್ನೆಲ್ಲಾ ಬೇಕಾದರೆ ಕೋಲಾರ ಜಿಲ್ಲೆಯ ಅಭಿ
ವೃದ್ಧಿಗೆ ಮೀಸಲಾಗಿಟ್ಟು ಖರ್ಚು ಮಾಡೋಣ.
ಈ ಹಣವನ್ನು ಖರ್ಚುಮಾಡಿದರೆ ಇನ್ನು
ಹತ್ತಾರು ವರ್ಷಗಳಲ್ಲೇ ನಮ್ಮ ಸಂಸ್ಥಾನದಲ್ಲಿ
ಬೇಕಾದಷ್ಟು ಆಹಾರ ಬೆಳೆಸಬಹುದು. ತನ್ಮೂ
ಲಕ ನಮ್ಮ ಕಷ್ಟವೆಲ್ಲಾ ನಿವಾರಣೆಯಾದಂತಾಗು
ತ್ತದೆ. ಆದ್ದರಿಂದ ಈ ಬಿಲ್ಲನ್ನು ನಾನು ಸ್ವಾಗತಿ
ಸುತ್ತೇನೆ. ಈ ಕಷ್ಟಕಾಲದಲ್ಲಿ ಅವರು
ಕೋಟ್ಯಾಂತರ ರೂಪಾಯಿಗಳನ್ನು ತೆಗೆದು
ಕೊಂಡರೂ ಅದು ಅವಶ್ಯಕವಾದುದೇ. ಆ ಕಾರಣ
ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ನಾನು ಸಮರ್ಥಿ
ಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವ
ಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂ
ಟರಿ ಡಿಮ್ಯಾಂಡ್‌ನಲ್ಲಿ ಸುಮಾರು ಒಂದು ಕೋಟಿ
75 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ.
ಮೊನ್ನೆತಾನೆ ಬಡ್ಜೆಟ್ ಮುಗಿದು 5 ಲಕ್ಷ ರೂಪಾ
ಯಿಗಳನ್ನು ಲಿಫ್ಟ್ ಇರಿಗೇಷನ್ನಿಗಾಗಿ ಮುಡು
ಪಾಗಿಟ್ಟಿದ್ದನ್ನು ಮೈನರ್ ಕೆರೆಗಳ ರೆಸ್ಟೊರೇಷನ್
ಸಂಬಂಧವಲ್ಲಿ ಹೂಳು ತೆಗೆಯುವುದಕ್ಕೆ ರೀ-
ಅಪ್ರೋಪ್ರಿಯೇಟ್ ಮಾಡಿದ ವಿಷಯವನು
ಪ್ರಸ್ತಾಪಿಸಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಈ
ಹಣವನ್ನು ಲಿಫ್ಟ್ ಇರಿಗೇಷನ್ನಿಗೆ ಖರ್ಚು
ಮಾಡಿ ನಾಲ್ಕು ಇಂಚಿನ ಎರಡುನೂರು ಪಂಪು
ಗಳನ್ನು ಹಾಕಿಸಿದ್ದರೆ ಎಷ್ಟೋ ಚೆನ್ನಾಗಿತ್ತು.
ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹಿರಿ
ಯೂರು ವ್ಯಾಲಿಯಲ್ಲಿ ಇರಿಗೇಷನ್ ಪಂಪುಗಳಿ
ಗಾಗಿ 739 ಅರ್ಜಿಗಳು ಬಂದು 298 ಪಂಪುಗ
ಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟದೆಯೆಂದು

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ)

ಹೇಳಿದ್ದೀರಿ. ಪೂರ್ತಿಯಾಗಿ ಎಲ್ಲರಿಗೂ ಸರಬರಾಯಿ ಮಾಡಬೇಕಾದರೆ ವಿದ್ಯುಚ್ಛಕ್ತಿ ಇಲಾಖೆಗೆ ಸುಮಾರು 35 ಲಕ್ಷ ರೂಪಾಯಿಗಳು ಬೇಕಾಗುತ್ತವೆಂದು ಉತ್ತರ ಕೊಟ್ಟಿದ್ದೀರಿ. ಹೀಗಿರುವಲ್ಲಿ ನೀರಿನ ಅನುಕೂಲವಿದ್ದ ಕಡೆ ಈ ಐದು ಲಕ್ಷ ರೂಪಾಯಿಗಳನ್ನು ಪಂಪುಗಳಿಗೇ ಖರ್ಚು ಮಾಡಿದ್ದರೆ ಒಂದೊಂದು ಪಂಪಿನಿಂದ ಸುಮಾರು ಮೂವತ್ತು ಎಕರೆಗಳನ್ನು ಸಾಗು ಮಾಡಬಹುದಾಗಿತ್ತು, 6,000 ಎಕರೆಗಳಿಗೆ ವ್ಯವಸಾಯಕ್ಕೆ ನೀರು ಕೊಡಬಹುದಾಗಿತ್ತು, ಎಕರೆಗೆ ಹತ್ತು ಪಲ್ಲ ಬತ್ತ ಬೆಳೆಯುತ್ತದೆಂದು ಅಂದಾಜು ಮಾಡಿದರೂ 60,000 ಪಲ್ಲ ಬತ್ತ ಅಥವಾ ರಾಗಿ ಬೆಳೆಯಬಹುದಾಗಿತ್ತು. ಅಂದರೆ, ಪಲ್ಲಕ್ಕೆ 25 ರೂಪಾಯಿಗಳಂತೆ ಲೆಕ್ಕಹಾಕಿದರೆ ಸುಮಾರು 15 ಲಕ್ಷ ರೂಪಾಯಿಗಳ ಆಹಾರ ಸಾಮುಗ್ರಿಗಳನ್ನು ನಮ್ಮ ರೈತರೇ ಬೆಳೆಯುತ್ತಿದ್ದರು ಎಂದು ಖಚಿತವಾಗಿ ಕಂಡುಬಂದರೂ ಮಾಡಿಲ್ಲ. ಒಂದು ಕಡೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನಿಂದ ಸ್ಯಾಂಕ್ಷನ್ ಆಗಿ ಪವರ್ ಸಪ್ಲೈ ಆಗಿದ್ದರೂ ರೈತರುದುಡ್ಡಿಲ್ಲದೆ ಪಂಪುಗಳನ್ನು ಹಾಕಿಕೊಂಡಿಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ಆ ಹಣವನ್ನೇ ರೀ-ಅಪ್ರೋಪ್ರಿಯೇಷನ್ ಮಾಡುವ ಅವಶ್ಯಕತೆಯಿದೆಯೆನ್ನುತ್ತೀರಿ. ನೀರಿನ ಅನುಕೂಲತೆಯಿರುವ ಪ್ರತಿಯೊಂದು ಸ್ಥಳದಲ್ಲೂ ಎಲ್ಲಿ ಎಲೆಕ್ಟ್ರಿಕ್ ದೀಪಗಳನ್ನು ಕೊಟ್ಟಿದೆಯೋ ಅಲ್ಲಿ ಎರಡು-ಮೂರು ಪಂಪುಗಳನ್ನೇರ್ಪಡಿಸಿ 5"-6" ಪೈಪುಗಳನ್ನು ಹಾಕಿಸಿ ಕೊಟ್ಟು, ಸರ್ಕಾರದವರು ಅರ್ಧ ಹಣ ಹಾಕಿ ರೈತರನ್ನು ಇನ್ನರ್ಧ ಕೊಡಿಯೆಂದು ಕೇಳಿದ್ದರೂ ಸಂತೋಷವಾಗಿ ಕೊಡುತ್ತಿದ್ದರು. ಅದು ಬಿಟ್ಟು ಲಿಫ್ಟ್ ಇರಿಗೇಷನ್ನಿಗೆ ಕೊಟ್ಟದ್ದ ಹಣವನ್ನು ಬೇರೆಯ ಕೆಲಸಕ್ಕೆ ಉಪಯೋಗಿಸಿದ್ದು ನ್ಯಾಯವಲ್ಲವೆಂದು ಹೇಳಬೇಕಾಗಿದೆ. ಇವನ್ನೆಲ್ಲಾ ಕಾಲಕ್ಕೆ ಸರಿಯಾಗಿ ಮಾಡಿದ್ದರೆ ನಮಗೀಗ ಇಷ್ಟು ಕಷ್ಟವೇ ಉಂಟಾಗುತ್ತಿರಲಿಲ್ಲ. ಮಲೆನಾಡಿನಲ್ಲಿ ಈಗ ಮಳೆ ಕಡಮೆಯಾಗಿರುವ ಈ ಕಾಲದಲ್ಲಿ ತುಂಗಾ ನದಿ ಭದ್ರಾ ನದಿಗಳ ನೀರು ವೃಥಾ ಸಮುದ್ರಕ್ಕೆ ಹೋಗುತ್ತಿರುವುದನ್ನು ಮೇಲಕ್ಕೆತ್ತುವುದಕ್ಕೆ ಯಾವುದಾದರೂ ಯೋಜನೆಯನ್ನು ಮಾಡಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಶಿವಮೊಗ್ಗದಲ್ಲಿ ಈಗ 5-6 ವರ್ಷಗಳ ಹಿಂದೆಯೇ ಆರು ಪಂಪುಗಳನ್ನು ಹಾಕುವುದಕ್ಕೆ ಮಂಜೂರಾತಿ ಕೊಟ್ಟಿದ್ದದನ್ನು ಬೇರೆ ಕೆಲಸಕ್ಕೆ ಉಪಯೋಗಿಸಿದಿರಿ. ಆದ್ದರಿಂದ ಲಿಫ್ಟ್ ಇರಿಗೇಷನ್ನಿಗೆ ಕೊಟ್ಟದ್ದ ಹಣವನ್ನು ಮತ್ತೆ ಪುನಃ ಲಿಫ್ಟ್ ಇರಿಗೇಷನ್ನಿಗೇ ಉಪಯೋಗಿಸುತ್ತೀರೆಂದು ನಂಬಿದ್ದೇನೆ. 20 ಲಕ್ಷ ರೂಪಾಯಿಗಳನ್ನು ಕ್ಷಾಮ ನಿವಾರಣಾ ಕಾರ್ಯಗಳಿಗಾಗಿ ಮತ್ತು ಗಂಜೀ ಕೇಂದ್ರಗಳನ್ನು ತೆರೆಯುವುದಕ್ಕಾಗಿ ಕೇಳಿದ್ದೀರಿ. ಹೀಗೆ ಗಂಜಿ ಕೇಂದ್ರಗಳನ್ನೇರ್ಪಡಿಸುವುದು ನ್ಯಾಯವಾದರೂ, ಯಾರಿಗೇ ಆಗಲಿ, ಅವರಿಗೊಂದು ಉದ್ಯೋಗವನ್ನು ಕಲ್ಪಿಸಿಕೊಟ್ಟು ಆ ಹಣದಿಂದ ಜೀವನ ನಡೆಸುವಂತೆ ವ್ಯವಸ್ಥೆ ಮಾಡುವುದು ಆವಶ್ಯಕ; ಇಲ್ಲದೆ, ಬರೀ ಗಂಜೀ ಕೇಂದ್ರಗಳನ್ನು ಏರ್ಪಡಿಸಿ ಉದ್ಯೋಗಗಳನ್ನು ಕೊಡದೆ ಅವರಿಗೆ ಆಹಾರವನ್ನೊಗಿಸುವುದು ಒಳ್ಳೆಯದಲ್ಲ. ಈಗ ಸಾಮಾನ್ಯವಾಗಿ ನಾವು ನೋಡಿರುವಂತೆ, ಹತ್ತಾರು ವರ್ಷಗಳಿಂದ ಮಳೆ ಬಾರದ ಪ್ರದೇಶಗಳಲ್ಲಿ ಕ್ಷಾಮ ತಲೆದೋರುತ್ತಿದೆ. ಅಲ್ಲಿ ತಾತ್ಕಾಲಿಕವಾಗಿ ಏನೇ ಪರಿಹಾರ ಕ್ರಮ ಕೈಕೊಂಡರೂ ಮುಂದೆ ಕ್ಷಾಮ ಬರುವುದು ತಪ್ಪಲಾರದು. ಆದ್ದರಿಂದ ಸಾರ್ವಜನಿಕರ ಹಣವನ್ನು ಕೇವಲ ಗಂಜಿ ಕೇಂದ್ರಗಳನ್ನು ಏರ್ಪಡಿಸಿ ತಾತ್ಕಾಲಿಕ ಪರಿಹಾರವನ್ನೊದಗಿಸುವುದಕ್ಕೆ ಉಪಯೋಗಿಸಕೂಡದು. ಅದಕ್ಕೆ ಬದಲು ಯಾವ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಅಲ್ಲಿನ ಜನಗಳಿಗೆ ವರ್ಷಂಪ್ರತಿ ಉದ್ಯೋಗವನ್ನು ಕೊಡಬಹುದೆಂಬುದನ್ನು ಯೋಚನೆ ಮಾಡಬೇಕು. ತಾವೀಗ 20-30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ಹೇಳಿದ್ದೀರಿ. ಇಷ್ಟಾದರೂ ಅಲ್ಲಿನ ಜನಗಳಿಗೆ ಒಂದು ಖಾಯಂ ಉದ್ಯೋಗವನ್ನು ಕಲ್ಪಿಸುವುದಕ್ಕೆ ಇದರಲ್ಲಿ ಯಾವ ಭಾಗವನ್ನೂ ಖರ್ಚು ಮಾಡಿರುವಂತೆ ಕಂಡು ಬರುವುದಿಲ್ಲ.

ಆಮೇಲೆ 10ನೆಯ ಡಿಮ್ಯಾಂಡ್‌ನಲ್ಲಿ 37 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ಇದು ಸಾಲದ ಬಡ್ಡಿಗಾಗಿ ಕೊಡಬೇಕಾದ್ದೆಂದು ಹೇಳಿದ್ದೀರಿ. ಈ ಹಣವನ್ನು ಕೊಡಬೇಕಾದ ಅವಶ್ಯಕತೆ ಬರುತ್ತದೆಂದು ಹಿಂದೆ ಬಜ್ಜೆಟ್ ತಯಾರು ಮಾಡುವಾಗಲೇ ಗೊತ್ತಿರಲಿಲ್ಲವೇ ? ಆಗಲೇ ಈ ಹಣವನ್ನು ಕೇಳಬಹುದಾಗಿತ್ತು. ಅದು ಬಿಟ್ಟು ಈಗ ಮಧ್ಯೆ ಕೇಳುವುದಕ್ಕೆ ಹೊಸದಾಗಿ ಬಂದಂಥ ಸಂದರ್ಭಗಳಾದರೂ ಏನೆಂಬುದೇ ನನಗರ್ಥವಾಗುವುದಿಲ್ಲ.

ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ತಾವು ಆಹಾರವನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿದಂತೆ ಕಾಣುವುದಿಲ್ಲ. ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಮ್ಮ ಜಿಲ್ಲೆಯಲ್ಲಿ ಕೆಲವು ಸಣ್ಣ ಸಣ್ಣ ಕಾಮಗಾರಿಗಳನ್ನು ನಡೆಸಿದ್ದಾರೆ. 3-4 ಲಕ್ಷ ಪಲ್ಲಗಳನ್ನು ಹೆಚ್ಚಿಗೆ ಬೆಳೆಯಲು ಸಾಧ್ಯವಿತ್ತು. ಈಗ ಹೊರಗಡೆಯಿಂದ 15 ಸಾವಿರ ಟನ್ನುಗಳನ್ನು ತರಿಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಬದಲು ನಮ್ಮ ಜಿಲ್ಲೆಯಲ್ಲಿ ಕೇವಲ ಕೆಲವೇ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೂ, ಲಿಫ್ಟ್ ಇರಿಗೇಷನ್ನಿಗೂ ಸಹಾಯ ಮಾಡಿದ್ದರೆ ನಾವೇ ಅದನ್ನು ಬೆಳೆದು ಕೊಳ್ಳಬಹುದಾಗಿತ್ತು.

ಆಮೇಲೆ 26ನೆಯ ನಂಬರಿನ ಡಿಮ್ಯಾಂಡ್‌ನಲ್ಲಿ ಗಂಧದ ಮರವನ್ನು ಅಮೇರಿಕಕ್ಕೆ ಕಳುಹಿಸಿ ಕೊಡಲು ಹೆಚ್ಚಿಗೆ ಹಣ ಆಗಬೇಕೆಂದು ಹೇಳುತ್ತೀರಿ. ಹೀಗೆ ಗಂಧದ ಮರವನ್ನು ಕಳುಹಿಸುವುದಕ್ಕೆ ಬದಲಾಗಿ ನಾವೇ ಇಲ್ಲಿ ಗಂಧದ ಎಣ್ಣೆಯನ್ನು ತಯಾರಿಸಿ ಎಣ್ಣೆಯನ್ನೇ ಅಮೇರಿಕಾಕ್ಕೆ ಕಳುಹಿಸುವುದು ಉತ್ತಮ. ಈಗ ನಮ್ಮ ಗಂಧದ ಎಣ್ಣೆ ಕಾರ್ಖಾನೆಯು ವರ್ಷಕ್ಕೆ ಮೂರು ತಿಂಗಳು ಕೆಲಸವಿಲ್ಲದೆ ಇದೆ. ಆದ್ದರಿಂದ ಅಮೇರಿಕಕ್ಕೆ ಕಳುಹಿಸಿ ಅಲ್ಲಿ ಎಣ್ಣೆ ತೆಗೆಯಿಸಿ ಮಾರಿಸುವ ಬದಲು ಇಲ್ಲೇ ತೆಗೆಸಲಿಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಅದಕ್ಕೆ ಡ್ಯೂಟಿ ಹೆಚ್ಚಿಗೆ ಕೊಡಬೇಕಾಗಿ ಬರುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮರವನ್ನು ಸಾಗಿಸುವ ಚಾರ್ಜಿಗಿಂತ ಡ್ಯೂಟಿ ಹೆಚ್ಚಾಗುತ್ತದೆಯೇ ?

ಈಗ ಮೊನ್ನೆ ತಾನೆ ತಾವು ಆಹಾರ ಪದಾರ್ಥಗಳನ್ನು ಡೀ-ಕಂಟ್ರೋಲ್ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಪ್ರಕಾರ ಬೆಂಗಳೂರು, ಕೆ.ಜಿ.ಎಫ್. ಮತ್ತು ದಾವಣಗೆರೆ ಪಟ್ಟಣಗಳಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವುದಕ್ಕಾಗಿ ಶಿವಮೊಗ್ಗ ಜಿಲ್ಲೆಯಲ್ಲಿ 6 ಲಕ್ಷ, 8 ಲಕ್ಷ ಪಲ್ಲಗಳನ್ನು ಶೇಖರಿಸಬೇಕೆಂಬ ಯೋಚನೆ ಮಾಡಿದ್ದೀರಿ. ಈ ದವಸಕ್ಕೆ ಹಿಂದಿನಂತೆಯೇ 15ರೂ, 18 ರೂ, 19 ರೂಪಾಯಿಗಳನ್ನು ಬಿಟ್ಟು ಹೆಚ್ಚಿಗೆ ದರವನ್ನು ಕೊಡಬೇಕು. ಇಲ್ಲದಿದ್ದರೆ ರೈತರಿಗೆ ಅನುಕೂಲ ಮಾಡಿದಂತಾಗುವುದಿಲ್ಲ. ಆ ಪ್ರಕಾರ ಈ ವರ್ಷ ಹೆಚ್ಚಿನ ಬೆಲೆಯನ್ನು ಕೊಡುವುದಕ್ಕೆ ಈ ಸಪ್ಲಿಮೆಂಟರಿ ಗ್ರ್ಯಾಂಟಿನಲ್ಲಿ ಏನೂ ಅವಕಾಶಮಾಡಿಲ್ಲ. ನಮ್ಮ ದೇಶದಲ್ಲಿ ಹೆಚ್ಚಿಗೆ ಬೆಳೆ ಬೆಳೆಸಬೇಕಾದರೆ ಬೋನಸ್ ರೂಪದಲ್ಲಾದರೂ ಕೊಟ್ಟು ಸಹಾಯಮಾಡಿ ದವಸವನ್ನು ಪ್ರೊಕ್ಯೂರ್ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ರೀ-ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಅದಕ್ಕೆ ಅವಕಾಶ ಮಾಡಬೇಕೆಂದು ಹೇಳಿ ಇದನ್ನು ಅನುಮೋದಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೇ 1952-53ನೆಯ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಒಂದು ಕೋಟಿ ರೂಪಾಯಿಗಳ ಖೋತಾ ಬಂದಿರುವುದಾಗಿ ತೋರಿಸಿದ್ದೀರಿ, ಆದರೆ ನಮ್ಮ ಪಕ್ಷದ ನಾಯಕರು ಎಲ್ಲಾ ಅಂಕಿಅಂಶಗಳನ್ನು ವಿಮರ್ಶಿಸಿ ಹೇಗೆ ನಮಗೆ ಉಂಟಾಗಿರುವ ಖೋತಾ $4\frac{1}{2}$ ಕೋಟಿ ರೂಪಾಯಿಗಳಷ್ಟಾಗಿದೆಯೆಂದು ಬಜ್ಜೆಟ್ ಅಧಿವೇಶನದಲ್ಲೇ ತಿಳಿಸಿದರು. ಈಗ ಈ ಸಪ್ಲಿಮೆಂಟರಿ ಬಜ್ಜೆಟ್ಟಿನಲ್ಲಿರುವ ಮೊಬಲಗನ್ನೂ ಸೇರಿಸಿಕೊಂಡರೆ ನಮಗೆ ಸುಮಾರು $5\frac{1}{2}$ ಯಿಂದ ಆರು ಕೋಟಿ ರೂಪಾಯಿಗಳವರೆಗೂ ಖೋತಾ ಬಂದಿದೆಯೆಂದು ಹೇಳಬೇಕಾಗಿದೆ. ಹೇಗೆಂದರೆ

(ಶ್ರೀ ಯು. ಎಂ. ಮಾದಪ್ಪ)

ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ತೋರಿಸಿರುವ ಮೊಬಲಗನ್ನೂ ಕನ್ಸಾಲಿಡೇಟೆಡ್ ಫಂಡಿಗೆ ಟ್ರಾನ್ಸ್ಫರ್ ಮಾಡಿತ್ತೆ? ಅಥವಾ ಕೆಲವನ್ನು ಮಾತ್ರ ಮಾಡಿತ್ತೇ? ಜೊತೆಗೆ ಖರ್ಚು ಹೆಚ್ಚಿಗೆ ಆಗುತ್ತಿದೆಯೆಂದು ಅನೇಕ ಅಂಶಗಳಿಂದ ಕಾಣ ಬರುತ್ತದೆ; ಸ್ಟೇಟ್ ಟ್ರಾನ್ಸ್ಪೋರ್ಟ್ ಇಲಾಖೆ ಮೇಲ್ವಿಚಾರಣೆಗೆ ಡೆಪ್ಯುಟಿ ಕಮಿಷನರ ದರ್ಜೆಯ ಅಧಿಕಾರಿ ಬೇಕಾಗಿಲ್ಲವೆಂದು ಕೆಲವು ಸದಸ್ಯರು ಹೇಳಿದ್ದಾರೆ. ಹಾಗೆ ನೇಮಕ ಮಾಡಿಕೊಂಡರೆ ನಮ್ಮ ಸಂಸ್ಥಾನದ ಆಯವ್ಯಯ ಪಟ್ಟಿ ಯಾವ ರೀತಿ ಏರುಪೇರಾಗುತ್ತದೆಂಬ ವಿಷಯವು ಎಲ್ಲರೂ ಯೋಚನೆ ಮಾಡಬೇಕಾದ ವಿಚಾರ. ಇಷ್ಟಾದರೂ ತಾವು ಡೆಪ್ಯುಟಿ ಕಮಿಷನರ ದರ್ಜೆಯವರೊಬ್ಬರನ್ನು ನೇಮಕವಾಡಿಕೊಳ್ಳುವ ವಿಷಯದಲ್ಲಿ ಸ್ಥಿರ ಮನಸ್ಸು ಮಾಡಿರುವುದನ್ನು ನೋಡಿದರೆ ತಾವೇನು ಆಯವ್ಯಯಗಳನ್ನು ವಿಚಕ್ಷಣೆಯಿಂದ ಪರಿಶೀಲಿಸಿ ಮಾಡುತ್ತಿದ್ದಿರೋ ಅಥವಾ ಬರೀ ವ್ಯಯ ಮಾಡುತ್ತಿದ್ದೀರೋ ಎನಿಸುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸ್ಟೇಟ್ ಟ್ರಾನ್ಸ್ಪೋರ್ಟ್ ಅಥಾರಿಟಿ ಬೇಕಿಲ್ಲವೆಂತಲೇ?

ಶ್ರೀ ಯು. ಎಂ. ಮಾದಪ್ಪ.—ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಈ ರೀತಿ ಹೆಚ್ಚಿಸಿಕೊಂಡು ಹೋದರೆ ನಮ್ಮ ದೇಶದ ಆಯವ್ಯಯ ಸರಿಯಾಗಿರುವುದಿಲ್ಲವೆಂಬ ಅಂಶವನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. Efficiency does not depend upon the remuneration or salary that we are giving. ನಾವು ಸ್ವರಾಜ್ಯ ಸಂಪಾದನೆ ಮಾಡಿರುವಾಗ ಅದನ್ನು ಕಾಪಾಡಿಕೊಳ್ಳಬೇಕಾದರೆ ಉನ್ನತಾಧಿಕಾರಿಗಳು ದೇಶ ಕ್ಷೇಮದ ದೃಷ್ಟಿಯಿಂದ ದೇಶದ ಜನ ಜೀವನ ಮಟ್ಟಕ್ಕೆ ತಕ್ಕಂತೆ ಸಂಬಳ ಸಾರಿಗೆಗಳನ್ನು ತೆಗೆದುಕೊಳ್ಳಬೇಕೆಂಬುದು ಒಂದು ತತ್ವ. ನನಗೆ ಕಂಡು ಬಂದದ್ದರಲ್ಲಿ, ಕಾರಿನ ವಿಷಯದಲ್ಲಿ ಮುಖ್ಯ ಮಂತ್ರಿಗಳು ಅಭಿಪ್ರಾಯಪಟ್ಟಿರುವುದು ಶೋಚನೀಯ.

Mr. SPEAKER.—I think enough has been said on this subject.

ಶ್ರೀ ಯು. ಎಂ. ಮಾದಪ್ಪ.—ಒಂದೆರಡು ವಿಷಯ ಮಾತ್ರ ತಿಳಿಸಬೇಕಾಗಿದೆ.

ಹಿಂದೆ ಆರು ಹೊಸ ಕಾರುಗಳನ್ನು ತೆಗೆದು ಕೊಂಡಿದ್ದರು ಎಂದು ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಈಗಿನ ಮಂತ್ರಿಮಂಡಲದಲ್ಲಿರುವವರು ಆರು ಜನರು ಈಗಿನ ಮುಖ್ಯ ಮಂತ್ರಿಗಳಲ್ಲಿರುವ ಕಾರು ಒಂದು, ಹಿಂದಿನ ಮುಖ್ಯ ಮಂತ್ರಿಗಳಲ್ಲಿದ್ದ ಕಾರು ಒಂದು, ಒಟ್ಟು ಎಂಟು ಕಾರುಗಳಾದವು, ಆದ್ದರಿಂದ ಹಿಂದಿದ್ದ ಕಾರುಗಳಲ್ಲಿ ಒಂದು ಉಳಿಯುತ್ತಿತ್ತು.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಇಷ್ಟು ಲೆಕ್ಕ ಹಾಕುತ್ತಾ ಇರುವುದನ್ನು ನೋಡಿದರೆ, ಅವರು ಉದ್ದೇಶಪೂರ್ವಕವಾಗಿ ಲೆಕ್ಕ ಹಾಕುತ್ತಿದ್ದಾರೋ ಅಥವಾ ವಾಸ್ತವವಾಗಿ ಲೆಕ್ಕ ಹಾಕುತ್ತಿದ್ದಾರೋ ಗೊತ್ತಿಲ್ಲ.

If the Hon'ble Member resumes his seat, I will allay his fears.

ಶ್ರೀ ಯು. ಎಂ. ಮಾದಪ್ಪ—ಮುಖ್ಯ ಮಂತ್ರಿಗಳು ಶ್ರೀ ಇಮಾಂರವರ ಖೋತಾ ನಿರ್ಣಯಕ್ಕೆ ಉತ್ತರವಾಗಿ ತಮ್ಮ ಭಾಷಣದಲ್ಲಿ ಹೇಳಿದ ಒಂದು ಅಭಿಪ್ರಾಯದ ಮೇಲೆ ನಾನು ಹೇಳುತ್ತಿರುವುದು.

ಶ್ರೀ ಬಿ. ಹುಚ್ಚೇಗೌಡ.—ಸ್ಪೀಕರಿಗೆ ಒಂದು ಕಾರು ಕೊಟ್ಟಿದ್ದಾರೆ.

Sri K. HANUMANTHAIYA.—I am sorry the Hon'ble Member should make remarks like that. Many a time I have requested the Hon'ble Members not to pass light remarks against the Speaker or any Minister. It is easy to pass remarks. I do not want to retaliate. I refrain from retaliating. I would only request the Members that light remarks need not be passed against the Speaker. As a matter of personal explanation, I should say that the Speaker has not been given a new car. It is derogatory to the dignity of the House to cast aspersion against the Speaker. I am here and you may

throw any remarks against me and I am prepared to take it. But it is not fair for an experienced legislator to pass such remarks without responsibility.

The position is this. Out of the six cars, one car was damaged and was sold. Therefore, there are five cars remaining and all the five cars are being used by the five Ministers. As regards the old car which was used by the previous Chief Minister, it had run for 60,000 miles for 4 years and more. The consumption of oil and petrol is definitely much more than is required by any ordinary car. Therefore a car ought to have been purchased in place of the one which was damaged and sold. If there should be so much of hubub for that and if they want to capture public opinion through such things, I tell them these things were placed before the country repeatedly by them and the country has given them a reply in a thundering manner and they are going to get it in future also.

Sri B. HUTCHE GOWDA.—It is not a remark against the Speaker. I have not made any remarks.

Sri K. HANUMANTHAIYA.—It is far more graceful to admit than to deny.

Sri B. HUTCHE GOWDA.—The Speaker was given a car. The Member was saying there were 8 cars. Last year there were six cars and two more cars were purchased subsequently. It is a fact that the Speaker had a car and it is not derogatory to say so.

ಶ್ರೀ ಯು. ಎಂ. ಮಾದಪ್ಪ.—ಡಿಮ್ಯಾಂಡ್ ನಂ. 45ರಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಚುನಾವಣೆ ಖರ್ಚಿಗಾಗಿ ಸಾಲಕೊಡಬೇಕೆಂದು ಈಗಾಗಲೇ ತೀರ್ಮಾನಿಸಿ ಎಕ್ಸ್‌ಪ್ಲನೇಟರಿ ನೋಟ್ಸ್‌ನಲ್ಲಿ ನಮೂದಾಗಿದೆ. ಈಗಾಗಲೇ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಹಣಕಾಸಿನ ಮುಗ್ಗಟ್ಟಿದೆ. ಅವುಗಳಿಗೆ ಸರ್ಕಾರದವರು ಇಷ್ಟೊಂದು ಅಪಾರವಾದ ಸಾಲವನ್ನು ಹೊರಿಸಿ 15 ವರ್ಷಗಳಲ್ಲಿ ಕಂತಿನ ಪ್ರಕಾರ ಅವುಗಳಿಂದ ವಸೂಲ್ಮಾಡುವುದೆಂದರೆ ಕಷ್ಟ. ಅಷ್ಟು ಹೊತ್ತಿಗೆ ಮೂರು ನಾಲ್ಕು ಚುನಾವಣೆಗಳು ನಡೆದು ಡಿಸ್ಟ್ರಿಕ್ಟ್ ಬೋರ್ಡುಗಳ ಸಾಲ ಇನ್ನೂ ಹೆಚ್ಚಾಗುತ್ತದೆ. ಸರ್ಕಾರ ಹೀಗೆ ಸಾಲವನ್ನು ಕೊಟ್ಟರೆ ಸ್ಥಳೀಯ ಸಂಸ್ಥೆಗಳಿಗೆ ಸಾಲ ಹೊರಿಸಿದಂತಾಗಿ ಅನ್ಯಾಯ ಮಾಡಿದಂತಾಗುತ್ತದೆ. ಸ್ಥಳೀಯ ಸಂಸ್ಥೆಗಳು ಯಾವ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ, ಗ್ರಾಮೋದ್ಧಾರ ಮಾಡುವುದಕ್ಕೂ ಸಾಧ್ಯವಿಲ್ಲವೆಂಬ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರ್—ಅನುಸೂಚಿತ ಜಾತಿಗಳು).—ಸ್ವಾಮಿ, ಈಗಾಗಲೇ ಮಾತನಾಡಿದ ಕೆಲವು ಸ್ನೇಹಿತರು, 'ವಿರೋಧ ಪಕ್ಷದವರು ಸುಮ್ಮನೆ ಬರಿಯ ಟೀಕೆ ಮಾಡುವುದಕ್ಕೂ ಸರ್ಕಾರವನ್ನು ನಿಂದಿಸುವುದಕ್ಕೂ ಮಾತನಾಡುತ್ತಿದ್ದಾರೆ, ಯಾವ ರಚನಾತ್ಮಕ ಟೀಕೆಯನ್ನೂ ಅಥವಾ ಸಲಹೆಗಳನ್ನೂ ಕೊಟ್ಟಿಲ್ಲ' ಎಂದು ಹೇಳಿದರು. 1952-53ನೆಯ ಸಾಲಿನ ಆಯವ್ಯಯದ ಪಟ್ಟಿಯಲ್ಲಿ ಈ ವರ್ಷ ಯಾವ ಯಾವ ಖರ್ಚು ಆಗಬೇಕಾಗಿದೆ ಮತ್ತು ಯಾವ ರೀತಿ ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾಗಿದೆ ಎಂಬುದನ್ನೆಲ್ಲಾ ಮೊದಲೇ ಒಂದೇ ಸಾರಿ ನಮ್ಮ ಮುಂದೆ ಮಂಡಿಸಿದ್ದ ಪಕ್ಷದಲ್ಲಿ ಇಂಥ ಅನುಮಾನಕ್ಕಾಸ್ಪದವಾಗುತ್ತಿರಲಿಲ್ಲವೆಂದು ಭರವಸೆ ಕೊಡುತ್ತೇನೆ. ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕು ಮತ್ತು ಸರ್ಕಾರದ ಖರ್ಚನ್ನು ಕಡಮೆ ಮಾಡಬೇಕು. ಹೀಗೆ ಆಯವ್ಯಯವನ್ನು ಸರಿತೂಗಿಸಬೇಕೆಂಬುದನ್ನು ಎಲ್ಲರೂ ಅನುಮೋದಿಸುತ್ತಾರೆ. ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಹೊಸ ತೆರಿಗೆ ಹಾಕುವುದಿಲ್ಲ, ಇರುವ ತೆರಿಗೆಯನ್ನು ಹೆಚ್ಚಿಸುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಸಂದರ್ಭದಲ್ಲಿ ಹೊಸ ತೆರಿಗೆಗಳನ್ನು ವಿಧಿಸುವುದು ಸೂಕ್ತವಲ್ಲವೆಂದು ಹೇಳಿದರು. ಅವರು ಯಾವ ಸನ್ನಿವೇಶದಲ್ಲಿ ರಾಜ್ಯ ಸೂತ್ರ ವಹಿಸಿಕೊಂಡರು ಎಂಬುದನ್ನು ಗಮನದಲ್ಲಿಟ್ಟುಕೊಂಡು, ಇದಕ್ಕಾಗಿ ಪಶ್ಚಾತ್ತಾಪ ಪಟ್ಟದ್ದೂ ಅಲ್ಲದೆ, ಅವರಿಗೆ ಸಹಕಾರ ಕೊಡಬೇಕೆಂದು ನಮಗೂ ಸಹ ಮನಸ್ಸು ಇಲ್ಲದೆ ಇಲ್ಲ.

ಶ್ರೀ ಕೆ. ಹನುಮಂತಯ್ಯ.—ಪಶ್ಚಾತ್ತಾಪ ವಲ್ಲ, ಅನುತಾಪ! (ನಗು)

ಶ್ರೀ ಬಿ. ರಾಚಯ್ಯ.—ಅನುತಾಪ ಪಶ್ಚಾತ್ತಾಪ ಎರಡೂ ಒಂದೇ ಎಂದು ಕಾಣುತ್ತದೆ. ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ರಿಟ್ರೆಂಚ್ ಮಾಡಿದ್ದೇವೆ, ಅದರಿಂದ ಸಾಕಷ್ಟು ಸರ್ಕಾರದಲ್ಲಿ ಖರ್ಚು ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ಸರ್ಕಾರದಲ್ಲಿ ನೌಕರಿಗಳನ್ನು ಕಡಮೆ ಮಾಡುವ ರೀತಿಯನ್ನು ನೋಡಿದರೆ, ಸಾಮಾನ್ಯವಾಗಿ ಸಣ್ಣ ಪುಟ್ಟ ನೌಕರರಿಗೇ ತೊಂದರೆಯಾಗುತ್ತಿದೆ. ಇದನ್ನು ಹಿಂದೆಯೇ ಹೇಳಿದ್ದೆ. ಈಗಲೂ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಉದಾಹರಣೆಗೆ, ಸೆರಿಕಲ್ಚರ್ ಇಲಾಖೆಯಲ್ಲಿ ಐದು ಜನ ಪ್ರೊಬೇಷನರುಗಳನ್ನು ತೆಗೆದುಕೊಂಡಿದ್ದರು. ಇವರಿಗೆ ಬಡ್ತಿಮಾಡಿ ಆಗುವ ಖರ್ಚನ್ನು ಸರಿತೂಗಿಸಬೇಕೆಂಬ ಉದ್ದೇಶದಿಂದ 20 ಜನ ಆಪರೇಟರುಗಳನ್ನೂ, 5 ಜನ ಡೆಮಾನ್‌ಸ್ಟ್ರೇಟರುಗಳನ್ನೂ ರಿಟ್ರೆಂಚ್ ಮಾಡುವ ಸಂಭವ ನನಗೆ ತಿಳಿದು ಬಂದಿದೆ. ಹೀಗೆ ಎಂಟು ಹತ್ತು ವರ್ಷ ಸರ್ವಿಸ್ ಮಾಡಿದ್ದರೂ ನೌಕರರನ್ನು ಮಧ್ಯೆ ಸರ್ಕಾರದ ಖರ್ಚು ಕಡಮೆ ಮಾಡಬೇಕೆಂದು ತೆಗೆಯುವುದರಿಂದ ಅವರ ಜೀವನಕ್ಕೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚಿಸಬೇಕು. ಹೀಗೆ ತೆಗೆಯುವದರಿಂದ ಆ ಪ್ರೊಬೇಷನರುಗಳಿಂದ ಹೆಚ್ಚು ಕೆಲಸವಾಗುವ ಸಂಭವವಿದೆಯೇ? ಸಣ್ಣ ನೌಕರರುಗಳನ್ನು ತೆಗೆಯುವುದರಿಂದ ಸರ್ಕಾರಕ್ಕೆ ಹೆಚ್ಚು ಉಳಿತಾಯವಾಗುವುದಿಲ್ಲ, ಹೆಚ್ಚು ಖರ್ಚನ್ನು ಸರಿತೂಗಿಸುವುದಕ್ಕೆ ಆಗುವುದಿಲ್ಲ, ದಯೆಯಿಟ್ಟು ಸಣ್ಣ ಪುಟ್ಟ ನೌಕರರುಗಳನ್ನು ತೆಗೆಯಬಾರದು. ಇದಕ್ಕೆ ಬದಲು ದೊಡ್ಡ ದೊಡ್ಡ ನೌಕರಿಗಳನ್ನು ಹೆಚ್ಚುಮಾಡುವುದನ್ನೂ ಸೃಷ್ಟಿ ಮಾಡುವುದನ್ನೂ ತಪ್ಪಿಸಬೇಕು; ಸದ್ಯದಲ್ಲಿ ಪ್ರೊಬೇಷನರುಗಳನ್ನು ತೆಗೆದುಕೊಳ್ಳುವುದು ಅಥವಾ ಹೊಸ ಹುದ್ದೆ ಮಾಡುವುದನ್ನು ಕಡಮೆಮಾಡಬೇಕೆಂದು ಒತ್ತಾಯ ಮಾಡಬೇಕಾಗಿದೆ.

Mr. SPEAKER.—I may tell the Hon'ble Member that there is no Demand under Sericulture. There was a question and answer and on the basis of that the Member is going on commenting.

ಶ್ರೀ ಬಿ. ರಾಚಯ್ಯ.—ಕ್ಷಾಮ ನಿವಾರಣೆ ಮಾಡಬೇಕಾಗಿದೆ ಮತ್ತು ಭೂಕಂದಾಯ ಉತ್ಪತ್ತಿ ಹೆಚ್ಚಿಸಬೇಕಾಗಿದೆ ಎಂದು ಹೇಳಿದರು; ಸಣ್ಣ ಪುಟ್ಟ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ, ಕ್ಷಾಮ ಪೀಡಿತ ಪ್ರದೇಶಗಳಿಗೆ ಪರಿಹಾರ ಕೊಡಲು ಬೇಕಾದಷ್ಟು ಖರ್ಚುಮಾಡಬೇಕೆಂದು ಹೇಳಿದರು. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಖಾಯಂ ಆಗಿ ಕ್ಷಾಮವನ್ನು ತಡೆಗಟ್ಟಲು ತಕ್ಕ ಕಾರ್ಯವನ್ನು ಕೈಕೊಂಡಿಲ್ಲವೆಂದು ಕಾಣುತ್ತದೆ. ಆಹಾರ ಒದಗಿಸುವುದಕ್ಕೆ ಹೆಚ್ಚು ಖರ್ಚಾಗುತ್ತಿದೆ. ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಈಚೆಗೆ ಮಳೆ ಬೀಳುತ್ತಿದೆ. ಐದಾರು ತಿಂಗಳ ಹಿಂದೆ ಬಿತ್ತಿರುವ ಹೈರಾಗಿ, ಜೋಳವೆಲ್ಲಾ ಒಣಗಿಹೋಗಿದೆ.

Mr. SPEAKER.—The Member may speak about this subject on the first resolution which will be before the House tomorrow; if not to-day.

ಶ್ರೀ ಬಿ. ರಾಚಯ್ಯ.—ಕ್ಷಾಮ ನಿವಾರಣೆಗಾಗಿ ಖರ್ಚುಮಾಡುತ್ತಿರುವ ಹಣವನ್ನು ದೇಶಕ್ಕೆ ಖಾಯಂ ಆಗಿ ಅನುಕೂಲವಾಗುವ ರೀತಿ ನೀರಾವರಿ ಕೆಲಸಗಳಿಗಾಗಿ ಖರ್ಚುಮಾಡಬೇಕು, ಇಲ್ಲದಿದ್ದರೆ ಆ ಹಣ ದುಂದಾಗುತ್ತದೆ.

ಇನ್ನೊಬ್ಬ ಸದಸ್ಯರು, ನಾಲೆಗಳನ್ನು ದುರಸ್ತು ಮಾಡುವುದಕ್ಕಿಂತ ಇರಿಗೇಷನ್ ಪಂಪುಗಳನ್ನು ಹಾಕಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಸ್ವಲ್ಪ ಹಣದಿಂದ ಹೆಚ್ಚು ಉತ್ಪತ್ತಿಮಾಡಬೇಕೆಂಬ ದೃಷ್ಟಿಯಿಂದ ಸಣ್ಣ ಪುಟ್ಟ ಕೆರೆಗಳನ್ನು ಎರಡುಮೂರು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಡೀಸಿಲ್ಟ್ ಮಾಡಿದರೆ ಉತ್ಪತ್ತಿ ಜಾಸ್ತಿಯಾಗುತ್ತದೆ. ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಂಡರೆ ಅವುಗಳಿಂದ ಬೇಗ ಪ್ರತಿಫಲ ದೊರೆಯುವುದಿಲ್ಲ. ಈಗ ನುಗು ಯೋಜನೆಯನ್ನು ತೆಗೆದುಕೊಂಡಿದ್ದಾರೆ. ಐದು ವರ್ಷದಲ್ಲಿ

ಅದು ಎಷ್ಟು ಮುಂದುವರಿಯುತ್ತದೆ? ಇದನ್ನು ನೋಡಿದರೆ ಈಗ ಅದರ ಕೆಲಸ ಹೆಚ್ಚು ಮುಂದುವರಿದಿಲ್ಲ, ಹಣ ಮಾತ್ರ ಖರ್ಚಾಗುತ್ತಿದೆ. ಅದುದರಿಂದ ಹೆಚ್ಚು ಹಣದ ಸಹಾಯ ಇಂಡಿಯಾ ಸರ್ಕಾರದಿಂದ ಬಂದಾಗ ಹೊರೆತು ದೊಡ್ಡ ದೊಡ್ಡ ಯೋಜನೆಗಳಿಗೆ ಕೈ ಹಾಕದೆ, ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡು ಆಹಾರದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಇದರಿಂದ ಕ್ಷಾಮ ಪೀಡಿತ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಅಂದಾಜುಗಳನ್ನು ಎರಡು ಮೂರು ನಾಲ್ಕೈದು ಸಾರಿ ರಿವೈಸ್ ಮಾಡಿದುದು ನನಗೆ ಗೊತ್ತಿದೆ. ಮೊದಲು ಕಡಮೆ ದರ ಹಾಕಿ ಆ ಕಾಮಗಾರಿಗೆ ಇಷ್ಟು ಖರ್ಚಾಗುತ್ತದೆಂದು ಅಂದಾಜು ಮಾಡುವುದು, ಆಮೇಲೆ ರಿವೈಸ್ ಮಾಡುತ್ತಾ ಹೋಗುವುದು, ಇದರಿಂದ ಬಹಳ ಹಣ ದುರ್ವ್ಯಯವಾಗುತ್ತದೆ. ಆದಕಾರಣ ಇಂಥಾ ಅಂದಾಜುಗಳನ್ನು ತಯಾರು ಮಾಡುವಾಗ ಮೊದಲೇ ಎಲ್ಲವನ್ನೂ ಯೋಚನೆ ಮಾಡಿ, ಕಡಮೆ ಹಣ ಖರ್ಚುಮಾಡಿ ಉತ್ಪತ್ತಿಯನ್ನು ಹೆಚ್ಚುಮಾಡಬೇಕೆಂದು ಸೂಚಿಸುತ್ತಾ ನನ್ನ ಈ ಪುಟ್ಟ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet again at 3-30 P.M.

———

The House adjourned for lunch at three of the Clock and re-assembled at thirty minutes past Three of the Clock.

[MR. SPEAKER in the Chair.]

*ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಸ್ವಾಮಿ ಸರ್ಕಾರದವರು ಈ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ 1,86,06,800 ರೂಪಾಯಿಗಳನ್ನು ಸಂಸ್ಥಾನದ ಕನ್ಸಾಲಿಡೇಟೆಡ್ ಫಂಡ್‌ನಿಂದ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಇದರಲ್ಲಿ ಕನ್ಸಾಲಿಡೇಟೆಡ್ ಫಂಡ್‌ನಲ್ಲಿ ಎಷ್ಟು ರೂಪಾಯಿ ಇದೆ ಎಂಬುದು ನಮೂದಾಗಿಲ್ಲ; ಅದನ್ನೂ ನಮೂದಿಸಿದ್ದರೆ ಚೆನ್ನಾಗಿತ್ತು.

ಶ್ರೀ ಕೆ. ಹನುಮಂತಯ್ಯ.—ಒಂದು ಸಲ ಸಿಕ್ಕಿಹಾಕಿಕೊಂಡಿರಿ! ಅದು ಹೇಗೆಂಬುದನ್ನು ಆಮೇಲೆ ಹೇಳುತ್ತೇನೆ. (ನಗು!)

ಶ್ರೀ ಎಂ. ಶಂಕರಲಿಂಗೇಗೌಡ.—ಆ ವಿಷಯ ಇದರಲ್ಲಿರಬೇಕಾಗಿತ್ತು ಎಂದು ನಾನು ಹೇಳಿದ್ದು.

ಈಗ ಈ 1,86,06,800 ರೂಪಾಯಿಗಳಲ್ಲಿ 58 ಲಕ್ಷ ರೂಪಾಯಿ Loans and Advances by the State Government ಎಂದು ಕೊಡುತ್ತಾರೆ. ಇದನ್ನು ಕೊಟ್ಟೇ ಕೊಡಬೇಕು. 7,87,300 ರೂಪಾಯಿ ಪಬ್ಲಿಕ್ ಡೆಟ್ ಕೊಟ್ಟಿದ್ದಾರೆ. Interest on debt and other obligations ಗೆ 37,40,000 ರೂಪಾಯಿ ಇದೆ, ಇದನ್ನೂ ಕೊಡಬೇಕಾಗುತ್ತದೆ. ಇದು ಹೋಗುತ್ತಾ 83,10,600 ರೂಪಾಯಿ ಉಳಿಯುತ್ತದೆ. ಇದರಲ್ಲಿ Capital outlay ಎನ್ನುವುದಕ್ಕೆ 32,98,800 ಹಾಕಿದ್ದಾರೆ. ಇದು ದೇಶಾಭಿವೃದ್ಧಿ ಕಾರ್ಯ, ಮಾಡಬೇಕಾದದ್ದೇ. ಇನ್ನು ಕ್ಷಾಮಕ್ಕೆ 20 ಲಕ್ಷ ರೂಪಾಯಿ ಕೊಡಲಾಗಿದೆ. ಇದೂ ಹೋಗುತ್ತಾ ಇನ್ನುಳಿದ 30 ಲಕ್ಷ ರೂಪಾಯಿಗಳನ್ನು ಅನೇಕ ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡುವುದನ್ನು ನಮೂದಿಸಿದ್ದಾರೆ. ವಿದ್ಯುಚ್ಛಕ್ತಿಗಾಗಿ 10 ಲಕ್ಷ ರೂಪಾಯಿ ಜಾಸ್ತಿ ಬೇಕೆಂದು ಅಂದಾಜು ಮಾಡಿದ್ದಾರೆ. ಇದಕ್ಕೆ ಕಾರಣ ಅನೇಕ ಕಡೆಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಕೆಲಸ ಪ್ರಾರಂಭಿಸಿದ್ದಾರೆ, ಇದಕ್ಕೆ ಖರ್ಚುಮಾಡಬೇಕಾಗಿದೆ. ಇದೂ ಸರಿ. ಇನ್ನೂ 20,11,800 ರೂಪಾಯನ್ನು ಅನೇಕ ಬಾಬುಗಳಿಗೆ ಖರ್ಚುಮಾಡಬೇಕೆಂದು ನಮೂದು ಮಾಡಿದ್ದಾರೆ. ಇದಕ್ಕೆ ನಾನು ಹೇಳುವುದಿಷ್ಟೆ. ಹಿಂದೆ ಸಭೆಯ ಮುಂದಿಟ್ಟ ಬಡ್ಜೆಟ್ಟಿನಲ್ಲಿ ಇವುಗಳನ್ನು ನಿರೀಕ್ಷೆಮಾಡಿ ಒದಗಿಸಬಹುದಾಗಿತ್ತು. ಆದರೆ ಹಿಂದೆ ಮಾಡಿದ ಬಡ್ಜೆಟ್ಟು ಇವರು ತಯಾರು ಮಾಡಿದುದಲ್ಲ. ಹಿಂದಿನವರು ಮಾಡಿಟ್ಟು ಹೊರಟು ಹೋದರು.

Sri Mulka GOVINDA REDDY (Chitaldrug).—No compliment to the present Government.

ಶ್ರೀ ಎಂ. ಶಂಕರಲಿಂಗೇಗೌಡ.—ಅವರು ಮಾಡಿದ್ದು. ಆದುದರಿಂದ ಈ 1 ಕೋಟಿ 86 ಲಕ್ಷ ರೂಪಾಯಿಗಳನ್ನು ದುಂದು ವೆಚ್ಚ ಮಾಡುತ್ತಿದ್ದಾರೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ Loans and Advances ಏನೂ ದುಂದು ಖರ್ಚಲ್ಲ; Public Debt discharged ದುಂದು ಖರ್ಚು ಎಂದು ಹೇಳುವುದಕ್ಕಾಗುವುದಿಲ್ಲ, Interest on debt and other obligations ದುಂದು ಖರ್ಚೇನೂ ಅಲ್ಲ. ಹೀಗೆ ಒಂದು ಕೋಟಿ ಎರಡು ಲಕ್ಷ ಹೋದ ಮೇಲೆ, ಇನ್ನು 83 ಲಕ್ಷದಲ್ಲಿ 38 ಲಕ್ಷ capital outlay; ಇದೂ ದುಂದು ಖರ್ಚಲ್ಲ. ಇನ್ನು ಮಿಕ್ಕ 20 ಲಕ್ಷ ರೂ. ಕ್ಷಾಮಕ್ಕಾಗಿ ಒದಗಿಸಿದ್ದಾರೆ. ಇದೂ ಸಾಲದೆಂದು ನಾವು ಬೇಕಾದಷ್ಟು ವಾದ ಮಾಡುತ್ತಿದ್ದೇವೆ. ಇನ್ನುಳಿದ 30 ಲಕ್ಷದಲ್ಲಿ, 10 ಲಕ್ಷ Electricity Schemes Working Expenses ಗೆ ಹೋಗುತ್ತದೆ.

ಅಧ್ಯಕ್ಷರು.—ಅದರಲ್ಲಿರುವುದನ್ನು ಓದುತ್ತಿದ್ದೀರಿ!

ಶ್ರೀ ಎಂ. ಶಂಕರಲಿಂಗೇಗೌಡ.—ಓದದೇಯಿದ್ದರೆ ಟೀಕೆ ಮಾಡುವುದಕ್ಕಾಗುತ್ತದೆಯೇ? ಅವರ ಕಾಲದಲ್ಲಾಗಿರತಕ್ಕ ಖರ್ಚು, ಇವರ ಕಾಲದ್ದಲ್ಲ. ಹಿಂದಿನ ಮಂತ್ರಿಗಳ ಕಾಲದಲ್ಲಿ ಮುಂದೆ ಆಗತಕ್ಕ ಖರ್ಚನ್ನು ನಿರೀಕ್ಷೆ ಮಾಡಬೇಕಾಗಿದ್ದುದು ಈಗ ಇವರ ಮೇಲೆ ಬಿತ್ತು. ಇದನ್ನೆಲ್ಲಾ adjust ಮಾಡುವುದಕ್ಕಾಗಿ ಈ ಹಣವನ್ನು ಕೇಳಿದ್ದಾರೆ, ಈಗಿನ ಸರ್ಕಾರ. ಅದಕ್ಕಾಗಿ consolidate ಮಾಡಿ ತಂದಿದ್ದಾರೆ ಈ ಮಸೂದೆಯನ್ನು. ಆಗಲೇ 'ಗಿಲೆಟಿನ್' ಆಯಿತು. ಆದುದರಿಂದ ಈ ಮಸೂದೆಯನ್ನು ಈ ಹೊತ್ತು ವಿರೋಧಿಸಿದರೂ ಒಂದೇ ಬಿಟ್ಟರೂ ಒಂದೇ! ಒಂದುಕೋಟಿ 86 ಲಕ್ಷ ರೂಪಾಯಿಗಳನ್ನು ಸರಿಯಾಗಿ ಖರ್ಚುಮಾಡಿದ್ದಾರೆಂದು ನನ್ನ ಮನಸ್ಸಿಗೆ ಸಮಾಧಾನವಾಗಿರುವುದರಿಂದ ಖಂಡಿತವಾಗಿಯೂ ಇದರಲ್ಲಿ ಯಾವ ಲೋಪವೂ ಇಲ್ಲವೆಂದು ಹೇಳಿ ಇದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಮೊದಲನೆಯದಾಗಿ ಅಧ್ಯಕ್ಷರಲ್ಲಿ ನನ್ನ ಒಂದು ಪ್ರಾರ್ಥನೆಯೇನೆಂದರೆ, ನಾನು ಮಾತನಾಡುವಾಗ ಮಧ್ಯೆ interruption ಆದಾಗ ನನ್ನ ರಕ್ಷಣೆಗೆ ತಾವು ಬರಬೇಕೆಂದು ವಿನಂತಿ; ಅಲ್ಲದೆ ಹೆಚ್ಚುಕಾಲ ತೆಗೆದುಕೊಳ್ಳುವುದಾದರೆ, ಅದನ್ನೂ ಕರುಣಿಸಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—What time does the Hon'ble Member require?

ಶ್ರೀ ಎಸ್. ಗೋಪಾಲಗೌಡ.—ಸ್ವಲ್ಪ ಹೆಚ್ಚು ಕಾಲಾವಕಾಶ.

Mr. SPEAKER.—The Hon'ble Member will have fifteen minutes.

ಶ್ರೀ ಎಸ್. ಗೋಪಾಲಗೌಡ.—ನಾನು ಮೊನ್ನೆ ಈ ಸಂಬಂಧದಲ್ಲಿ ಬಂದ ಡಿಮ್ಯಾಂಡಿನ ಮೇಲೆ ಮಾತನಾಡಲು ಅವಕಾಶವಾಗಲಿಲ್ಲ. ಈಗ ಈ 'ಅಪ್ರೋಪ್ರಿಯೇಷನ್ ಬಿಲ್' ನಮ್ಮ ಮುಂದೆ ಬಂದಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಂಥ ಒಂದು ಅಪ್ರೋಪ್ರಿಯೇಷನ್ ಬಿಲ್ ಮಂಡಿಸಲು ರಾಜ್ಯಾಂಗದಲ್ಲಿ ಅವಕಾಶ ಕೊಡಲ್ಪಟ್ಟಿದೆ. ಅದರಲ್ಲಿ ಇದಕ್ಕೆ ಏನು ಕಾರಣ ಕೊಟ್ಟಿದ್ದಾರೆಂದರೆ, ವರ್ಷ ವರ್ಷವೂ ಆಯವ್ಯಯದ ಅಂದಾಜುಮಾಡುವಾಗ, ಅಂದಾಜುಮಾಡಿದ ಹಣಕ್ಕಿಂತ ಹೆಚ್ಚು ಖರ್ಚುಮಾಡುವ ಸಂದರ್ಭಗಳು ಬಂದರೆ, ಅಥವಾ ಲೆಕ್ಕದಲ್ಲಿ ಹೆಚ್ಚು ಕಡಮೆಯಾಗಿ ಹಣ ಹೆಚ್ಚು ಕೊಡಬೇಕಾದ ಸಂದರ್ಭ ಬಂದರೆ, ಅಂಥ ಸಮಯದಲ್ಲಿ ಇಂಥ ಒಂದು ಮಸೂದೆಯನ್ನು ಶಾಸನಸಭೆಯ ಮುಂದಿಟ್ಟು ಸಭೆಯ ಅನುಮತಿ ಪಡೆಯಬೇಕಾದದ್ದು ನಿಯಮ ಬದ್ಧವಾದ ಕೆಲಸವೆಂದು ತಿಳಿಸಿದ್ದಾರೆ. ಆದಕಾರಣ ಈ ಹೊತ್ತು ಈ ಸಭೆಯ ಮುಂದೆ ಈ ಮಸೂದೆಯನ್ನಿಟ್ಟಿದ್ದಾರೆ. ಇದರಲ್ಲಿ ಒಂದು ಕೋಟಿ ಎಂಭತ್ತಾರು ಲಕ್ಷಚಿಲ್ಲರೆ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ಕೇಳಿದ್ದಾರೆ.

ಈ ಸಂಬಂಧದಲ್ಲಿ ಆರ್ಥಿಕಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾ "ನಾನು ಇಂಥ ಒಂದು ಸಪ್ಲಿಮೆಂಟರಿ ಡಿಮ್ಯಾಂಡನ್ನು ಕೇಳುವ ಅವಶ್ಯಕತೆ ಬರಲಾರದೆಂದು ತಿಳಿದುಕೊಂಡಿದ್ದೆ, ನಾವು ಈ ವರ್ಷದ ಆಯುವ್ಯಯವನ್ನು ಮುಂಡಿಸುವಾಗಲೇ ಖೋತಾ ಆಯವ್ಯಯದ ಪಟ್ಟಿಯನ್ನು ಮುಂಡಿಸಿದುದರಿಂದ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಕೇಳುವುದೂ ಖರ್ಚುಮಾಡುವುದೂ ಸೂಕ್ತವಾಗಲಾರದು. ಅದು ದೇಶದ ಆರ್ಥಿಕ ಭದ್ರತೆಯನ್ನು ತೋರ್ಪಡಿಸುವುದಿಲ್ಲ" ಎಂದು ಪ್ರಾರಂಭಮಾಡಿ, ಅನಂತರ ಈ ರೀತಿ ಹೆಚ್ಚು ಹಣವನ್ನು ಕೇಳುವುದಕ್ಕೆ ಏನು ಕಾರಣ ಬಂತು ಎಂಬುದನ್ನು ವಿವರಿಸಿದರು.

Sri A. BHEEMAPPA NAIK.—Is it on the supplementary grant that he is speaking or on this Bill ?

ಶ್ರೀ ಕೆ. ಹನುಮಂತಯ್ಯ.—'ಬಿಲ್ಲು' ಕೈಯ್ಯಲ್ಲಿಟ್ಟುಕೊಂಡಿದ್ದಾರೆ, ಬಾಣ ಇಲ್ಲ. (ನಗು !)

ಅಧ್ಯಕ್ಷರು.—ಇದು ಪೀಠಿಕೆ !

ಶ್ರೀ ಎಸ್. ಗೋಪಾಲಗೌಡ.—ಬಾಣವೂ ಇದೆ, ಇನ್ನು ಬಿಡುತ್ತೇನೆ !

ಶ್ರೀಮಾನ್ ಶಂಕರಲಿಂಗೇ ಗೌಡರು ಒಂದು ರೀತಿಯಲ್ಲಿ, ಇದು ನ್ಯಾಯವಾಗಿದೆ, ಸ್ವಾಗತಾರ್ಹವಾಗಿದೆ ಎಂದು ಹೇಳಿದ್ದಾರೆ. ನಿನ್ನೆ ಕೂಡ ಅವರು ಮಾತನಾಡುವಾಗ ಈ ಹಣವನ್ನು ಇವರು ಕೇಳಿದ್ದಲ್ಲ, ಹಿಂದಿನವರು ಮಾಡಿದ ಸಾಲವನ್ನು ತೀರಿಸುವುದಕ್ಕಾಗಿ ಕೇಳುತ್ತಾರೆ, ಒಂದು ರೀತಿ misappropriation ಮಾಡಿ ಹಳೆಯ ಸಾಲಗಳನ್ನು ತೀರಿಸಬೇಕಾಗಿದೆ ಎಂದು ಹೇಳಿದರು.

ಶ್ರೀ ಎ. ಭೀಮಪ್ಪನಾಯಕ.—Appropriation ಎಂಬುದನ್ನೇ ಅವರು ತಿಳಿದುಕೊಂಡ ಹಾಗೆ ಕಾಣಲಿಲ್ಲ. He seems to have mistaken the whole thing. That is an additional grant.

ಶ್ರೀ ಎಸ್. ಗೋಪಾಲಗೌಡ.—ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಕೂಡ ಹೀಗೆ ಮಧ್ಯೆ remarks ಮಾಡುತ್ತಾ ಹೋಗಬಹುದು....

Mr. SPEAKER.—Let not the Hon'ble Member be disturbed. That was the request he made at the outset.

ಶ್ರೀ ಎಸ್. ಗೋಪಾಲಗೌಡ.—ನಾನು ಕೆಲವು ವಿಷಯಗಳಲ್ಲಿ ನನ್ನ ಕೆಲವು ಸಲಹೆಗಳನ್ನು ಕೊಡುತ್ತೇನೆ. ಈ ಮಸೂದೆ ಬಂದಿರುವಾಗ ಈ ಹಣವನ್ನು ನಾವು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವ ಹಾಗಿಲ್ಲ. ಅಥವಾ ಶ್ರೀಮಾನ್ ನಾಗಪ್ಪಶೆಟ್ಟರು ಹೇಳಿದಹಾಗೆ, ಪಂಪಿಗೆ ಇಟ್ಟಿರುವ ಹಣವನ್ನು ಅದಕ್ಕೇ ಇಡಿ, ಬೇರೆಯದಕ್ಕೆ ಹಾಕಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಬದಲಾವಣೆಮಾಡಿ ಅಥವಾ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವ ವ್ಯರ್ಥಾಲಾಪವನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ದೇಶದ ಹಣವನ್ನು ಖರ್ಚುಮಾಡತಕ್ಕ ಬಗ್ಗೆ, ಮಾನ್ಯಗೆಳೆಯರಾದ ಶ್ರೀಮಾನ್ ದೇವರಾಜ ಅರಸಿನವರು ಮಾತನಾಡುತ್ತಾ ಕೆಲವು ಮೂಲ ಭೂತವಾದ ಅಂಶಗಳ ವಿಷಯ ಮಾತನಾಡಿದ್ದಾರೆ. ವಿರೋಧ ಪಕ್ಷದ ಸದಸ್ಯರ ಭಾಷಣಗಳಿಗೆ ಉತ್ತರವಾಗಿ ಆ ರೀತಿ ಹೇಳಿದ್ದಾರೆಂದು ನನ್ನ ಭಾವನೆ ಕಂದಾಯ ಹಾಕಲೇಬಾರದು, ಸರ್ಕಾರದಲ್ಲಿ ಸರಿಯಾದ ವ್ಯವಸ್ಥೆ ಇರಬೇಕು, ಕಂದಾಯ ಹಾಕದೇ ಸರ್ಕಾರವನ್ನು ನಡೆಸಬೇಕು, ಖೋತಾ ಬಡ್ಜೆಟ್ ಎಂಬುದನ್ನು ಅರ್ಥಮಾಡಿಕೊಂಡಿಲ್ಲ, ಖೋತಾ ಬಡ್ಜೆಟ್ ಅಂದ ತಕ್ಷಣ ಕೆಲವರಿಗೆ ವ್ಯಥೆ ಮತ್ತು ಭಯ ಉಂಟಾಗುತ್ತದೆ, ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ನಿಜ. ಖೋತಾ ಬಡ್ಜೆಟ್ ಇದ್ದರೆ ಸರ್ಕಾರ ಎಚ್ಚರಿಕೆಯಿಂದ ಹೋಗುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಆದರೆ ಖೋತಾ ಬಡ್ಜೆಟ್ಟೇ ಆಯವ್ಯಯದಲ್ಲಿ ಪ್ರಾಮುಖ್ಯವಾದುದು ಎಂದು ಹೇಳಿ ಯಾವಾಗಲೂ ಖೋತಾ ಬಡ್ಜೆಟ್ಟನ್ನೇ ಇಟ್ಟು ಕೊಳ್ಳುತ್ತೇನೆ ಎನ್ನುವುದು ನ್ಯಾಯವಲ್ಲ.

Sri D. DEVARAJA URS.—I never said so.

ಶ್ರೀ ಎಸ್. ಗೋಪಾಲಗೌಡ.—ತೆರಿಗೆ ಹಾಕದೆ ಸರ್ಕಾರವನ್ನು ನಡೆಸಬೇಕೆಂಬುದು ವಿರೋಧ ಪಕ್ಷದ ಸದಸ್ಯರ ಅಭಿಪ್ರಾಯವಲ್ಲ.

(ಶ್ರೀ ಎಸ್. ಗೋಪಾಲಗೌಡ)

ಹಾಕುವಾಗ ಯಾವ ರೀತಿ ಹಾಕಬೇಕು, ಯಾವ ತೆರಿಗೆ ಸರ್ವಮಾನ್ಯ, ಯಾರ ಮೇಲೆ ಬೀಳುತ್ತದೆ ಎನ್ನುವುದು ಚರ್ಚೆಮಾಡತಕ್ಕ ವಿಷಯ. ದೇಶದ ಆರ್ಥಿಕಸ್ಥಿತಿಯನ್ನೂ ಜನಜೀವನದ ಮಟ್ಟವನ್ನೂ ಅರ್ಥಮಾಡಿಕೊಂಡು ಹಾಕಬೇಕು. ದೇಶಕ್ಕೆ ಎಷ್ಟು ಹಣ ಬೇಕೆಂಬುದರ ಮೇಲೂ ಅವಲಂಬಿಸಿರುತ್ತದೆ. ಈ ಹೊತ್ತು ನಮ್ಮ ದೇಶದ ಅರ್ಥಿಕಪರಿಸ್ಥಿತಿಯನ್ನು ನೋಡುವುದಾದರೆ ಇನ್ನೂ ಹೆಚ್ಚು ಹೆಚ್ಚು ಆಹಾರಧಾನ್ಯ ಬೆಳೆಯಬೇಕು, ಕೈಗಾರಿಕೆಗಳನ್ನು ಸ್ಥಾಪಿಸಬೇಕು, ದೇಶಾಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕು ಎಂದು ಎಲ್ಲರಿಗೂ ಆಸೆ ಹುಟ್ಟುವುದು ಸಹಜ. ಆದರೆ, ಇದಕ್ಕೆಲ್ಲಾ ಯಾವ ರೀತಿ ಹಣವನ್ನು ಪಡೆಯಬೇಕೆಂಬುದರ ಬಗ್ಗೆ ನಮ್ಮಲ್ಲಿ ಸ್ಪಷ್ಟವಾದ ಅಭಿಪ್ರಾಯ ಇನ್ನೂ ಮೂಡಿಬಂದಿಲ್ಲ. ಇತ್ತೀಚೆಗೆ ಪ್ಲಾನಿಂಗ್ ಕಮಿಷನ್ನಿನವರು ಕೂಡ, ಮೊದಲು ಪರದೇಶದ ಬಂಡವಾಳದ ಮೇಲೆ ನಂಬಿಕೆಯನ್ನಿಟ್ಟುಕೊಂಡಿದ್ದವರು ಈಗ ಪರದೇಶದ ಬಂಡವಾಳ ಬಾರದೇಯಿದ್ದರೆ ನಮ್ಮ ದೇಶದಲ್ಲಿ ಈ ಯೋಜನೆಗಳಿಗೆ ಬಂಡವಾಳವನ್ನೊದಗಿಸಿಕೊಳ್ಳಬೇಕಾಗುತ್ತದೆ ; ಸಾಧ್ಯವಾದರೆ, ಅಗತ್ಯಬಿದ್ದರೆ, ತೆರಿಗೆಗಳನ್ನೂ ಕೂಡ ಹಾಕಬೇಕಾಗುತ್ತದೆ ಎಂದು ಸೂಕ್ಷ್ಮವಾಗಿ ಹೇಳಿದ್ದಾರೆ. ನಿಜ, ತೆರಿಗೆಗಳನ್ನು ಹಾಕದೆ ಯಾವ ಕಾರ್ಯವನ್ನೂ ಸರ್ಕಾರ ಮಾಡುವುದಕ್ಕಾಗುವುದಿಲ್ಲ. ಆದರೆ ತೆರಿಗೆ ಹಾಕುವಾಗ, ಪ್ರಗತಿಪರವಾದ ಆರ್ಥಿಕ ಪದ್ಧತಿಯನ್ನು ದೇಶದಲ್ಲಿ ರೂಢಿಸಿಕೊಂಡು ಬರುವಾಗ, ಮೂಲಭೂತವಾಗಿ ಅನುಸರಿಸಬೇಕಾದ ಕೆಲವು ನಿಯಮಗಳಿವೆ. ಅವುಗಳನ್ನನುಸರಿಸಬೇಕು. ಇಂಥ ಹೆಜ್ಜೆಯನ್ನಿಡುವುದಕ್ಕೆ ದುರದೃಷ್ಟವಶಾತ್ ನಮ್ಮ ಕಾಂಗ್ರೆಸ್ ಸರ್ಕಾರಗಳು ಈ ಹೊತ್ತು ಸಿದ್ಧವಾಗಿಲ್ಲ. ಮಿಶ್ರ ಆರ್ಥಿಕಪದ್ಧತಿಯನ್ನು ನಡೆಸಿಕೊಂಡು ಹೋಗುವುದರಲ್ಲಿ ಕಾಲವನ್ನು ವ್ಯರ್ಥಮಾಡಿಕೊಂಡು ಬಂದಿವೆ. ಜಮೀನ್ದಾರಿ ಪದ್ಧತಿಯ ನಿರ್ಮೂಲನವಿದ್ದೆ, ಇದರ ಬಗ್ಗೆ ಎಷ್ಟು ಪರಿಹಾರ ಕೊಡಬೇಕೆಂಬುದರಲ್ಲಿ ಕಾಲವ್ಯಯವಾಗುತ್ತಿದೆ. ಇದರಿಂದಲೇ ಈ ಹೊತ್ತು 'ಕ್ಯಾಪಿಟಲ್ ಲೆವಿ' 'ಡೆತ್ ಡ್ಯೂಟಿ' ಹಾಕುವುದೇ ಆಗಲಿ, ಮೈಸೂರು ಬ್ಯಾಂಕು ಇಂಥ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವುದೇ ಆಗಲಿ, ಇಂಥ ಮೂಲಭೂತ ಬದಲಾವಣೆಮಾಡುವಂಥ, ದೇಶದ ಆರ್ಥಿಕ ಸ್ಥಿತಿಯನ್ನು ಭದ್ರವಾಗಿ ಕಟ್ಟುವಂಥ ನೀತಿಯನ್ನನುಸರಿಸಿಕೊಂಡು ಬರುತ್ತಿಲ್ಲ. ಹೀಗಿರುವುದರಿಂದ ಯಾವುದೇ ಹಣ ಬೇಕಾದರೂ ಕೂಡ ಸೇಲ್ಸ್ ಟ್ಯಾಕ್ಸಿನಂಥ ಸಾಮಾನ್ಯ ಜನತೆಯ ಮೇಲೆ ಬೀಳುವ, ಸಾರ್ವತ್ರಿಕವಾಗಿ ಕಿರುಕುಳ ಕೊಡುವ ಕೆಲವು ತೆರಿಗೆಗಳನ್ನು ಜಾರಿಗೆ ತರುವುದಾಗಿದೆ.

ಇದರಿಂದ ಏನಾಗುತ್ತದೆಂದರೆ, ಇವರಿಗೆ ಯಾವಾಗಲೂ ಹಣದ ಅಡಚಣೆ ಇದ್ದೇ ಇರುವುದರಿಂದ, ಅವರಿಗೆ ಬೇಕಾಗತಕ್ಕ ಹಣಕ್ಕಾಗಿ ಯಾವುದೋ ಒಂದು ತೆರಿಗೆ ಹಾಕಿ ಬಿಡುತ್ತಾರೆ. ಈಗ ಅವರು ಹಾಕಿರತಕ್ಕ ಸೇಲ್ಸ್ ಟ್ಯಾಕ್ಸ್ ಎಂಬ ತೆರಿಗೆ ಶ್ರೀಮಂತರ ಮೊದಲುಗೊಂಡು ಕೇವಲ ನಿರ್ಗತಿಕರಾಗಿರುವವರ ಮೇಲೆಲ್ಲಾ ಬೀಳುವಂಥದಾಗಿದೆ. ಹೀಗೆ ಇವರು ವಿವೇಚನೆ ಇಲ್ಲದೆ ಇರತಕ್ಕ ತೆರಿಗೆಗಳನ್ನು ಆಗಿಂದಾಗೆ ಜಾರಿಗೆ ತರುತ್ತಲೇ ಇರುವುದರಿಂದ ದೇಶದಲ್ಲಿರತಕ್ಕ ಜನರ ಸ್ಥಿತಿಗತಿಗಳು ತೀರಾ ಕೆಟ್ಟು ಹೋಗಿವೆ.

ಮತ್ತೊಂದು ಕಡೆ ದೇಶದಲ್ಲಿ ಪಾನ ನಿರೋಧವನ್ನು ಜಾರಿಗೆ ತರುತ್ತೇವೆಂದು ಹೇಳಿ ಈ ಸೇಲ್ಸ್ ಟ್ಯಾಕ್ಸನ್ನು ಜನರಮೇಲೆ ಹೇರಿದನಂತರ ಅದನ್ನು ದೇಶಾದ್ಯಂತವೂ ಜಾರಿಗೆ ತಾರದೆ ಹಾಗೆಯೇ ಕೈ ಬಿಟ್ಟಿದ್ದಾರೆ. ಅದರಿಂದ ಜನರಿಗೆ ಉಂಟಾಗುತ್ತಿರುವ ಕಿರುಕುಳಗಳನ್ನಂತೂ ಹೇಳ ತೀರದಾಗಿದೆ. ಹೀಗೆ ಒಂದು ಕಡೆ ಜನರಿಗೆ ತುಂಬ ಕಿರುಕುಳಗಳಾದುದಲ್ಲದೆ ಮತ್ತೊಂದು ಕಡೆ ಸರ್ಕಾರಕ್ಕೆ ಬರುತ್ತಿದ್ದಂಥ ಅಪಾರ ಆದಾಯಕ್ಕೂ ಕಲ್ಲುಬಿತ್ತು. ಹೀಗೆ ಯಾವ ಒಂದು ವಿಚಾರವನ್ನೇ ತೆಗೆದು ಕೊಳ್ಳಲಿ, ಈ ಕಾಂಗ್ರೆಸ್ ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದ ನೀತಿಯಿಲ್ಲವೆಂಬುದು ಎದ್ದು ಕಾಣುತ್ತದೆ.

ಜನರ ತಾರತಮ್ಯ ನೋಡದೆ ಈ ಸರ್ಕಾರ ಕೆಲಸ ಮಾಡುತ್ತಿದೆ. ಸರ್ಕಾರದವರು ಯಾವ ತೆರಿಗೆಯನ್ನೇ ಹಾಕಲಿ ಅದು ನಿರ್ಗತಿಕರು ಮತ್ತು ಬಡವರ ಮೇಲೆ ಬೀಳತಕ್ಕದ್ದಾಗಿರು ತ್ತದೆಯೇ ಹೊರತು ಶ್ರೀಮಂತರ ಮೇಲೆ ಅಷ್ಟಾಗಿ ಬೀಳುತ್ತಿಲ್ಲ. ಕಾರಣವೇನೆಂದರೆ, ಆ ಶ್ರೀಮಂತರ ಮೇಲೆ ಬೀಳುವ ತೆರಿಗೆಗಳನ್ನು ಹಾಕಿದರೆ, ಅವರಿಗೆಲ್ಲಿ ಕೋಪ ಬಂದು ಈ ಸರ್ಕಾರವನ್ನು ಉರುಳಿಸಿ ಬಿಡುತ್ತಾರೋ ಎಂಬ ಒಂದು ದೊಡ್ಡ ಹೆದರಿಕೆಯಿಂದ ಅವರಮೇಲೆ ತೆರಿಗೆಗಳನ್ನು ಹಾಕಲು ಈ ಸರ್ಕಾರ ಹಿಂಜರಿಯುತ್ತಿರುವುದು ಕಂಡುಬರುತ್ತಿದೆ.

Mr. SPEAKER.—The Hon'ble Member is not speaking on the subject.

ಶ್ರೀ ಕೆ. ಹನುಮಂತಯ್ಯ.—"ಒಂದು ನಿರ್ದಿಷ್ಟವಾದ ನೀತಿಇಲ್ಲ"!

Mr. SPEAKER.—I must tell the Hon'ble Member that it is too general. He must speak on the Bill.

Sri S. GOPALA GOWDA.–Yes. I will try to speak on the subject. ವೆಲ್‌ಫೇರ್ ಸ್ಟೇಟಿನ ಬಗ್ಗೆ ಹೇಗೆ ಶ್ರೀಮಾನ್ ಡಿ. ದೇವರಾಜ ಅರಸರು ಮಾತನಾಡಿದ್ದಾರೋ ಹಾಗೆಯೇ ನಾನೂ ಈ ವಿಚಾರಗಳನ್ನು ಮಾತನಾಡಬೇಕಾಗಿದೆ.

Mr. SPEAKER.—Simply because one Member referred to it that does not mean that you must go on speaking irrelevantly. You must speak with reference to the Bill.

ಶ್ರೀ ಎಸ್. ಗೋಪಾಲಗೌಡ.—ಈ ಬಿಲ್ಲಿಗೆ ಸಂಬಂಧಪಟ್ಟಹಾಗೆ ಮಾತನಾಡುವಾಗ ಸರ್ಕಾರದ ಹಣ ಯಾವರೀತಿ ಖರ್ಚಾಗಿದೆ ಎಂಬ ಬಗ್ಗೆ ಕೆಲವು ಮಾತುಗಳನ್ನಾಡ ಬೇಕಾಗಿದೆ. ಮೊಟ್ಟ ಮೊದಲನೆಯದಾಗಿ ಈ ದಿವಸ ದೊಡ್ಡ ದೊಡ್ಡ ಕಾಮಗಾರಿಗಳಕೆಲಸ ನಡೆಸುತ್ತಿರುವ ಪಿ.ಡಬ್ಲ್ಯು. ಇಲಾಖೆಯನ್ನು ತೆಗೆದುಕೊಳ್ಳೋಣ. ಈ ದಿವಸ ಈ ಇಲಾಖೆಯ ಮೂಲಕ ಸರ್ಕಾರ ನಡೆಸುತ್ತಿರುವಂಥ ಕಾಮಗಾರಿಗಳ ಬಗ್ಗೆ ಮೊದಲೊಂದು ಅಂದಾಜು ಎಸ್ಟಿಮೇಟನ್ನು ತಯಾರಿಸಿ ಕೆಲಸ ಪ್ರಾರಂಭವಾದ ಕೂಡಲೇ 'ಅದಕ್ಕೆ ಹಣ ಖೋತಾ ಬಿತ್ತು, ಪುನಃ ಅದಕ್ಕೆ ಮತ್ತಷ್ಟು ಹಣ ಬೇಕು ಎಂದು ಮತ್ತೊಂದು ಬಿಲ್ಲನ್ನು ತರುತ್ತಾರೆ. ಲಕ್ಕುವಳ್ಳಿಯಂಥಾ ಪ್ರಾಜೆಕ್ಟುಗಳ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಹಾಕಿದ್ದಾರೆ. ಆದರೆ ಈ ದಿವಸ ಅದರಿಂದೇನಾಗಿದೆ? ಹಾಕಿದ್ದೆಲ್ಲಾ ಕೊಚ್ಚಿಕೊಂಡು ಹೋಯಿತು.

Mr. SPEAKER.—Has that happened ?

ಶ್ರೀ ಎಸ್. ಗೊಪಾಲಗೌಡ.—ಲಕ್ಕುವಳ್ಳಿ ಪ್ರಾಜೆಕ್ಟಿನ ವಿಚಾರವೆಂದು ನಾನು ಹೇಳಲಿಲ್ಲ. ಲಕ್ಕವಳ್ಳಿಯಂಥ ಪ್ರಾಜೆಕ್ಟ............

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಮ್ಮ ಚಿತ್ರದುರ್ಗಜಿಲ್ಲೆಯಲ್ಲಿ ಹಾಗೆ ಸಂಗೇನಹಳ್ಳಿ ಡ್ಯಾಂ ಕೊಚ್ಚಿಕೊಂಡು ಹೋಗಿರುವುದು ನನಗೆ ಗೊತ್ತಿದೆ.

Sri S. GOPALA GOWDA.—Let me go on beating about the bush ; if there are birds let them die.................

ಈ ಸಂದರ್ಭದಲ್ಲಿ ಹೀಗೆಲ್ಲಾ ಇನ್ನೂ ಹೆಚ್ಚಿಗೆ ಹಣ ಖರ್ಚಾಗಿ ಹೋಗಿರಬಹುದು. ಆ ಬಗ್ಗೆ ನನಗೆ ಅಷ್ಟೊಂದು ವಿವರಗಳಿಲ್ಲಾ ತಿಳಿಯದು. ಅಂತೂ ಈ ಬಾಬುಗಳ ಮೇಲೆ ಹಾಕಿರತಕ್ಕ ಬಂಡವಾಳದಲ್ಲಿ ಬಹುಭಾಗ ಸೋರಿ ಹೋಗಿರುತ್ತದೆಂದು ಗೊತ್ತಾಗುತ್ತದೆ. ಈ ಕೆಲಸಗಳನ್ನೆಲ್ಲಾ ಒಂದು ಹೆಚ್ಚಿನ ವ್ಯವಸ್ಥಿತ ರೀತಿಯಲ್ಲಿ ಅನುಸರಿಸುವಂಥ ಒಂದು ನೀತಿ ಇಲ್ಲದ್ದರಿಂದ ಅನೇಕ ದೊಡ್ಡ ದೊಡ್ಡ ಡ್ಯಾಂಗಳಲ್ಲಿ ಕೆಲವು ಇನ್ನು ಸ್ವಲ್ಪ ದಿವಸಗಳಲ್ಲೇ ಬಿದ್ದು ಹೋಗಬಹುದು.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಸರ್ಕಾರದವರು ಕಟ್ಟಿಸಿರತಕ್ಕ ದೊಡ್ಡ ಡ್ಯಾಂಗಳ ಪೈಕಿ ಇಲ್ಲಿಯವರೆಗೆ ಹಾಗೆ ಯಾವುದೂ ಕಿತ್ತು ಹೋಗಿರುವುದಿಲ್ಲ.

ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ಕಿತ್ತು ಹೋಗಿಲ್ಲ. ತಳಗಳು ಮಾತ್ರ ಕಾಣುತ್ತಿವೆ!

ಶ್ರೀ ಎಸ್. ಗೋಪಾಲಗೌಡ.—ಒಂದಾವರ್ತಿ ಎಸ್ಟಿಮೇಟ್‌ಮಾಡಿದ ಪ್ರಕಾರ ಆ ಹಣವನ್ನು

(ಶ್ರೀ ಎಸ್. ಗೋಪಾಲಗೌಡ)

ಒಂದು ಸರಿಯಾದ ವ್ಯವಸ್ಥೆಯಲ್ಲಿ ಖರ್ಚು ಮಾಡುವಂತೆ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಮೆಡಿಕಲ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನನ್ನ ಒಂದು ಸಲಹೆ ಏನೆಂದರೆ ಪ್ರೈವೇಟ್ ಡಾಕ್ಟರುಗಳು ಆಗಲಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿರತಕ್ಕ ಡಾಕ್ಟರುಗಳೇ ಆಗಲಿ ರೋಗಿಗಳಿಗೆ ಕೊಡತಕ್ಕ ಚಿಕಿತ್ಸೆಯ ಬಗ್ಗೆಯೂ ಮತ್ತು ಅವರಿಗೆ ಪ್ರಯೋಗಿಸತಕ್ಕ ಇಂಜಕ್ಷನ್‌ಗಳ ಬಗ್ಗೆಯೂ ಯಾವ ಯಾವ ರೋಗಿಯ ಮೇಲೆ ಏನೇನು ಔಷಧಿಗಳ ಮತ್ತು ಇಂಜಕ್ಷನ್‌ಗಳ ಪ್ರಯೋಗ ನಡಸಲಾಯಿತೆಂಬುದರ ಬಗ್ಗೆ ನಿರ್ದಿಷ್ಟವಾಗಿ ಪ್ರತಿಯೊಬ್ಬ ರೋಗಿಗೂ ಒಂದೊಂದು ಅಲಾಯಿದ ಕೇಸ್ ಷೀಟುಗಳನ್ನು ಇಡುವಂತೆ ಒಂದು ಪದ್ಧತಿಯನ್ನು ಒತ್ತಾಯ ಪಡಿಸಬೇಕೆಂದು ಹೇಳುತ್ತೇನೆ. ಮತ್ತು ಇಂಥ ಒಂದು ಪದ್ಧತಿಯನ್ನು ಒತ್ತಾಯ ಪಡಿಸುವುದರ ಜೊತೆಗೆ ಮತ್ತೊಂದು ಅಂಶವನ್ನೂ ಸಹ ನಾನು ಒತ್ತಾಯಪಡಿಸಬೇಕಾಗಿದೆ. ಅದೇನೆಂದರೆ, ಹಾಗೆ ಈ ಮೆಡಿಕಲ್ ಜನರು ಇಡತಕ್ಕ ಕೇಸ್ ಷೀಟುಗಳನ್ನು ಆ ರೋಗಿಗಳು ಸತ್ತು ಹೋದ ಮೇಲಾದರೂ, ಆ ರೋಗಿಗೆ ಏನೇನು ಚಿಕಿತ್ಸೆಗಳನ್ನು ನಡೆಸಲಾಗಿರುತ್ತೆಂಬ ಬಗ್ಗೆ ನಮಗೆ ತಿಳಿದುಕೊಳ್ಳುವ ಒಂದು ಅವಕಾಶವಿರುವಂತೆ ಮಾಡಲಿಕ್ಕೋಸ್ಕರವಾಗಿ ಒಂದು ಲೆಕ್ಕವನ್ನಿಡಬೇಕೆಂದೂ ಮತ್ತು ಆ ಬಗ್ಗೆ ಒಂದು ಮೆಡಿಕಲ್ ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನೂ ಕೂಡ ರಚನೆ ಮಾಡಬೇಕಾದದ್ದು ಅತ್ಯಗತ್ಯವಾಗಿದೆಯೆಂದೂ ನನಗೆ ಹೊಳೆಯುತ್ತಿದೆ. ತಾವು ಈ ಆಸ್ಪತ್ರೆಗಳ ಬಗ್ಗೆ ಅಪಾರವಾಗಿ ದುಡ್ಡನ್ನು ಖರ್ಚುಮಾಡಿದ್ದ ಮಾತ್ರಕ್ಕೇ ಕೆಲಸ ಕಾರ್ಯಗಳೆಲ್ಲವೂ ಸರಿಯಾಗಿ ಜರುಗುತ್ತಿವೆಯೆಂದೂ ಮತ್ತು ಆ ಹಣವೆಲ್ಲಾ ಸದ್ವಿನಿಯೋಗವಾಗುತ್ತಿದೆಯೆಂದೂ ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ಇಂಥ ಒಂದು ಸಮಿತಿಯ ನೇಮಕ ಅಗತ್ಯವಾಗಿದೆ. ಆದರೆ ಕೆಲ ಕೆಲವು ಸ್ಥಳಗಳಿಗೆ ಹೋಗಿ ಖುದ್ದಾಗಿ ಪರಾಂಬರಿಕೆ ಮಾಡಿಕೊಂಡು ಬರಲು ನನಗೆ ಅವಕಾಶವಿಲ್ಲ. ಇತ್ತೀಚೆಗೆ ಕೇವಲ ಔಷಧಿ ಪಟ್ಟಿಗಳಲ್ಲಿ ಬರುತ್ತಿರುವ ಔಷಧಿಗಳನ್ನೇ ನೋಡಿಕೊಂಡು,—ಅಂದರೆ ಅನೇಕ ಕಂಪೆನಿಗಳು ಇತ್ತೀಚೆಗೆ ಹೆಚ್ಚಿಕೊಂಡಿರುತ್ತವೆ,—ಅವರ ರೋಗ ಯಾವುದು ಎಂಬುದನ್ನೇ ತಿಳಿಯದೆ, ಅಂಥ ಕಂಪೆನಿಗಳ ಔಷಧಿಯನ್ನು ರೋಗಿಗಳಮೇಲೆ ಪ್ರಯೋಗಿಸಿ, ಅದರಿಂದ ಅಲ್ಪಸ್ವಲ್ಪ ಕಾಯಿಲೆಯಿಂದ ನರಳುತ್ತಿದ್ದಂಥ ರೋಗಿಗಳೆಲ್ಲಾ ಬಹಳ ಉಲ್ಬಣಾವಸ್ಥೆಗೆ ಬಂದು ಸತ್ತು ಹೋಗಿರತಕ್ಕಂಥ ನಿದರ್ಶನಗಳೂ ಇವೆ. ದಿನಕ್ಕೊಂದರಂತೆ ಈಗ ಔಷಧಿ ಕಂಪೆನಿಗಳು ತಲೆಯೆತ್ತುತ್ತಿವೆ. ಅನೇಕ ಡಾಕ್ಟರುಗಳಿಗೆ ಏನೂ ಅನುಭವವೇ ಇಲ್ಲದೆ ಅವರು ಕೇವಲ ಬಾಟಲ್ ಮೇಲಿರತಕ್ಕ ಲೇಬಲ್ ನೋಡಿಕೊಂಡು ಅದರಂತೆ ರೋಗಿಗಳಿಗೆ ಔಷಧಿ ಪ್ರಯೋಗ ನಡೆಸುತ್ತಿರುವುದು ನನಗೆ ಕಂಡುಬಂದಿದೆ. ಹೀಗೆ ಅತ್ತಲಾಗಿ ಈ ಡಾಕ್ಟರುಗಳಿಗೆ ಪೂರ್ಣವಾಗಿ ಔಷಧಿ ಪರೀಕ್ಷೆಯೂ ಗೊತ್ತಿಲ್ಲ, ಅತ್ತ ರೋಗದ ಪರೀಕ್ಷೆಯೂ ಕೂಡ ತಿಳಿಯುವುದಿಲ್ಲ. ವಾಸ್ತವಾಂಶಗಳು ಹೀಗಿರುವುದರಿಂದ, ನಾನು ಈ ಸಲಹೆಗಳನ್ನು ಈಗ ತಮ್ಮ ಮುಂದೆ ಇಟ್ಟಿರುತ್ತೇನೆ.

ಇನ್ನು ಕ್ಷಾಮದ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಅಧ್ಯಕ್ಷರು ಅದಕ್ಕಾಗಿಯೇ ಒಂದು ಪ್ರತ್ಯೇಕ ದಿನವನ್ನು ನಿರ್ಧರಿಸಲಾಗಿದೆಯೆಂದು............

ಅಧ್ಯಕ್ಷರು.—ಒಂದು ದಿನವೆಂದು ಹೇಳಲಿಲ್ಲ. ಆ ಬಗ್ಗೆ ಒಂದು ನಿರ್ಣಯವೇ ಬಂದಿದೆ; ಎಂದು ಹೇಳಲಾಗಿತ್ತು, ಅಷ್ಟೆ.

ಶ್ರೀ ಎಸ್. ಗೋಪಾಲಗೌಡ.—ಈಗಾಗಲೇ ಈ ಚರ್ಚೆ ಪ್ರಾರಂಭವಾದಮೇಲೆ ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಮತ್ತು ಶ್ರೀ ಜೆ. ಮಹಮದ್ ಇಮಾಂರವರೂ ಅನೇಕ ಉಪಯುಕ್ತ ಸಲಹೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಹಾಗೆ ಅವರು ಸಲಹೆಗಳನ್ನು ಕೊಡುತ್ತ ಸರ್ಕಾರದವರು ಖರ್ಚನ್ನು ತಗ್ಗಿಸಬೇಕೆಂದು ಸೂಚನೆ ಕೊಟ್ಟಿದ್ದಾರೆ. ನಮ್ಮ ಆರ್ಥಿಕ ಪರಿಸ್ಥಿತಿ ಹೀಗೆ

ದುಸ್ತರವಾಗಿರುವಾಗ ಸರ್ಕಾರದವರು ಅನಾಯಾಸವಾಗಿ ಖರ್ಚು ಮಾಡಬಾರದೆಂದು ಹೇಳಿರತಕ್ಕದು. ನ್ಯಾಯವಾಗಿಯೇ ಇದೆ. ಅದೇ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳವರು, ಸದಸ್ಯರುಗಳು ಕೇಳಿರತಕ್ಕ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರಗಳನ್ನೊದಗಿಸತಕ್ಕ ಬಗ್ಗೆ ಒಂದು ಪ್ರತ್ಯೇಕ ಸಿಬ್ಬಂದಿಯನ್ನೇ ಇಟ್ಟುಕೊಳ್ಳಬಹುದೆಂದು ಹೇಳಿದ್ದವರು, ಈ ದಿವಸ ಹೀಗೆ ಖರ್ಚನ್ನು ಕಡಮೆ ಮಾಡಬೇಕೆಂದು ಹೇಳುತ್ತಿರುವುದರಲ್ಲಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಹೇಳುತ್ತಿದ್ದಾರೆಂದು ಹೇಳಿದರು. ಹಾಗೆ ಪ್ರತಿಯೊಂದು ಕೆಲಸಕ್ಕೂ ಒಂದೊಂದು ಅಲಾಯಿದಾ ಯಂತ್ರವನ್ನಿಟ್ಟು ಕೆಲಸ ಮಾಡಬೇಕಾದದ್ದಿಲ್ಲ. ಆ ಆಡಳಿತ ಯಂತ್ರಕ್ಕೂ ಒಂದು ಪರಿಮಿತಿಯಿದೆ. ಇರತಕ್ಕ ಆ ಯಂತ್ರಕ್ಕೇ ಸರಿಯಾದ ಔಷಧೋಪಚಾರಗಳನ್ನುಮಾಡಿ, 15 ರೂಪಾಯಿ ಕೊಡತಕ್ಕ ಕಡೆ 20 ರೂಪಾಯಿ ಖರ್ಚುಮಾಡಿದರೆ ಆ ಕೆಲಸ ಅದೇ ಆಗುತ್ತದೆ. ಅದಕ್ಕೇ ಒಂದು ಪ್ರತ್ಯೇಕ ಶಾಖೆಯನ್ನು ಏರ್ಪಡಿಸತಕ್ಕಂಥ ಅಗತ್ಯವೇನೂ ಇರುವುದಿಲ್ಲ. ಹೀಗೆ ಮಾಡಿದರೆ ಒಂದು ಕೆಲಸವಾಗತಕ್ಕ ಕಡೆ ಎರಡು ಕೆಲಸಗಳನ್ನು ಬೇಕಾದರೂ ನಡೆಸುವಂತೆ ಮಾಡಬಹುದು. ಇನ್ನು ನಾನು ಈ ಆಡಳಿತ ಶಾಖೆಯ ಬೋನಿನಲ್ಲಿ ಏನೇನು ಲೋಪ ದೋಷಗಳಿರುತ್ತವೆಂಬುದನ್ನು ಕಂಡು ಹಿಡಿಯಲು ಪ್ರಯತ್ನಪಟ್ಟು ಇದರಲ್ಲಿ ಈಗ ಸಿಕ್ಕಿಹಾಕಿಕೊಂಡರೆ ಬೇಗ ನಾನು ಇವುಗಳನ್ನೆಲ್ಲಾ ಬಿಡಿಸಿಕೊಂಡು ಹೊರಗೆ ಬರಲಾಗುವುದಿಲ್ಲವೆಂಬ ಹೆದರಿಕೆಯಿಂದ ನಾನು ಇದನ್ನು ಇಷ್ಟಕ್ಕೇ ಮುಗಿಸುತ್ತೇನೆ.

Mr. SPEAKER.—I must tell the Hon'ble Member once again that it is too general besides he has taken 17 minutes.

ಶ್ರೀ ಎಸ್. ಗೋಪಾಲಗೌಡ.—ಈ ರೀತಿಯಾಗಿ ಆಡಳಿತದ ಯಂತ್ರವನ್ನು ಇಂಥ ಆರ್ಥಿಕ ದುಸ್ಥಿತಿಯಲ್ಲಿ ವಿಸ್ತರಿಸಲಿಕ್ಕೆ ಹೋಗುವುದು ಸೂಕ್ತವಲ್ಲವೆಂದೂ ಮತ್ತು ತಾವು ಆಡಳಿತ ನಡೆಸತಕ್ಕಬಗ್ಗೆ ಒಂದು ಶುಚಿಯಾದ ಮತ್ತು ಸುಭದ್ರವಾದ ನೀತಿಯನ್ನೂ ಒಂದು ನಿರ್ದಿಷ್ಟವಾದ ಗುರಿಯನ್ನೂ ಇಟ್ಟುಕೊಂಡು ಕೆಲಸ ಮಾಡಬೇಕೆಂದೂ ಸಲಹೆಗಳನ್ನು ಮಾಡುತ್ತಿರುವ ವೇಳೆಯಲ್ಲಿ ಸಭೆಯಲ್ಲಿ ಮಾನ್ಯಮಂತ್ರಿಗಳು ಉತ್ತರಕೊಡುತ್ತಾ, ಬಹಳದೂರ ಹೋಗಿ, 'ಸಾರ್ವಜನಿಕರೇ ಮೊನ್ನೆ ನಡೆದ ಮಹಾಚುನಾವಣೆಗಳ ಕಾಲದಲ್ಲಿ ನಿಮಗೆ, ನೀವು ಮಾಡಿದ ಟೀಕೆಗಳಿಗೆಲ್ಲಾ ಸರಿಯಾಗಿ ಪಾಠಕಲಿಸಿದ್ದಾರೆ' ಎಂದು ಹೇಳಿದರು. ಆದರೆ ಆ ಚುನಾವಣೆ ಕಾಲದಲ್ಲಿ ಏನೇನು ಅನ್ಯಾಯಗಳು ನಡೆದಿರುತ್ತವೆ.........

ಶ್ರೀ ಜೆ. ಮಹಮದ್ ಇಮಾಂ.—ಆ ಬ್ಯಾಲೆಟ್ ಬಾಕ್ಸ್‌ಗಳ ವಿಚಾರದಲ್ಲೋ?

ಶ್ರೀ ಎಸ್. ಗೋಪಾಲಗೌಡ.—ನಾವು ಈ ದಿವಸ ಇಲ್ಲಿಗೆ ಬಂದು ಕುಳಿತಿರುವುದು ಆಡಳಿತದಲ್ಲಿ ಕಂಡುಬರುವ ನ್ಯೂನತೆಗಳನ್ನು ಕಂಡರೂ ಕಾಣದಂತೆ ಸುಮ್ಮನೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಲ್ಲ. ತಾವು ಈ ದಿವಸ ಕಾರುಗಳನ್ನು ಕೊಂಡಿರತಕ್ಕ ವಿಷಯದಲ್ಲಿ ಹೀಗೆ ದುಡ್ಡನ್ನು ಖರ್ಚುಮಾಡುವುದು ನ್ಯಾಯವಾದದ್ದಲ್ಲವೆಂದು ಟೀಕೆಮಾಡದೆ ಇದ್ದರೆ ನಾಳೆ ತಾವು ಮತ್ತೊಂದು ಕಾರನ್ನು ಇನ್ನೂ ಹೆಚ್ಚಿನ ಹಣಕ್ಕೆ ಕೊಳ್ಳಬಹುದು. ಹಾಗೆ ಟೀಕೆ ಮಾಡಿದ್ದಕ್ಕೆ ನಾಳೆ ಜನಗಳಾರೂ ನಮಗೆ ಓಟನ್ನು ಕೊಡುವುದಿಲ್ಲವೆಂದು ತಾವು ಹೇಳಬಹುದು. ಆದರೆ ನಾವು ಈದಿವಸ ಹಾಗೆ ಜನರಿಂದ ಓಟುಗಳಿಸಬೇಕೆಂಬ ಆಸೆಗೆ ಹೀಗೆ ಟೀಕೆಮಾಡಬೇಕಾಗಿಲ್ಲ. ಅಂಥ ದುರುದ್ದೇಶದಿಂದ ನಾವು ಟೀಕೆ ಮಾಡತಕ್ಕವರಲ್ಲ. ಇಲ್ಲಿಯತನಕ ನಾವು ಮಾಡಿರತಕ್ಕ ಪ್ರತಿಯೊಂದು ಟೀಕೆಯೂ ನಮ್ಮಿಂದ ಸೃಷ್ಟಿಯಾದುವಲ್ಲ. ನಮ್ಮ ಅನುಭವಕ್ಕೆ ಚೆನ್ನಾಗಿ ಕಂಡುಬಂದಿರುವಂಥ ವಿಷಯಗಳು ಅವೆಲ್ಲ. ಹಾಗೆ ನೀವು ಹೆಜ್ಜೆಹೆಜ್ಜೆಗೂ ಮಾಡುತ್ತಿರುವ ಕೆಲಸಗಳಲ್ಲಿ ಇದುತಪ್ಪು, ಮತ್ತೊಂದರಲ್ಲಿ ಇಂಥ ನ್ಯೂನತೆಗಳಿರುತ್ತವೆ, ಹಾಗೆನೂಡತಕ್ಕದ್ದು ಸರಿಯಾದ್ದಲ್ಲ ಎಂದು ಹೇಳುವುದಕ್ಕೂ ನಮಗೆ ಒಂದು ಅವಕಾಶವಿಲ್ಲ ಎನ್ನುವುದಾದರೆ ನನಗೆ ಇಲ್ಲಿ ಬಂದು ಕುಳಿತುಕೊಳ್ಳಲು ಯಾವ ಕೆಲಸವೂ

(ಶ್ರೀ ಎಸ್. ಗೋಪಾಲಗೌಡ)

ಇರುವುದಿಲ್ಲವೆಂದು ಹೇಳುತ್ತೇನೆ. ನೀವು ಅಷ್ಟು ಮನಸ್ಸನ್ನು ಕೆಡಿಸಿಕೊಂಡು ನಿಮಗೆ ಜನರು ಕಲಿಸಿರತಕ್ಕ ಪಾಠ ಇನ್ನೂ ಸಾಲದೇ! ಎಂದು ಹೆದರಿಸುವುದು ಸರಿಯಾದದ್ದಲ್ಲ.

Mr. SPEAKER.—What is the subject matter, Sri Gopala Gowda?

ಶ್ರೀ ಎಸ್. ಗೋಪಾಲಗೌಡ.—ಅದಕ್ಕೆ ಸಬಂಧಪಟ್ಟಹಾಗೆ ಇಲ್ಲೇ ಉದ್ದುದ್ದವಾದ ಹೇಳಿಕೆಗಳು ನಡೆದಿರುವುದರಿಂದ ಅವುಗಳಿಗೆ ಸರಿಯಾದ ಉತ್ತರಕೊಡದಿದ್ದಲ್ಲಿ ಏನಾಗುತ್ತದೋ ಎಂಬ ಹೆದರಿಕೆಗಾಗಿ ಮಾತನಾಡುತ್ತಿದ್ದೇನೆ. ಆದರೆ ಈ ಪ್ರಸಕ್ತ ಬಿಲ್ಲಿನ ಮೇಲೆ ಮಾತನಾಡಲು ನನಗೆ ಅಷ್ಟು ಕಾಲಾವಕಾಶವಿಲ್ಲದ್ದರಿಂದ ಇದನ್ನು ಈಗ ತಾರದೆ ಇದ್ದಿದ್ದರೆ ಬಹಳ ಚೆನ್ನಾಗಿತ್ತೆಂದೂ, ಇದೇ ರೀತಿ ಪದೇ ಪದೇ ತಾವು ಇಂಥ ಬಿಲ್ಲುಗಳನ್ನು ಸಭೆಯಮುಂದೆ ತಾರದಂತೆ ವಿವೇಕದಿಂದ ಕೆಲಸ ಮಾಡಬೇಕೆಂದೂ ಈ ಎರಡು ಮಾತುಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಅಪ್ರೋಪ್ರಿಯೇಷನ್ ಬಿಲ್ಲನ್ನು ಸ್ವಾಗತಿಸುತ್ತ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇದುವರೆಗೂ ಬಿಲ್ಲುಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲಿರತಕ್ಕ ಐಟಂಗಳೊಂದರ ವಿಚಾರವಾಗಿ ಯಾವ ಒಂದು ಸಲಹೆಯನ್ನೂ ಕೊಡುವುದಕ್ಕೆ ಸಾಧ್ಯವಿಲ್ಲದೆ ತಮ್ಮ ಮನಸ್ಸಿಗೆ ಬಂದಹಾಗೆಲ್ಲಾ ಟೀಕೆಮಾಡುತ್ತ, ಮುಂದೆ ಹೋಗುವುದಕ್ಕೆ ಈಗಿನ ಸರ್ಕಾರಕ್ಕೆ ದಿಕ್ಕು ತೋಚದೆ, ಯಾವ ಒಂದು ಗುರಿಯನ್ನೂ ಸಾಧಿಸಲು ಸಾಧ್ಯವಿಲ್ಲದೆ ಹೋಗಿರುತ್ತೆಂದು ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಹೇಳಿರತಕ್ಕದ್ದು ಅಷ್ಟು ಚೆನ್ನಾಗಿ ಕಾಣುತ್ತಿಲ್ಲ. ಅಷ್ಟೇಅಲ್ಲದೆ ಹೀಗೆ ಅವರು ಜನರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದು ಕುಳಿತುಕೊಂಡು ದೇಶಕ್ಕೆ ಯಾವ ರೀತಿಯಲ್ಲಿ ಉಪಕಾರ ಮಾಡಬೇಕೆಂಬುದು ಅವರಿಗೆ ಬಹುಶಃ ಗೊತ್ತಿಲ್ಲವೆಂದು ಕಾಣುತ್ತದೆ.

ಅದೇ ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನೆತ್ತಿದ್ದಾರೆ. ಕಾರನ್ನು ಕೊಂಡಿರತಕ್ಕ ವಿಚಾರವನ್ನೇ ಒಂದು ದೊಡ್ಡದನ್ನಾಗಿ ಮಾಡಿಕೊಂಡು ಅದರಮೇಲೆ ದೊಡ್ಡ ಭಾಷಣವನ್ನೇ ಮಾಡಿದ್ದಾರೆ.

Mr. SPEAKER.—Let your speech be confined to the Bill.

ಶ್ರೀ ಬಿ. ಟಿ. ಕೆಂಪರಾಜ್.—ಈ ವಿಚಾರಗಳಲ್ಲಿ ನೀವು ಒಳಹೊಕ್ಕು ನೋಡುವುದಾದರೆ ಎಷ್ಟರ ಮಟ್ಟಿಗೆ ದೇಶವುಮುಂದುವರಿಯುತ್ತಿದೆಯೆಂಬುದರ ಪ್ರಗತಿದಾಯಕ ಸೂಚನೆಗಳು ಕಂಡುಬರುತ್ತಿವೆಯೆಂಬುದು ತನುಗೇ ಗೊತ್ತಾಗುತ್ತದೆ. ಈ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿರತಕ್ಕ ಪ್ರತಿಯೊಂದು ಐಟಂಅನ್ನೂಸಹ ಆಲೋಚನೆಮಾಡಿ ನೋಡಿದರೆ ಪ್ರಗತಿದಾಯಕ ಯೋಜನೆಗಳನ್ನು ಎಷ್ಟರಮಟ್ಟಿಗೆ ಹಾಕಿ ದೇಶದಮುಂದೆ ಇಟ್ಟಿದ್ದಾರೆ, ಆ ಬಗ್ಗೆ ಎಷ್ಟೊಂದು ಹಣವನ್ನು ವಿನಿಯೋಗ ಮಾಡಿರುತ್ತಾರೆ ಎಂಬ ವಿಷಯಗಳೂ ಮತ್ತು ಆ ಬಗ್ಗೆ ಬೇಕಾಗಿರತಕ್ಕ ಮೊಬಲಗು ಎಷ್ಟಾಗುತ್ತದೆಂದು ತಯಾರಿಸಿರುವ ಅಂದಾಜು ಸಹಿತ ಲೆಕ್ಕಗಳೂ ತಿಳಿಯುತ್ತವೆ. ಇಷ್ಟೆಲ್ಲಾ, ಮಾಡಿದ್ದರೂ ಕೂಡ ಸರ್ಕಾರ ದಿಕ್ಕುತೋಚದೆ, ದಾರಿಕಾಣದೆ ಕುಳಿತಿರುತ್ತದೆಂದು ಹೇಳಿರತಕ್ಕದ್ದೆಲ್ಲಾ ಕೇವಲ ನಿರಾಧಾರವಾದ ಟೀಕೆಗಳ್ಳು

ದೇಶದಲ್ಲಿ ಉಂಟಾಗಿರತಕ್ಕ ಕ್ಷಾಮದ ವಿಚಾರವಾಗಿ ಮಾತನಾಡುತ್ತ ಒಂದು ಭೀಕರ ಸ್ಥಿತಿ ಬಂದು ಒದಗಿರುತ್ತೆಂದು ಟೀಕೆ ಮಾಡಿದ್ದಾರೆ. ಎಂಥ ಕ್ಷಾಮವೇ ಬರಲಿ, ಅದನ್ನು ದಿಟ್ಟತನದಿಂದ ಎದುರಿಸಬೇಕಾದದ್ದು ಸರ್ಕಾರದ ಮತ್ತು ದೇಶದ ಪ್ರಜೆಗಳ ಕರ್ತವ್ಯ. ಅದಕ್ಕಾಗಿ ಸರ್ಕಾರ ಈಗಾಗಲೇ 20 ಲಕ್ಷ ರೂಪಾಯಿಗಳ ನಿಧಿಯನ್ನೊದಗಿಸಿರುವುದು ಬಹಳ ಸಮಯೋಚಿತವೂ ಮತ್ತೂ ಶ್ಲಾಘನೀಯವೂ ಆಗಿದೆ. ಹೀಗೆ ಒದಗಿಸಿರತಕ್ಕ ಮೊಬಲಗಿನಲ್ಲಿ ಬಹುಭಾಗದ ಹಣವನ್ನು

ಕೋಲಾರ ಜಿಲ್ಲೆಗೆ ಒದಗಿಸಿದ್ದಾರೆ. ಅಲ್ಲಿನ ಜನರು ಬಹಳ ಕಷ್ಟಕ್ಕೀಡಾಗಿರುವುದರಿಂದ ಆ ಜನರನ್ನು ಸುಧಾರಣೆಮಾಡತಕ್ಕ ಬಗ್ಗೆ ನಮ್ಮ ಸಂಸ್ಥಾನದ ಸಹಾಯದ ಜೊತೆಗೆ ಹೊರಗಡೆ ಯಿಂದಲೂ ಸಹ ಸಾರ್ವಜನಿಕರಿಂದ ಸಹಾಯ ಪಡೆಯುವ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಬಿದ್ದಿದೆ. ಅದೇರೀತಿ ಅವರು ಈ ಕ್ಷಾಮನಿವಾರಣೆಗಾಗಿ ಅಪಾರ ಹಣವನ್ನು ಖರ್ಚು ಮಾಡುತ್ತಿದ್ದಾರೆ.

ಈ ಕಷ್ಟಪರಿಸ್ಥಿತಿ ಇನ್ನೂ ಮುಂದಕ್ಕೆ ದೇಶದ ಮೂಲೆಮೂಲೆಗೂ ಹರಡದಂತೆ ತಡೆ ಗಟ್ಟತಕ್ಕ ಬಗ್ಗೆ ಅಪಾರ ಹಣವನ್ನು ವಿನಿಯೋಗ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡಬೇಕಾಗಿರುವುದೇನೆಂದರೆ: ವ್ಯವಸಾಯಾಭಿವೃದ್ಧಿಗಾಗಿ ಸರ್ಕಾರದವರು ವಿದ್ಯುಚ್ಛಕ್ತಿ ಸರಬರಾಯಿಯನ್ನು ದೇಶದ ಎಲ್ಲಾ ಮೂಲೆಮೂಲೆಗಳಿಗೂ ಆದಷ್ಟು ಬೇಗ ಒದಗಿಸಬೇಕು ಎಂಬುದು; ಮತ್ತೆ ಕೆಲವುಕಡೆ ಧನಸಹಾಯವನ್ನೂ ಸಹ ನೀಡಬೇಕಾಗುತ್ತದೆ. ಎಲ್ಲಿಯವರೆಗೆ ಈ ವಿದ್ಯುಚ್ಛಕ್ತಿಯನ್ನು ನೀರಾ ವರಿ ಕಾಮಗಾರಿಗಳಿಗಾಗಿ ಒದಗಿಸುವುದಿಲ್ಲವೋ ಅಲ್ಲಿಯವರೆಗೂ ನಮಗೆ ಈ ಆಹಾರದ ಕೊರತೆ ತಪ್ಪಿದ್ದಲ್ಲ, ಕಂಟ್ರೋಲೂ ತಪ್ಪಿದ್ದಿಲ್ಲ. ಇದರಿಂದ ಮುಂದಕ್ಕೆ ಜನರಿಗೆ ಇನ್ನೂ ಹೆಚ್ಚಿನ ಕ್ಷೋಭೆಗಳಾಗಬಹುದು.

4 P.M.

ಇದರಿಂದಾಗಿ ಇಂಥ ಅಪ್ರೋಪ್ರಿಯೇಷ ಬಿಲ್ಲುಗಳು ಅತ್ಯಗತ್ಯವಾದವು ಮತ್ತು ಕಾಲಕ್ಕನುಗುಣವಾದುವು. ಅಲ್ಲದೆ, ಇನ್ನೊಂ ದಂಶವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳ ಬೇಕು. ಖೋತಾ ಬಡ್ಜೆಟ್ ಒಂದನ್ನು ಈ ಸಭೆಯ ಮುಂದಿಟ್ಟ ಮಾತ್ರಕ್ಕೇ ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿದೆಯೆಂಬ ಭೀತಿಯಿಟ್ಟುಕೊಳ್ಳ ಬೇಕಾದದ್ದು ಅನಗತ್ಯ. ಏಕೆಂದರೆ ಯಾವದೇಶ ದಲ್ಲೇ ಆಗಲಿ ಖೋತಾ ಬಡ್ಜೆಟ್ಟು ಆ ದೇಶದ ಆರ್ಥಿಕ ಭದ್ರತೆ ಆ ದೇಶದಲ್ಲಿರತಕ್ಕ ಸಾಲ, ಸೆಕ್ಯೂರಿಟಿ ಮತ್ತು assets ಮುಂತಾದುವುಗಳ ಮೇಲೆ ನಿಲ್ಲುತ್ತದೆ. ಅಂದ ಮೇಲೆ ದೇಶದ ಅಭಿವೃದ್ಧಿ ಕಾರ್ಯಗಳು ದಿನೇ ದಿನೇ ಹೆಚ್ಚುತ್ತಿರುವಾಗ ಮತ್ತು ಜನರ ಜವಾಬ್ದಾರಿಯೂ ಹೆಚ್ಚುತ್ತಿರುವಾಗ, ಜನರು ಹೆಚ್ಚು ಹೆಚ್ಚಿಗೆ ಅನುಕೂಲತೆಗಳನ್ನು ಸರ್ಕಾರ ದವರು ಕಲ್ಪಿಸಿಕೊಡಬೇಕೆನ್ನುವ ಮನೋಭಾವ ವುಳ್ಳರಾಗಿರುವಾಗ ಇಂಥ ಖರ್ಚುಗಳನ್ನು ಹೆಚ್ಚಿಸುತ್ತಲೇ ಇರಬೇಕಾದದ್ದು ಸಹಜವಾಗಿರು ತ್ತದೆ. ಜನರಿಗೆ ಬೇಕಾದ ಅನುಕೂಲಗಳನ್ನು ಒದಗಿಸಬೇಕಾದರೆ ಸರ್ಕಾರದವರೂ ಹೆಚ್ಚು ಹೆಚ್ಚು ಭಾರವನ್ನು ಹೊರಲೇಬೇಕಾಗುತ್ತದೆ. ಇದಕ್ಕಾಗಿ ಸರ್ಕಾರಗಳು ಯಾವುದಾದರೂ ಒಂದು ರೂಪದಲ್ಲಿ ಅನೇಕ ವಸೂಲಿ ಬಾಬು ಗಳನ್ನು ಹುಡುಕಲೇ ಬೇಕಾಗುತ್ತದೆ. ಅಂದ ಮೇಲೆ ಈಗ ನಮ್ಮ ಮುಂದಿಟ್ಟಿರುವ ಅಪ್ರೋ ಪ್ರಿಯೇಷ ಬಿಲ್ಲಿನಲ್ಲಿರತಕ್ಕ ಒಂದೊಂದು ಬಾಬನ್ನೂ ನೋಡಲಿ, ಅಲ್ಲಿ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿಗೆ ನಿಗಾಕೊಟ್ಟು ಖರ್ಚನ್ನು ಮಾಡುವ ಉದ್ದೇಶವಿರುವುದು ಕಂಡುಬರು ತ್ತದೆಯೇ ವಿನಾ ಏನೋ ಒಂದು ತಮಾಷೆಗಾಗಿ ಯಾಗಲಿ ಅಥವಾ ಯಾವುದೊಂದು ಉದ್ದೇಶವೂ ಇಲ್ಲದೆ ಖರ್ಚುಮಾಡುವುದಾಗಲಿ ಕಂಡು ಬರುವುದಿಲ್ಲ. ಆದ್ದರಿಂದ ಈ ಅಪ್ರೋಪ್ರಿಯೇಷ ಬಿಲ್ಲು ಸಮಯೋಚಿತವೂ ಕಾಲಕ್ಕನುಗುಣ ವಾಗಿಯೂ ಇದೆ. ಇದನ್ನು ಅನುಮೋದಿಸ ಬೇಕಾದದ್ದು ಸದಸ್ಯರ ಆದ್ಯ ಕರ್ತವ್ಯವಾಗಿದೆ ಯೆಂದು ಹೇಳಿ ನಾನು ನನ್ನ ಮಾತನ್ನು ಮುಗಿ ಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳ ವಳ್ಳಿ).—ಅಧ್ಯಕ್ಷರೇ, ಈ ಸಭೆಯ ಮುಂದೆ ಈಗ ನಾಲ್ಕು ತಿಂಗಳ ಹಿಂದಿಟ್ಟ ಆಯವ್ಯಯದ ಅಂದಾಜಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ಖೋತಾ ಆಗಿರುವುದು ತಮ ಗೆಲ್ಲಾ ಗೊತ್ತಿದೆ. ಈಗ ನಾಲ್ಕು ತಿಂಗಳು ಕಳೆದ ಮೇಲೆ ಈ ಖೋತಾ $1\frac{3}{4}$ ಕೋಟಿಗೆ ಮೀರಿ ದಷ್ಟಾಗುತ್ತದೆಂದು ತೋರುತ್ತಿದೆ. ಹೀಗೆಯೇ ಹೋದರೆ, ಇನ್ನು ಮುಂದಿನ ನಾಲ್ಕೈದು ತಿಂಗಳುಗಳ ಹೊತ್ತಿಗೆ ಈ ಖೋತಾ ಎಲ್ಲಿಗೆ ಮುಟ್ಟುತ್ತದೆಯೋ ಎಂದು ಭಯವಾಗಿದೆ!

(ಶ್ರೀ ಬಿ. ಪಿ. ನಾಗರಾಜಮೂರ್ತಿ)

ಖೋತಾ ಬಜೆಟ್ ಎಂಬುದು ಏನೋ ಅಪೂರ್ವವಾಗಿ ಒಂದುಸಾರಿ ಬಂದಿದ್ದರೆ ಅಷ್ಟಾಗಿ ಗಮನಿಸ ಬೇಕಾಗಿರಲಿಲ್ಲ. ಆದರೆ ವರ್ಷೇ ವರ್ಷೇ ಈ ಸಭೆ ಸೇರಿದಾಗಲೆಲ್ಲಾ ಇಂಥ ಖೋತಾ ಬಜೆಟ್ಟುಗಳು ಬರುತ್ತಿದ್ದರೆ ದೇಶದ ಆರ್ಥಿಕ ಭದ್ರತೆ ಯಾವ ರೀತಿ ಇರಬಹುದೆಂಬುದನ್ನು ನೀವೇ ಊಹಿಸಬಹುದು. ಇಂಥ ಖೋತಾ ಬಜೆಟ್ಟುಗಳನ್ನು ನೋಡಿದರೆ, ಆಕಸ್ಮಾತ್ತು ಸರ್ಕಾರದವರು ಸಾರ್ವಜನಿಕರಲ್ಲಿ ಸಾಲವೆತ್ತಬೇಕಾಗಿ ಬಂದರೂ ಸಾಲದೊರೆಯುತ್ತದೆಯೇ ಎಂಬ ಅನುಮಾನ ಬರುತ್ತದೆ.

ಆದ್ದರಿಂದ ಮುಂಚೆ ಈ ಖೋತಾ ಬಜೆಟ್ಟನ್ನು ಸರಿದೂಗಿಸುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟು ಅನಂತರ ಈ ಬಿಲ್ಲಿನ ಮೇಲೆ ನನ್ನ ಅಭಿಪ್ರಾಯವನ್ನು ನೀಡುತ್ತೇನೆ.

ಪ್ರೊಬೇಷನರ್‌ಗಳ ವಿಚಾರವನ್ನು ನನ್ನ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ದಿವಸ ತಾನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮರಾಮತ್ತು ಇಲಾಖೆಗೆ ಕೆಲವು ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಅದೇಕೆ ಮಾಡಬೇಕೋ ಗೊತ್ತಿಲ್ಲ. ನಮ್ಮ ಬಜೆಟ್ಟು ಖೋತಾ ಆಗಿರುವಾಗ ಹೀಗೇಕೆ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕು ? ಆ ಮೇಲೆ ಸರ್ಕಾರಿ ಕಾರ್ಖಾನೆಗಳಿಂದ ಮತ್ತು ಸರ್ಕಾರದ ಸಹಾಯಪಡೆದ ಕಾರ್ಖಾನೆಗಳಿಂದ ಲಾಭ ಪಡೆಯತಕ್ಕ ನೀತಿ ಸರಿಯಾಗಿಲ್ಲವೆಂದು ಹೇಳಬಯಸುತ್ತೇನೆ.

ಮರಾಮತ್ತು ಇಲಾಖೆಯಲ್ಲಿ ಕೆಲಸ ದಕ್ಷತೆಯಿಂದ ನಡೆಯದೆ ವಿಶೇಷ ಹಣ ಪೋಲಾಗುತ್ತಿದೆ. ಒಂದು ವರ್ಷದಲ್ಲಾಗುವ ಕೆಲಸವನ್ನು 10 ವರ್ಷಗಳು ಎಳೆದುಕೊಂಡು ಹೋಗಿ ಖರ್ಚು ಒಂದಕ್ಕೆರಡರಷ್ಟಾಗುವುದಕ್ಕೆ ಕಾರಣವಾಗಿದೆ. ಉದಾಹರಣೆಗೆ ಹೇಳುವುದಾದರೆ ಮಂಡ್ಯ ಜಿಲ್ಲೆಯಲ್ಲಿ ಹೆಬ್ಬಳ್ಳಕ್ಕೆ ಒಂದು ಪಿಕ್-ಅಪ್ ಹಾಕಲು 1945 ರಲ್ಲಿ 11 ಲಕ್ಷ 50 ಸಾವಿರ ರೂಪಾಯಿಗಳಿಗೆ ಅಂದಾಜುಮಾಡಿದ್ದು ಆಗಲೇ ಕೆಲಸವನ್ನು ಬೇಗ ನಡೆಸದ ಕಾರಣ 1952-53 ರಲ್ಲಿ ಅದಕ್ಕೆ 33 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಇನ್ನೂ ಕೆಲಸ ಪೂರ್ತಿ ಯಾಗಲಿಲ್ಲ. ಆದ್ದರಿಂದ ಮರಾಮತ್ತು ಇಲಾಖೆಯವರು ಇಂಥ ಒಂದು ಉದಾಸೀನ ಭಾವನೆಯಿಂದ ಸರ್ಕಾರದ ಹಣವನ್ನು, ರೈತರ ಹಣವನ್ನು ಸೂರೆಗೊಳ್ಳುತ್ತಾ ಉಲ್ಬಣವಾಗಿ ಅಂದಾಜಾವನ್ನು ಬೆಳೆಸಿಕೊಂಡು ಕಾರ್ಯಗಳನ್ನು ಬೇಗ ಬೇಗ ಮುಗಿಸದಿರುವುದೇ ಹೆಚ್ಚು ಖರ್ಚಿಗೆ ಕಾರಣವಾಗಿದೆಯೆಂದು ಹೇಳಬಹುದು.

ತೆರಿಗೆಯ ವಿಚಾರವನ್ನು ಮಾನ್ಯ ಸದಸ್ಯರುಗಳು ಆಗಲೇ ಹೇಳಿದ್ದಾರೆ. ಈಗಾಗಲೇ ತೆರಿಗೆಯ ಹೊರೆ ಜನರು ಹೊರಲಾರದಷ್ಟಾಗಿದೆ. ಇನ್ನೂ ಹೆಚ್ಚಿಗೆ ತೆರಿಗೆ ಹಾಕಿ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕಾಗಿ ಹಣ ಉಳಿತಾಯದ ಯೋಜನೆಯನ್ನು ಕೈಕೊಂಡಿದ್ದೇವೆಂದು ಹೇಳಿದರು. ಆದರೆ ಅವು ಯಾವುವೂ ಪ್ರಯೋಗಕ್ಕೆ ಬಂದಿರುವಂತೆ ಕಾಣುವುದಿಲ್ಲ; ಇನ್ನೂ ಜಾಗ್ರತೆ ಅವುಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ, ಇನ್ನು ಕಾಲಾವಕಾಶ ಹೆಚ್ಚಾಗಿಲ್ಲದಿರುವುದರಿಂದ, ಈ ಅಪ್ರೋಪ್ರಿಯೇಷನ್ ಬಿಲ್ಲಿನಮೇಲೆ ಒಂದು ಮಾತನ್ನು ಮಾತ್ರ ಹೇಳಿ ಮುಗಿಸುತ್ತೇನೆ. ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ನೋಡಿದರೆ ಇದು ಆರ್ಥಿಕ ಅಭದ್ರತೆಯ ಅಮಂಗಳ ಸೂಚನೆಯ ಆಹ್ವಾನ ಪತ್ರಿಕೆಯಂತಿದೆಯೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು)—ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಆಯವ್ಯಯದ ಅಂದಾಜಿನ ಬಗ್ಗೆ ಮಾತನಾಡಬೇಕೆಂಬ ಆಸಕ್ತಿ ನನಗಿರಲಿಲ್ಲ. ಆದರೂ ಕೂಡ ಒಂದಂಶವನ್ನು ಅನಿವಾರ್ಯವಾಗಿ ಸರಿಪಡಿಸಬೇಕಾಗಿ ಬಂದಿರುವುದರಿಂದ ನಾನೀಗ ನಿಂತಿದ್ದೇನೆ. ಅಧ್ಯಕ್ಷರು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ನನ್ನ ವಂದನೆಗಳು. ಈ ಆಯವ್ಯಯದ ಅಂದಾಜು ನಿಜವಾಗಿಯೂ ಪ್ರಗತಿಪರವಾದ ಸರ್ಕಾರ ಮಾಡುವ ಅಂದಾಜಿಗೆ ಖಂಡಿತವಾಗಿ ಹೋಲುತ್ತದೆಂದು ಹೇಳ

ಬೇಕಾಗಿದೆ. ಉದಾಹರಣೆಗೆ ಒಂದೆರಡು ವಿಷಯಗಳನ್ನು ನಮೂದಿಸುವುದಾದರೆ ಕ್ಷಾಮನಿವಾರಣಾ ಕಾರ್ಯಗಳಿಗಾಗಿ 20 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಶ್ಲಾಘನೀಯವಾಗಿದೆ. ಎಲ್ಲಾ ಕಡೆಯಲ್ಲೂ ಕಾಮಗಾರಿಗಳನ್ನು ಮಾಡಬೇಕೆಂದು ಹೇಳಿದಪ್ರಕಾರ ಕೆಲಸಗಳನ್ನು ಮಾಡಿದ ಮೇಲೆ, ಕಂಟ್ರಾಕ್ಟರುಗಳು ತಮ್ಮ ಬಿಲ್ಲಿನ ತೀರ್ವೆಗಾಗಿ ಆಫೀಸಿಗೆ ತಿರುಗುತ್ತಿರುವ ಕಾಲದಲ್ಲಿ, ಅವರಿಗೆ ಹಣ ಕೊಡುವುದಕ್ಕೆ ಸದ್ಯಕ್ಕೆ ಯಾವ ಏರ್ಪಾಡೂ ಇಲ್ಲದ ಸಂದರ್ಭದಲ್ಲಿ, ತಾವು ಈ ಶಾಸನ ಸಭೆಯ ಮುಂದೆ ಇಂಥ ಒಂದು ಅಂದಾಜನ್ನು ಮುಂದಿಟ್ಟು, 20 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿ, ಪುನಃ ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಆ ಕಾಮಗಾರಿಗಳನ್ನು ಪೂರೈಸುತ್ತಾರೆಂಬ ಸಂತೋಷವಾರ್ತೆಯನ್ನು ತಿಳಿಸತಕ್ಕ ಅವಕಾಶ ಕೊಟ್ಟಿದ್ದೀರಿ. ಇದಕ್ಕಾಗಿ ಸರ್ಕಾರದವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಕೆಲಸಮಾಡುತ್ತಿರುವವರಿಗೂ, ಕೂಲಿಗಾರರಿಗೂ, ಕಂಟ್ರಾಕ್ಟರುಗಳಿಗೂ, ಪ್ರತಿಯೊಬ್ಬರಿಗೂ ಇದು ಮನಸ್ಸಿಗೆ ಸಮಾಧಾನವನ್ನು ಕೊಡುವಂಥದಾಗಿದೆ.

ಆ ಮೇಲೆ 45ನೆಯ ಬಾಬಾದ ಲೋನ್‌ಗಳು ಮತ್ತು ಅಡ್ವಾನ್ಸ್‌ಗಳು ಎಂಬ ಬಾಬಿನಲ್ಲಿ ಸರ್ಕಾರದವರು ಬಹಳ ಆಲೋಚನೆಮಾಡಿ ಅನೇಕ ಮಾನ್ಯಸದಸ್ಯರ ಕೋರಿಕೆಗಳನ್ನು ಈಡೇರಿಸುವುದಕ್ಕಾಗಿ, ನೀರಿನ ಸೌಲಭ್ಯಗಳನ್ನು ಹೆಚ್ಚು ಹೆಚ್ಚಿಗೆ ಒದಗಿಸಿ ಕೊಡಲು ಸಾಲವಾದರೂ ಎತ್ತಿ ಕೊಡುತ್ತೇವೆಂದು ಹೇಳಿ, 58 ಲಕ್ಷ ರೂಪಾಯಿಗಳನ್ನು ಒದಗಿಸಿ ಸಹಾಯಹಸ್ತವನ್ನು ನೀಡಿರುವುದು ಶ್ಲಾಘನೀಯವಾಗಿದೆ.

ಆ ಮೇಲೆ ಇನ್ನೊಂದು ಮುಖ್ಯವಾಗಿ ಹೇಳಲೇಬೇಕಾಗಿರುವ ವಿಚಾರವೆಂದರೆ, 42ನೆಯ ಐಟಂನಲ್ಲಿ capital outlay on electricity schemes ಎಂದು 30 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ ಮತ್ತು ಅದಕ್ಕೆ ವಿವರಣೆ ಕೊಡುತ್ತಾ ಇಂಥ ಹಣಕಾಸಿನ ದುಸ್ಥಿತಿಯ ಕಾಲದಲ್ಲೂ ಕೇಂದ್ರ ಸರ್ಕಾರದಿಂದ ಬರುವ ಸಾಲದ ಮೊಬಲಗಿನಲ್ಲಿ ಈ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಮೊದಲೇ 20 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದರ ಜೊತೆಗೆ ಈ ಮೂವತ್ತು ಲಕ್ಷರೂಪಾಯಿಗಳೂ ಸೇರಿ 50 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದ್ದಾರೆ. ಈ ಒಂದು ಅಂಶ ಸ್ವಲ್ಪ ಮಟ್ಟಿಗೆ, ವಿಶೇಷವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಎಲ್ಲರೂ ಒತ್ತಾಯ ಮಾಡುವ ಈ ಕಾಲದಲ್ಲಿ ತಮ್ಮ ಆಸೆಯನ್ನು ಮೊಟಕುಮಾಡುತ್ತದೆಂಬ ಶಂಕೆಯನ್ನುಂಟು ಮಾಡಿದೆ. ನಾವು ನಿರೀಕ್ಷಣೆಮಾಡಿದ್ದು ಜನರಲ್ ಬಡ್ಜೆಟ್ಟಿನಲ್ಲಿ ಒದಗಿಸಿದ್ದ 20 ಲಕ್ಷ ರೂಪಾಯಿಗಳನ್ನು ಸ್ಟೇಟ್ ಬಡ್ಜೆಟ್ಟಿನಿಂದ ಕೊಡುತಾರೆಂದು ತಿಳಿದಿದ್ದೆವು; ಮತ್ತು ಈ 50 ಲಕ್ಷ ರೂಪಾಯಿಗಳನ್ನು ಚಿತ್ರದುರ್ಗ, ಕೋಲಾರ, ತುಮಕೂರು ಮುಂತಾದ ಕ್ಷಾಮಪೀಡಿತ ಪ್ರದೇಶಗಳಿಗೆ earmark ಮಾಡಿಕೊಟ್ಟಿದ್ದಾರೆಂದು ತಿಳಿದಿದ್ದೆವು; ಆದ್ದರಿಂದ ಈಗ 50 ಲಕ್ಷ ರೂಪಾಯಿಗಳಲ್ಲಿ 30 ಲಕ್ಷ ರೂಪಾಯಿಗಳು ಕಡಮೆಯಾಯಿತಲ್ಲಾ ಎಂದು ವ್ಯಥೆಯುಂಟಾಗಿದೆ. ಆದರೂ ಸರ್ಕಾರವು ಹಣಕಾಸಿನ ಮುಗ್ಗಟ್ಟಿನ ಸ್ಥಿತಿಯಲ್ಲಿರುವಾಗ ಅವರ ಸ್ಥಿತಿಯನ್ನೂ ನೋಡಿಕೊಳ್ಳಬೇಕಾದದ್ದು ಅವಶ್ಯಕ. ಅಲ್ಲದೆ, ಈ ವರ್ಷದಲ್ಲಿ ಇನ್ನು ಕೇವಲ 3-4 ತಿಂಗಳುಗಳು ಮಾತ್ರವಿದ್ದು ಪಬ್ಲಿಕ್ ವರ್ಕ್ಸ್ ಕಾಮಗಾರಿಗಳ ಕೆಲಸ ಪೂರೈಸದೆ ಹಣ ಲ್ಯಾಪ್ಸಾಗುವ ಸನ್ನಿವೇಶವಿರುವುದರಿಂದ ಸ್ವಲ್ಪ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಆದಾಗ್ಗೂ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನಾವು ನೋಡುತ್ತಿರುವ ಹಾಗೆ ಸ್ವಲ್ಪಮಟ್ಟಿಗೆ ತೃಪ್ತಿಕರವಾಗಿ ಕೆಲಸಗಳು ನಡೆಯುತ್ತಿದ್ದು ಹೆಚ್ಚಿಗೆ ಹಣದ ಅವಶ್ಯಕತೆಯಿರುವುದರಿಂದ ಮುಂದೆ ಬರುವ ರಿ-ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿಯಾದರೂ ಹೆಚ್ಚಿನ ಹಣ ತೋರಿಸಿ, ಅದರಲ್ಲೂ ಕ್ಷಾಮಪೀಡಿತ ಪ್ರದೇಶಗಳಲ್ಲಿ ಗ್ರಾಮಾಂತರ ಭಾಗಗಳಿಗೆ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸುತ್ತಾ, ಒಟ್ಟಿನ ಮೇಲೆ ತೃಪ್ತಿಕರವಾಗಿರುವ ಈ ಆಯವ್ಯಯದ ಅಂದಾಜಿನ ಅಪ್ರೋಪ್ರಿಯೇಷನ್

(ಶ್ರೀ ವಿ. ಮುನಿಯಪ್ಪ)

ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಎದುರು ಪಕ್ಷದ ನಾಯಕರ ವಿಚಾರದಲ್ಲಿ ನನಗೆ ಬಹಳ ಗೌರವ ಇತ್ತು. ಏತಕ್ಕೆ ಎಂದು ಹೇಳಿದರೆ, ಬರಿ ಅಸೆಂಬ್ಲಿ ಸದಸ್ಯರಾಗಿರುವುದರ ಜೊತೆಗೆ, ಕೌನ್ಸಿಲ್ ಸದಸ್ಯರಾಗಿದ್ದುದರ ಜೊತೆಗೆ, ಮಂತ್ರಿಗಳೂ ಕೂಡಾ ಆಗಿದ್ದರು. ಆದುದರಿಂದ ಸರ್ಕಾರದ ವಿಷಯದಲ್ಲಿ ಚೆನ್ನಾಗಿ ತಿಳಿದುಕೊಂಡು ಮಾತನಾಡತಕ್ಕಂಥ ಶಕ್ತಿ, ಅನುಭವ, ಪರಿಣತೆ ಇದೆ ಎಂದು ತಿಳಿದುಕೊಂಡು, ನಾನು ಅವರ ವಿಷಯದಲ್ಲಿ ಬಹಳ ಮೆಚ್ಚುಗೆಯನ್ನು ಪಡೆದವನಾಗಿದ್ದೆನು. ಈಗಲೂ ಇದೆ...

ಶ್ರೀ ಜೆ. ಮುಹಮ್ಮದ್ ಇಮಾಂ.—ನಾನು ಮಾತನಾಡುವಾಗ Finance Minister ಹಾಜರಿದ್ದರೋ ಗೈರುಹಾಜರಿದ್ದರೋ ಗೊತ್ತಿಲ್ಲ.

ಶ್ರೀ ಕೆ. ಹನುಮಂತಯ್ಯ.—ಅವರು ಕೇಳಿದರು, ಇನ್ನೊಬ್ಬ ಸದಸ್ಯರೂ ಕೇಳಿದರು, Consolidated Fund ಎಲ್ಲಿ ಇದೆ ಎಂದು.

ಶ್ರೀ ಎಂ. ಶಂಕರಲಿಂಗೇ ಗೌಡ.—ಎಷ್ಟು ರೂಪಾಯಿಗಳಿವೆ?

ಶ್ರೀ ಕೆ. ಹನುಮಂತಯ್ಯ.—ಎಷ್ಟು ರೂಪಾಯಿಗಳಿವೆ ಎಂದು, ಕೇಳಿದರು. ಒಂದು ಉದಾಹರಣೆಕೊಟ್ಟು ಹೇಳುತ್ತೇನೆ. Absent-minded people ತಮ್ಮ ಕನ್ನಡಕವನ್ನು ಹಣೆಯ ಮೇಲಿಟ್ಟುಕೊಂಡು ಹಗಲೆಲ್ಲಾ ಹುಡುಕುತ್ತಾರೆ, "ಕನ್ನಡಕ ಎಲ್ಲಿ, ಕನ್ನಡಕ ಎಲ್ಲಿ" ಎಂದು. ಆದರಂತೆಯೇ ಶ್ರೀ ಇಮಾಂ ಸಾಹೇಬರು.

Government of Mysore Finance Department Budget Memorandum, 1952-53ರ ಮೊದಲನೆಯಪುಟದಲ್ಲಿ Consolidated Fund ಏನು ಎಂಬುದನ್ನು print ಮಾಡಿದ್ದಾರೆ; print ಮಾಡಿರುವುದನ್ನು ಓದಿ ನೋಡದೆ, ಎಲ್ಲಿದೆ, ಎಲ್ಲಿದೆ ಎಂದು ಪರಿತಾಪಪಟ್ಟುಕೊಂಡು ಕೇಳಿದರು. ಅವರಲ್ಲಿ ನನಗೆ ವೈಯಕ್ತಿಕ ಗೌರವ ಇದ್ದರೂ, ಇಷ್ಟು ಅನುಭವ ಇದ್ದೂ, ಮಂತ್ರಿಗಳಾಗಿ ಕೆಲಸ ಮಾಡಿಯೂ ಇಂಥ ಸಣ್ಣ ವಿಷಯ ತಿಳಿದುಕೊಂಡಿಲ್ಲವಲ್ಲಾ ಎಂದು ಪಶ್ಚಾತ್ತಾಪಪಡಬೇಕಾಗಿದೆ. ಆ ಮೆಮೋರ್ಯಾಂಡಂನಲ್ಲಿ ಹೀಗೆ ಹೇಳಿದೆ:

> "In accordance with the provisions of the Constitution of India, separate accounts have to be maintained for the Consolidated Fund, Contingency Fund and Public accounts of the State. The Consolidated Fund comprises:—
>
> (1) Revenue receipts and expenditure;
> (2) Capital expenditure outside the Revenue account
> (3) Receipt from Loans raised in open market or from Government of India or otherwise, such as, Ways and Means advances, issue of Treasury Bills, etc., and their repayments;
> (4) Loans and advances bearing interest by State Government including recoveries."

ಆದುದರಿಂದ Consolidated Fund ಎಂಬುದು ಅಠಾರ ಕಚೇರಿಯಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಎಲ್ಲಿಯೂ ಇಟ್ಟಿಲ್ಲ. ಅದು Technical name. I very much wish that a man of his stature and experience in life knew this fact....

ಶ್ರೀ ಜೆ. ಮುಹಮ್ಮದ್ ಇಮಾಂ.—Consolidated Fund ನಲ್ಲಿ ಎಷ್ಟು ಹಣ ಇದೆ ಎಂದು ನಾನು ಕೇಳುತ್ತಾ ಇರುವುದು.

SRI K. HANUMANTHAIYA.—Instead of asking questions, if you read, you will understand and then all your questions, queries and doubts will become wholly unnecessary.

SRI B. HUTCHE GOWDA.—The assets of the whole State are there.

SRI K. HANUMANTHAIYA.—I am glad your Deputy knows much more about it than the Leader of the Opposition himself.

Sri J. MAHOMED IMAM.—Including your property and my property even!

ಶ್ರೀ ಕೆ. ಹನುಮಂತಯ್ಯ.—ನಾನು ಸಭೆಯಲ್ಲಿ ಬಿನ್ನವಿಸಿಕೊಳುವುದೇನೆಂದರೆ: 'ಸಂಸ್ಥಾನದ ಹಣಕಾಸಿನಸ್ಥಿತಿ ಬಹಳದುಃಸ್ಥಿತಿಗೆ ಇಳಿದಿದೆ; ಬಡ್ಜೆಟ್ ಖೋತಾ ನೀವೇ ಒಂದು ಕೋಟಿ deficit ಇದೆಎಂದು ಹೇಳಿದಿರಿ, ಅದು ಸರಿಯಲ್ಲ; 9 ಕೋಟಿ ಇದೆ ಎಂಬ ವಾದ ನಾನು ಮೊದಲು ಹೇಳಿದ ಜಾತಿಗೆ ಸೇರಿದ್ದು. ಇನ್ನೂ ಎರಡು ಮೂರು technical points ಇವೆ. ಅವನ್ನು ಬರವಣಿಗೆ ಮೂಲಕ ಓದುವುದಕ್ಕೆ ತಮ್ಮ ಅಪ್ಪಣೆ ಕೇಳುತ್ತೇನೆ.

Sri Mahomed Imam has referred to Appropriation No. 2 Act and stated that the total normal expenditure is about Rs. 22·91 crores, whereas according to the Budget Estimates, the expenditure is shown as Rs. 21 crores. Reference is invited to Voted items 36 to 39 on page 4 of the Act. These aggregate to Rs. 188·61 lakhs which represent working expenses and according to accounting arrangement this expenditure has been shown as reduction of revenue taking into account only net receipts in the Budget Estimates. Reference is invited to pages 22, 24, 41 and 50. In all these cases, if the expenditure which represents working expenses has been included in the expenditure side, the receipt also would have correspondingly increased and there would not have been any change in the position.

The next point referred to was about our utilising Savings Bank and other deposits for capital works. It has been the recognised practice for a number of years that these funds are meant for expenditure on productive capital works and for financing Government Ways and Means position. This is no unusual practice of the Government today and even in the recent Finance Minister's Conference, the proposal was discussed and all Governments agreed to encourage savings scheme and to make available funds for the five-year plan. After all, these savings schemes, including Insurance, are only one of the recognised forms of public debt and so long as prescribed percentage of investment is there, there is nothing wrong in utilising these funds and this is a long established practice in all civilised Governments.

It surprises me, Sir, that in spite of my pointing out specific resources for the supplementary grants in my speech, the other day, objections should have been taken even now. It is true that the Government of India may be raising 2 to 3 crores of rupees under Excise duties. Even before integration, that Government was realising this amount from the State and the State was allowed only a share on population or consumption basis on the excise duty collections. Whatever the amount the State was getting has been included in the net revenue gap and I can assure the House that the figure of Rs. 345 lakhs is a very fair figure to be taken in this account. As regards the general complaint that future increase in revenue in the Federal Departments did not accrue to the State, the position is that in integrating States, a uniform rule has been made acceptable to them all and it is not a practical suggestion to ask the Government of India to surrender to the State all that they realise from this source from year to year. Guaranteed amount of the net revenue gap could only be on the basis of the revenue which then existed. Any relaxation of this agreement is a matter for negotiation with the Centre by all the States.

ಸ್ವಾಮಿ, ಒಂದು ವಿಷಯವನ್ನು ಪ್ರಸ್ತಾಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅನೇಕ ಮಾನ್ಯ ಸದಸ್ಯರು, ಒಳ್ಳೆಯ ಉದ್ದೇಶದಿಂದ ಕೂಡ, ಮೈಸೂರು ಸರ್ಕಾರದವರು ಹಿಂದೆ ಇಂಡಿಯಾ ಸರ್ಕಾರದವರೊಡನೆ ಏನು ಒಂದು Financial integration ಎಂದು ಹೇಳಿ ಒಪ್ಪಂದಕ್ಕೆ ಬಂಧಿದ್ದಾರೋ, ಅದು ಸಂಸ್ಥಾನಕ್ಕೆ ಅಷ್ಟು ಪ್ರಯೋಜನಕರವಾಗಿಲ್ಲ ಎಂಬ ವಾದವನ್ನು ಪದೇ ಪದೇ ಹೇಳುತ್ತಿದ್ದಾರೆ. ನಾನು ಈ ವಿಷಯವನ್ನು ಒಳಹೊಕ್ಕು ನೋಡುವುದಕ್ಕಿಂತ ಮೊದಲು ಇದು ನಮ್ಮ ಮನಸ್ಸಿಗೂ ಹಾಗೆಯೇ ಅನ್ನಿಸುತ್ತಿತ್ತು. ಆದರೆ ಈ ವಿಷಯವನ್ನು ಎಲ್ಲಾ ಕೂಲಂಕಷವಾಗಿ ಪರಶೀಲನೆ ಮಾಡಿದ ಮೇಲೆ, ಈ ವಿಷಯದಲ್ಲಿ ಇಂಡಿಯಾ

(ಶ್ರೀ ಕೆ. ಹನುಮಂತಯ್ಯ)

ಸರ್ಕಾರದವರೊಡನೆ ಕಾಗದ ಪತ್ರ ವ್ಯವಹಾರ ನಡೆಸಿ, ಅವರ ಅಭಿಪ್ರಾಯವನ್ನು ತಿಳಿದುಕೊಂಡಮೇಲೆ, ಹಿಂದಿನ ಮಂತ್ರಿಮಂಡಲದವರು ಏನು financial integration ಮಾಡಿದ್ದಾರೋ, ಅದು ದೇಶಕ್ಕೆ ಅನ್ಯಾಯವನ್ನಾಗಲಿ ಅಥವಾ ನಷ್ಟವನ್ನಾಗಲಿ ಉಂಟು ಮಾಡಲಿಲ್ಲ ಎಂದು ಘಂಟಾ ಘೋಷವಾಗಿ ಹೇಳುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡ.—ಹಾಗಾದರೆ, ಮೈಸೂರು ದೇಶದಿಂದ ಇಂಡಿಯಾ ಗವರ್ನಮೆಂಟಿಗೆ ಎಷ್ಟು ಹೋಗುತ್ತದೆ, ಅವರಿಗೆ ಎಷ್ಟು ಖರ್ಚಾಗುತ್ತದೆ, ನಮಗೆ ಏನು ಕೊಡುತ್ತಾರೆ ಎಂಬ ವಿಷಯ ಹೇಳಿ.

ಶ್ರೀ ಕೆ. ಹನುಮಂತಯ್ಯ.—345 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ, ತಮಗೆ ಗೊತ್ತೇ ಇದೆ. ಮೈಸೂರು ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರ ವರ್ಗದವರು ಒಂದು ಕಡೆ, ಇಂಡಿಯಾ ಸರ್ಕಾರದ ಅಧಿಕಾರಗಳು ಒಂದು ಕಡೆ ಕುಳಿತು ಎಲ್ಲಾ ಲೆಖ್ಖಗಳನ್ನೂ ಹಾಕಿ 345 ಲಕ್ಷ ರೂಪಾಯಿಗಳನ್ನು ವರ್ಷಂಪ್ರತಿ ಕೊಡಬೇಕೆಂದು, ಅದು graduated scaleನಲ್ಲಿ ಕಡಮೆಯಾಗತಕ್ಕದೆಂದೂ ಒಪ್ಪಿಕೊಂಡಿದ್ದಾರೆ. ಆ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಕಾಂಗ್ರೆಸ್ ಆಗಲಿ ನಾನ್-ಕಾಂಗ್ರೆಸ್ ಆಗಲಿ ಯಾವ ಪಕ್ಷದವರೇ ಆಗಲಿ ನೀವು ಯಾರಾದರೂ ಕೂಡ, ನಮಗೆ ಬರತಕ್ಕಂಥದನ್ನು ಇಂಡಿಯಾ ಸರ್ಕಾರಕ್ಕೆ ಬಿಟ್ಟುಕೊಟ್ಟರು ಎಂದು ಹೇಳತಕ್ಕ ಮಾತು ಸರ್ವಥಾ ಸಮಂಜಸವಾದುದಲ್ಲ ಆ ರೀತಿ ಆರೋಪಣೆ ಮಾಡಿದರೆ, ಸುಮ್ಮನೆ ಆರೋಪಣೆಯಾಗುತ್ತದೆಯೇ ಹೊರತು, ಅದರಲ್ಲಿ ವಾಸ್ತವಾಂಶ ಏನೂ ಇರುವುದಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡ.—Facts ಕೊಟ್ಟರೆ, ಗೊತ್ತಾಗುತ್ತದೆ. ಹೋದ ವರ್ಷ ನಮ್ಮ ದೇಶದಿಂದ Government of India ಕ್ಕೆ ಎಷ್ಟು ಹಣ ಹೋಯಿತು ಎಂದು ಹೇಳಿ.

Sri K. HANUMANTHAIYA.—If there was necessity I would have joined issue with you. In fact, if an opportunity comes, if your feelings are to be allayed, I am prepared to call for a conference and convince you on that subject.

Sri L. SIDDAPPA.—I wish you do so, because we still entertain some views and some impressions about it.

Sri M. SHANKARLINGE GOWDA.—What is the present revenue realised from Mysore by the Government of India, from Income-tax? What is the revenue realised by the Government of India from Central Excise? What is the revenue realised by Government of India as a result of customs duties and railways? What is the total revenue and duties which the Government of India is getting? What is the proportion of revenue given to us? These are the facts which we want.

Sri L. SIDDAPPA.—There is no justification in our handing over 2 crores 40 lakhs of rupees over and above the specified amount by way of Railway Depreciation fund. Do you justify the allocation of public debt of Mysore and the basis of productive and unproductive assets on which the previous Ministry transacted this affair?

Mr. SPEAKER.—That cannot be discussed on this occasion. There will be other opportunities in future. Further, on three or four occasions in the past two years, this subject has been discussed. Anyhow, this is not the occasion.

Sri B. HUTCHE GOWDA.—This may be discussed on a future occasion.

Sri K. HANUMANTHAIYA.—I did not raise this subject. ಈ ದಿವಸ ಈ ವಿಷಯವನ್ನು ಪ್ರಸ್ತಾಪ ಮಾಡಿದರೆ, ಅದೇ ಒಂದು ದೀರ್ಘ ಚರ್ಚೆಯಾಗುತ್ತದೆ, ಆಗ ನನಗೂ ಕೂಡ ಒಂದೆರಡು ಗಂಟೆಗಳ ಕಾಲ ಬೇಕಾಗುತ್ತದೆ.

Sri J. MOHAMED IMAM.—We want to help you.

ಶ್ರೀ ಕೆ. ಹನುಮಂತಯ್ಯ.—ಚರ್ಚೆ ಮಾಡಬೇಕಾದ ವಿಷಯಕ್ಕೆ ಕಾಲ ಬೇಕಾದಷ್ಟು ಇದೆ; ಆಗ ಮಾಡೋಣ. ಇಷ್ಟುಮಾತ್ರ ಹೇಳುತ್ತೇನೆ: Financial integration ನಲ್ಲಿ ಪ್ರತಿ ದಿವಸ

ಆರೋಪಣೆ ಮಾಡಿದ ಹಾಗೆ, ಅನ್ಯಾಯ ಏನೂ ಆಗಿಲ್ಲ. ಒಂದು ವೇಳೆ 345 ಲಕ್ಷ ರೂಪಾಯಿಗಳಿಗೆ ಬದಲಾಗಿ 350 ಲಕ್ಷ ಅಥವಾ 360 ಲಕ್ಷ ತೆಗೆದುಕೊಳ್ಳಬೇಕು ಎಂಬ ವಿಷಯದಲ್ಲಿ ಚರ್ಚೆಗೆ ಅವಕಾಶ ಇದ್ದರೂ ಇರಬಹುದು. ಆದರೆ ಈ ವಿಷಯದಲ್ಲಿ ಮೈಸೂರಿಗೆ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ಪದೇ ಪದೇ ಆಡುತ್ತಾ ಇದ್ದರೆ, ಅದರಿಂದ ಪ್ರಯೋಜನವೇನೂ ಆಗುವುದಿಲ್ಲ. ಮತ್ತೊಂದು ವಿಷಯ ಹೇಳುತ್ತೇನೆ.

Sri M. LINGANNA.—On a point of information.

Mr. SPEAKER.—The speaker is not yielding.

ಶ್ರೀ ಕೆ. ಹನುಮಂತಯ್ಯ.—I am not yielding. ಹಾಗೆಯೇ Gold duty ವಿಷಯದಲ್ಲಿ Gold Mining Company ಗಳ ಜೊತೆಗೆ ಒಂದು ಒಪ್ಪಂದವಾಗಿದೆ. ಆ ವಿಷಯದಲ್ಲಿಯೂ ಕೂಡ ನಾವು ಏನು ಆರೋಪಣೆಗಳನ್ನು ಮಾಡುತ್ತಿದ್ದೇವೋ ಮತ್ತು ಅನುಮಾನಗಳನ್ನು ಇಟ್ಟುಕೊಂಡಿದ್ದೇವೋ ಅವಕ್ಕೆ ಅವಕಾಶವಿಲ್ಲ. ಆ ವಿಷಯವನ್ನು ಈ ಹಿಂದೆ ಎಷ್ಟೋ ಸಲ ಪ್ರಸ್ತಾಪ ಮಾಡಿದ್ದೇವೆ. ಎಲ್ಲಾ ಪಕ್ಷದವರೂ ಶಾಸನಸಭೆಗಳಲ್ಲಿ ಅದನ್ನು ಚರ್ಚೆ ಮಾಡಿದ್ದಾರೆ. ಪುನಃ ಪ್ರಸ್ತಾಪ ಮಾಡಬೇಕಾಗಿ ಬಂದಾಗ ಮಾಡೋಣ. ಆ ವಿಷಯದಲ್ಲಿ ಕೂಡ ಮಾನ್ಯ ಸದಸ್ಯರಿಗೆ ಹೇಳತಕ್ಕಂಥಾದ್ದು, ಮೈಸೂರು ಸರ್ಕಾರದ ಹಿತ ಮಾರಿಕೊಂಡು ಹೋಗಲಿ ಎಂದು ಯಾರಿಗೂ ಬಿಟ್ಟಿಲ್ಲ.

4-30 P. M.

ಸ್ವಾಮಿ, ಈ ಸಪ್ಲಿಮೆಂಟರಿ ಗ್ರಾಂಟಿನಲ್ಲಿ ಎಲ್ಲಕ್ಕಿಂತಲೂ ಪ್ರಾಮುಖ್ಯವಾದ ವಿಚಾರವೆಂದರೆ, ಮುನಿಸಿಪಾಲಿಟಿಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸಹಾಯಮಾಡತಕ್ಕ ವಿಚಾರ. ಇದೊಂದು ಹೊಸ ನೀತಿಯಾಗಿದೆ. ಮಿಕ್ಕೆಲ್ಲ ಬಾಬುಗಳೂ ಸಾಮಾನ್ಯವಾದ adjustments. ಇದೊಂದು ಮಾತ್ರ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಸರ್ಕಾರದವರು ಹಾಕಿರುವ ಒಂದು ಹೊಸಹಾದಿ. ಮೊನ್ನೆ ನಾನು ನನ್ನ ಭಾಷಣದಲ್ಲಿ ಪ್ರಸ್ತಾಪಮಾಡಿದ ಹಾಗೆ, ನಮ್ಮ ಸ್ಥಳೀಯ ಸಂಸ್ಥೆಗಳ ಅವಶ್ಯಕತೆಗಳು ಬೆಳೆದು, ಐದೂವರೆ ಕೋಟಿ ರೂಪಾಯಿಗಳವರೆಗೆ ಅವುಗಳಿಗೆ ಹಣ ಬೇಕಾಗಿದೆ. ಆದಕಾರಣ ಈ ವರ್ಷ ಸಾಲದ ರೂಪದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಅವುಗಳಿಗೆ ಒದಗಿಸಬೇಕೆಂಬುದು ಸರ್ಕಾರದ ನೀತಿಯಾಗಿದೆ. ಖರ್ಚುಮಾಡತಕ್ಕ ಕಾಲಾವಕಾಶ ಸ್ವಲ್ಪವೇ ಇರುವುದರಿಂದ ಇಷ್ಟು ಮಾತ್ರ ಹಣವನ್ನೊದಗಿಸುವುದಕ್ಕೆ ಪ್ರಯತ್ನಮಾಡಿದ್ದೇವೆ. ವರ್ಷ ವರ್ಷವೂ ಕೂಡ ಪ್ರತಿಯೊಂದು ಪೌರಸಭೆಗೂ ಏನೇನು ಸೌಕರ್ಯ ಬೇಕೆಂಬುದನ್ನು ನೋಡಿ, ಒದಗಿಸಬೇಕೆಂಬ ತೀವ್ರಾಭಿಲಾಷೆ ಸರ್ಕಾರಕ್ಕಿದೆ. ಈ ಸಂದರ್ಭದಲ್ಲಿ ಸಾಲ ಮಾತ್ರ ಕೊಡಲಾಗಿದೆ. ಪೌರ ಪ್ರದೇಶಗಳಲ್ಲಿ ವಾಸಮಾಡುವವರು ನೀರು, ಒಳಚರಂಡಿ ಇಂಥ ವ್ಯವಸ್ಥೆಗಳ ಸೌಲಭ್ಯಗಳನ್ನು ಅನುಭವಿಸುತ್ತಾರೆ. ಹೀಗೆ ಯಾವ ಸೌಕರ್ಯಗಳನ್ನನುಭವಿಸುತ್ತಾರೋ ಅವಕ್ಕಾಗಿ ಅವರು ಸ್ವಲ್ಪ ಹಣ ಕೊಡತಕ್ಕದ್ದು ನ್ಯಾಯ. ಆ ಸೌಕರ್ಯಗಳನ್ನೊದಗಿಸಲು ತಕ್ಷಣ ಪೌರಸಭೆಗಳಲ್ಲಿ ಹಣವಿಲ್ಲದಿರುವುದರಿಂದ ಅವಕ್ಕಾಗಿ ಸಾಲ ಕೊಡಬೇಕಾಗಿದೆ. ಅವಕ್ಕೆ ಬೇಕಾಗಿರುವ ಐದು ಕೋಟಿ ರೂಪಾಯಿಗಳನ್ನು ಗ್ರಾಂಟು ರೂಪದಲ್ಲಿ ಕೊಡುವುದು ಅಸಾಧ್ಯವೆಂಬ ವಿಚಾರದಲ್ಲಿ ವಾದ ಮಾಡಬೇಕಾಗಿಲ್ಲ; ಇದು ಸ್ಪಷ್ಟವಾಗಿದೆ. ಗ್ರಾಂಟು ಕೊಡದಿದ್ದ ಮೇಲೆ ಸಾಲವನ್ನಾದರೂ ಕೊಟ್ಟು ಸುಲಭ ಕಂತುಗಳಲ್ಲಿ ಆ ಹಣವನ್ನು ಬರಮಾಡಿಕೊಂಡು ಹೋಗತಕ್ಕ ಒಂದು ವ್ಯವಸ್ಥೆ ಮಾಡಿ, ಎಲ್ಲ ಪೌರಸಭೆಗಳಲ್ಲಿಯೂ ಸಾಕಷ್ಟು ಸೌಕರ್ಯ ಅಲ್ಲಿನ ಜನರಿಗೆ ಒದಗುವಂತೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ ಮತ್ತು ತೀವ್ರಾಭಿಲಾಷೆ. ಈ ವಿಷಯದಲ್ಲಿ ನಾನು ದೀರ್ಘವಾದ ಭಾಷಣ ಮಾಡಬೇಕಾಗಿಲ್ಲ. ಮೊನ್ನೆಯ ದಿವಸ ಈ ಸಂಬಂಧವಾಗಿ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದೇನೆ. ಈಗ ಎಲ್ಲ ಆಕ್ಷೇಪಣೆಗಳಿಗೂ ಅನುಮಾನಗಳಿಗೂ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲವಾದುದರಿಂದ ಮುಖ್ಯವಾದ ಟೀಕೆಗಳಿಗೆ ಉತ್ತರ ಕೊಟ್ಟಿದ್ದೇನೆ.

MR. SPEAKER.—The question is :

"That the Mysore Appropriation (No. 3) Bill, 1952, be taken into consideration."

The motion was adopted.

MR. SPEAKER.—Clauses. Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

MR. SPEAKER.—Schedule. The question is :

"That the Schedule stands part of the Bill."

The motion was adopted.

The Schedule was added to the Bill.

MR. SPEAKER.—Clause 1. The question is :

"That Clause 1 stands part of the Bill."

The motion was adopted.

Clause 1 was added to the Bill.

MR. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

SRI K. HANUMANTHAIYA.—Sir, I move :

"That the Mysore Appropriation (No. 3) Bill, 1952, be passed."

MR. SPEAKER.—The question is :

"That the Mysore Appropriation (No. 3) Bill, 1952, be passed."

The motion was adopted.

Discussion on Question *re*: Application of the Essential Goods (Declaration and Regulation of Tax on Sale or Purchase) Act, 1952.

MR. SPEAKER.—We shall now take up the question raised by Sri J. Mohamed Imam, arising from Question No. 376.

*SRI J. MOHAMED IMAM (Jagalur).—Sir, I think that in the history of Mysore this is the first time that a point arising out of an answer given by the Government to a question is being discussed and now we find what a wholesome rule, Rule No. 39 of the Rules of Business, is.

SRI H. SIDDAVEERAPPA (Minister for Home Affairs and Agriculture).—There was a similar occasion.

SRI J. MOHAMED IMAM.—In this House I am saying. I must thank the Government for having agreed to participate in this debate, and also the Speaker. Question 376 aims at one important privilege that has been conferred on the people of India by an Act of Parliament known as The Essential Goods (Declaration and Regulation of Tax on Sale or Purchase) Act, which was passed in the year 1952. Prior to the passsing of this Act there was a relevant article in the Constitution itself which reads as follows and that article is article 286 (3) of the Constitution ;

"No law made by the Legislature of a State imposing, or authorising the imposition of, a tax on the sale or purchase of any such goods as have been declared by Parliament by law to be essential for the life of the community shall have effect unless it has been reserved for the consideration of the President and has received his assent."

This provision has been made in the Constitution itself wherein power has been taken by the President whether to allow the imposition of taxes, either it be Sales Tax or Purchase Tax, on such of the articles which have been considered necessary for human life and human community. This clause which is provided in the Constitution is mandatory and applies to the whole